
ವಾರ್ಷಿಕ ಚಂದಾ ರೂ.25/-

ಮಾಸಿಕ

# ಜನಪದ

ಸಂಪುಟ-06 • ಸಂಚಿಕೆ-10 • ಜುಲೈ 2023





# ಸಬಲೀಕರಣದತ್ತ ಮಹಿಳೆಯರ ಪಯಣ...

Downloaded From:www.kpscvaani.com



ಜೂನ್ 6 ರಂದು ದೇವರಾಜ್ ಅರಸು ಅವರ 41 ನೇ ಪುಣ್ಯತಿಥಿಯ ಅಂಗವಾಗಿ ವಿಧಾನಸೌಧದ ಆವರಣದಲ್ಲಿ ಮುಖ್ಯಮಂತ್ರಿ ಅವರು ಸುಮಾರು 40 ಅಡಿ ಎತ್ತರ ಬೆಳೆಯುವ ಮತ್ತು ಮಾಲಿನ್ಯ ತಡೆಗಟ್ಟುವ ಮಡಗಾಸ್ಕರ್ ದೇಶದ ವಿಶೇಷ ಗಿಡವನ್ನು ನೆಟ್ಟ ಸಂದರ್ಭ.



ಜೂನ್ 13 ರಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಸಾಹಿತಿ ಚಂದ್ರಶೇಖರ್ ಕಂಬಾರ ಅವರು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಸಂದರ್ಭ.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-10 • ಜುಲೈ 2023




**06** ಸಬಲೀಕರಣದತ್ತ ಮಹಿಳೆಯರ ಪಯಣ
• ನಂಜುಂಡಪ್ಪ. ವಿ

**11** ಗ್ಯಾರಂಟಿ ಯೋಜನೆಗಳಿಗೆ ಚಾಲನೆ ನೀಡುತ್ತಿರುವ ಸರ್ಕಾರ
• ಮಂಜುನಾಥ್ ಚಾಂದ್

**14** ಸಚಿವ ಸಂಪುಟದ ನೂತನ ಸಚಿವರ ಕಿರು ಪರಿಚಯ
• ಚಂದ್ರಮುಖಿ

**19** ಸಮಸ್ಯಾ ನಿರ್ವಹಣಾ ತಂತ್ರದಲ್ಲಿ ಸಂತೋಷ್‌ಲಾಡ್ ಮುಂಚೂಣಿಯಲ್ಲಿ...
• ಡಿ. ಪಿ. ಮುರಳೀಧರ್





**23** ವೈವಿಧ್ಯ ಮಾವು ಮತ್ತು ಹಲಸು ಮೇಳಕ್ಕೆ ಉತ್ತಮ ಜನಸ್ಪಂದನೆ
• ಡಾ. ವರ ಪ್ರಸಾದ್ ರಾವ್ ಪಿ.ವಿ

**25** ಜಮಖಂಡಿಯಲ್ಲೊಂದು ರೈತನ ತರಕಾರಿ ಪಾರ್ಕ್
• ಕಿಶನರಾವ್ ಕುಲಕರ್ಣಿ

**28** ಕೆಂಪು ಭೂಮಿಯಲ್ಲಿ ಕೊನರಿದ ಸೇಬು
• ಜಿ. ಚಂದ್ರಕಾಂತ

**30** ಹ್ಯಾಂಡಲೂಮ್ ಪ್ರವಾಸೋದ್ಯಮದತ್ತ ಬಾಗಲಕೋಟೆ
• ಮುತ್ತು ಹಳ್ಯದ

**32** ಇಟಗಿ ಮಹಾದೇವ ದೇವಾಲಯ
• ಪ್ರಹ್ಲಾದ ಪರ್ವತಿ

**34** ಆಗ ಬೇಕಿದೆ ಮನೆ ಮನೆಗಳಲ್ಲಿ ಮಳೆಕೊಯ್ಲು
• ಪ್ರವೀಣ್ ಚೆನ್ನಾವರ

**36** ಕೆರೆಮನೆ ಮೇಳಕ್ಕೆ ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರ
•ಮಂಜುನಾಥ ಭಟ್

**39** ಶ್ರವಣ ಸಮಸ್ಯೆ ನಿವಾರಣೆಗೆ ಶ್ರಮಿಸಿದ ಕಾಯಕ ಯೋಗಿ ಡಾ॥ ಪ್ರಾಣೇಶ್ ರಾವ್
• ಬಿ.ಎಸ್. ಪಲ್ಲವಿ

**41** ಜನಸಂಖ್ಯಾ ಸ್ಫೋಟಕ್ಕೆ ಹಾಕಬೇಕಿದೆ ಕಡಿವಾಣ
• ಬನ್ನೂರು ಕೆ. ರಾಜು

**44** ದನದ ಸಗಣಿಯಿಂದ ಆಟದ ಬೊಂಬೆಗಳು
• ಅನಿತಾ ಕುಲಕರ್ಣಿ





**47** ಸೊಪ್ಪಿನ ಬೆಟ್ಟದಲ್ಲಿ ಔಷಧೀಯ ವನ
• ಗಣಪತಿ ಹಾಸ್ಪುರ

**50** ಪದಬಂಧ-44



**ಪ್ರಧಾನ ಸಂಪಾದಕರು**
ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಸಿ. ಆರ್. ನವೀನ್
ಜಂಟಿ ನಿರ್ದೇಶಕರು
ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮಾ

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಕಳೆದ ಮಾಹೆಯ ವಾರ್ತಾ ಜನಪದ ಪತ್ರಿಕೆಯು ಸಮಯೋಚಿತವಾಗಿತ್ತು ಮತ್ತು ಸ್ಫೂರ್ತಿದಾಯಕವಾಗಿತ್ತು. ಈ ಸಂಚಿಕೆಯ ಮುಖಪುಟದಲ್ಲಿ ಪ್ರಕಟವಾದ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಪರಸ್ಪರ ಹಸ್ತಲಾಘವ ಮಾಡಿದ ಚಿತ್ರ ಸುಂದರವಾಗಿದ್ದು, ನನ್ನ ಮನವನ್ನು ಸೂರೆಗೊಂಡಿತು. ಸಂಪಾದಕೀಯದ ಆಶಯ ನುಡಿ ಪತ್ರಿಕೆಯ ಪ್ರಸ್ತುತ ಧ್ಯೇಯ ದೋರಣೆಗಳನ್ನು ಮನಮುಟ್ಟುವಂತೆ ತಿಳಿಸಲು ಸಮರ್ಥವಾಯಿತು. 'ಸಿದ್ಧ ಶೈಲಿಯ ದಿಗ್ವಿಜಯ ರಾಜ್ಯದ ಇಪ್ಪತ್ತ ನಾಲ್ಕನೇ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ' ಎಂಬ ಪರಿಚಯಾತ್ಮಕ ಲೇಖನ ಹಾಗೂ 'ನಿರಂತರ ನಿಷ್ಠೆಗೆ ಸಂದ ಜಯ, ರಾಜ್ಯದ ಒಂಭತ್ತನೇ ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್' ಎನ್ನುವ ಮಾಹಿತಿ ಪೂರ್ಣ ಲೇಖನಗಳು ಸಮಯೋಚಿತವೂ ಹಾಗೂ ಸಮರ್ಪಕವೂ ಆಗಿದ್ದವು.

ಇದೇ ಸಂಚಿಕೆಯಲ್ಲಿ ಪ್ರಕಟವಾದ 'ನೇತ್ರದಾನ ಕ್ರಾಂತಿಯ ಹರಿಕಾರ ಡಾ.ಕೆ.ಭುಜಂಗ ಶೆಟ್ಟಿ' ಎಂಬ ಲೇಖನ ಓದುಗರ ಕಣ್ಣು ತೆರಸುವಂತಿತ್ತು. ಕಣ್ಣಿನ ಕಸಿಯಲ್ಲಿ ಯಶಸ್ವಿಯಾದ ಭುಜಂಗ ಶೆಟ್ಟಿ ಅವರು ನೇತ್ರದಾನದ ಮೂಲಕ ಅನೇಕ ಅಂಧರ ಬಾಳಿನಲ್ಲಿ ಭರವಸೆಯ ಬೆಳಕನ್ನು ಮೂಡಿಸಿದಂಥವರು. ಹಾಗೆಯೇ 'ದೇಹಕ್ಕೆ ಜೀವಂತಿಕೆ ತುಂಬುವ ಯೋಗ' ಎಂಬ ಲೇಖನವು ವಿಶ್ವ ಯೋಗ ದಿನಾಚರಣೆಗೆ ಪುಷ್ಟಿಯನ್ನು ನೀಡಿತು.

**–ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ**

* * *

ಜೂನ್ 2023 ರ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟವಾದ ದಿವಂಗತ ಡಾಕ್ಟರ್ ಭುಜಂಗ ಶೆಟ್ಟಿ ಅವರ ಬಗ್ಗೆ ಡಿ.ಪಿ.ಮುರಳೀಧರ್ ಅವರು ಬರೆದಿರುವ ಲೇಖನ ಇಂದಿನ ಯುವ ಪೀಳಿಗೆಗೆ ಸ್ಫೂರ್ತಿದಾಯಕ. ದೊಡ್ಡಪ್ಪನ ಜೊತೆ ಲಾರಿ ಹತ್ತಿ ಬಂದ ಇವರು ಅವರ ಸಹಾಯದಿಂದಲೇ ವಸತಿ ನಿಲಯದಲ್ಲಿ ಪ್ರವೇಶ ಗಿಟ್ಟಿಸಿ, ಚಿಕ್ಕ ವಯಸ್ಸಿನಲ್ಲೇ ನಾಯಕತ್ವ ಗುಣ ಬೆಳೆಸಿಕೊಂಡು ಮೇಲೇರಿದ ಪರಿ ನಿಜಕ್ಕೂ ಮೆಚ್ಚುವಂತಹದು. ಇಂಗ್ಲಿಷ್ ಭಾಷೆಯ ಗಂಧ ಗಾಳಿ ಅರಿಯದ ಶ್ರೀಯುತರು ವೈದ್ಯಕೀಯ ಶಾಸ್ತ್ರದಲ್ಲಿ ಪರಿಣಿತಿ ಪಡೆದು ಸಾಧನೆ ಗೈದಿರುವುದು ನಿಜಕ್ಕೂ ಅಮೋಘನೀಯ.

ಸಾವಿರಾರು ಮಂದಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿ ಹೆಸರುವಾಸಿಯಾದವರು. ಕನ್ನಡದ ಮೇರು ನಟ ಡಾ. ರಾಜ್‌ಕುಮಾರ್ ಅವರ ಕಣ್ಣಿನ ಶಸ್ತ್ರಚಿಕಿತ್ಸೆ ಮೂಲಕ ಮನೆಮಾತಾದ ಇವರು ಅವರ ಅಚ್ಚುಮೆಚ್ಚಿನ ಗೆಳೆಯರಾದರು. ಜೊತೆಗೆ ಬಡ ರೋಗಿಗಳಿಗೆ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿ ಅವರ ಬಾಳಿಗೆ ಎಂದಿಗೂ ನಂದದ ನಂದಾದೀಪವಾಗಿರುವರು. ಇಂಥ ಅಮೋಘ ಸಾಧಕರನ್ನು ಜಗತ್ತು ಮತ್ತು ಜನರು ಯಾವತ್ತು ಮರೆಯುವುದಿಲ್ಲ. ಇಂತಹ ಲೇಖನ ಪ್ರಕಟಿಸಿದ ವಾರ್ತಾ ಜನಪದಕ್ಕೆ ಧನ್ಯವಾದಗಳು. ಇಂತಹ ಸ್ಫೂರ್ತಿದಾಯಕ ಲೇಖನಗಳು ಇನ್ನೂ ಹೆಚ್ಚು ಹೆಚ್ಚು ಪ್ರಕಟಣೆಗೊಳ್ಳಲಿ.

**–ವೆಂಕಟೇಶ್ ತೂವಿನಕೆರೆ, ಮಂಡ್ಯ**

* * *

ಡಾ. ಮೋಹನ್ ಕುಮಾರ್ ಅವರು ಬರೆದಿರುವ 'ಉತ್ತಮ ಮಾನಸಿಕ ಆರೋಗ್ಯಕ್ಕೆ ಜೀವನ ಕೌಶಲ್ಯಗಳು' ಎಂಬ ಲೇಖನವು ಉಪಯುಕ್ತ ಎನಿಸಿತು. ಇತ್ತೀಚಿನ ವಿಭಜಿತ ಕುಂಟಂಬಗಳಿಂದಾಗಿ ಬಹಳಷ್ಟು ಜನರು ಒಂಟಿತನವನ್ನು ಅನುಭವಿಸುತ್ತಿದ್ದಾರೆ. ಜೊತೆಗೆ ಹೆಚ್ಚು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ನಮ್ಮ ಜೀವನದಲ್ಲಿ ಎದುರಾಗುವ ಮಾನಸಿಕ ಒತ್ತಡವನ್ನು, ಸವಾಲುಗಳನ್ನು ಹೇಗೆ ನಿವಾರಣೆ ಮಾಡಿಕೊಳ್ಳಬೇಕು ಎಂಬುದನ್ನು ಲೇಖಕರು ಚನ್ನಾಗಿ ತಿಳಿಸಿದ್ದಾರೆ. ಇಂತಹ ಲೇಖನಗಳು ಇಂದಿನ ಕಾಲಕ್ಕೆ ಹೆಚ್ಚು ಸೂಕ್ತವಾಗಿವೆ ಎಂಬುದು ನನ್ನ ಅಭಿಪ್ರಾಯ.




**–ವೇದಾಂತ್, ಕುಣಿಗಲ್**

* * *

ಪರಿಸರ ದಿನಾಚರಣೆಯ ನಿಮಿತ್ತ ಜೂನ್ ಸಂಚಿಕೆಯ ಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದ 'ಪರಿಸರ ರಕ್ಷತಿ ರಕ್ಷಿತಃ' ಲೇಖನ ನಿಜಕ್ಕೂ ಪರಿಸರವನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂಬುದನ್ನು ಮನದಟ್ಟು ಮಾಡುವಂತಿತ್ತು. ಪರಿಸರ ಉಳಿದರೆ ಮಾತ್ರವೇ ನಾವು ಉಳಿಯಲು ಸಾಧ್ಯ. ಲೇಖಕರು ಹೇಳಿರುವಂತೆ ಮನುಷ್ಯನ ಭೌತಿಕ ಮತ್ತು ಮಾನಸಿಕ ಅಸ್ತಿತ್ವವು ಪ್ರಕೃತಿಯನ್ನೇ ಅವಲಂಬಿಸಿರುತ್ತದೆ. ಆದ್ದರಿಂದ ಪ್ರಕೃತಿಯ ಸಮತೋಲನ ಕಾಯ್ದುಕೊಳ್ಳುವತ್ತ ಕ್ರಮವಹಿಸುವುದು ಎಲ್ಲರ ಜವಾಬ್ದಾರಿಯಾಗಿದೆ.

ಮಾನವ ನಿಸರ್ಗದತ್ತ ಕೊಡುಗೆಯಾದ ಕಾಡುಗಳನ್ನು ಕಡಿದು ನಿರ್ನಾಮ ಮಾಡುತ್ತಿದ್ದಾನೆ. ಇದರ ಪ್ರತಿಫಲವನ್ನು ನಮ್ಮ ಮಕ್ಕಳು ಎದುರಿಸಬೇಕಾಗುತ್ತದೆ.

**–ಜಿ.ಎಂ. ಶಿವಪ್ಪ, ಗದಗ**

* * *

ಜೂನ್ 2023 ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರ ಕುರಿತಂತಹ ಲೇಖನಗಳ ಜೊತೆಗೆ ಪರಿಸರ ಮತ್ತು ಯೋಗ ದಿನಾಚರಣೆಗಳಿಗೆ ಸಂಬಂಧಿಸಿದಂತಹ ಲೇಖನಗಳು ಸಂದರ್ಭೋಚಿತವಾಗಿತ್ತು. ಇನ್ನು ನೇತ್ರದಾನ ಕ್ರಾಂತಿಯ ಹಿರಕಾರ ಡಾ.ಕೆ ಭುಜಂಗ ಶೆಟ್ಟಿ ಮತ್ತು ರಾಜ್ಯದ ಮೊದಲ ಜಲಯೋಧೆ ದಾಗಿನಕಟ್ಟೆ ಗ್ರಾಮದ ವೀರಮ್ಮ ಕುರಿತ ಲೇಖನಗಳು ಹೆಚ್ಚು ಮನಮುಟ್ಟಿತು.

**–ಧಾರಿಣಿ, ಮೈಸೂರು**

**ತಿದ್ದುಪಡಿ : ಜೂನ್ 2023 ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಹೊಸ ಸಂಪುಟ ಸಚಿವರ ಕಿರು ಪರಿಚಯ' ದಲ್ಲಿ ಡಾ.ಜಿ.ಪರಮೇಶ್ವರ್ ಅವರ ತಂದೆ ಹೆಸರು ತಪ್ಪಾಗಿದ್ದು ಅವರ ತಂದೆಯ ಹೆಸರು ಕೆ.ಎಚ್. ಗಂಗಾಧರಯ್ಯ ಆಗಿರುತ್ತದೆ. ಹಾಗೂ ಕೆ.ಎಚ್.ಮುನಿಯಪ್ಪ ಅವರ ವಿಧಾನಸಭಾ ಕ್ಷೇತ್ರವು ಬದಲಾಗಿದ್ದು, ಅವರು ದೇವನಹಳ್ಳಿ ವಿಧಾನಸಭೆಯಿಂದ ಪ್ರವೇಶಿಸಿರುತ್ತಾರೆ.**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೇ,**

ದೇಶದಲ್ಲೇ ಪ್ರಪ್ರಥಮವಾಗಿ ವಿನೂತನ ಮಾದರಿಯಲ್ಲಿ ಸರ್ವಜನರ ಏಳಿಗೆಗಾಗಿ ರಾಜ್ಯ ಸರ್ಕಾರವು ಐದು ಯೋಜನೆಗಳನ್ನು ಜಾರಿಗೊಳಿಸಿದೆ. ಅದರಲ್ಲಿ ಬಹುಮುಖ್ಯವಾಗಿ ಮಹಿಳಾ ಸಬಲೀಕರಣಕ್ಕೆ ಸಹಕಾರಿಯಾಗಲಿರುವ 'ಶಕ್ತಿ' ಯೋಜನೆಯನ್ನು ಜೂನ್ 11 ರಂದು ವಿಧಾನಸೌಧದ ಮುಂಭಾಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಿಳೆಯರಿಗೆ ಶೂನ್ಯ ಬೆಲೆಯ ಟಿಕೆಟ್ ನೀಡುವ ಮೂಲಕ ಚಾಲನೆ ನೀಡಿದರು.

ಈ ಯೋಜನೆಯಡಿ ಈಗಾಗಲೇ ಸರ್ಕಾರಿ ಬಸ್ಸಿನಲ್ಲಿ ರಾಜ್ಯದಾದ್ಯಂತ ಮಹಿಳೆಯರು, ವಿದ್ಯಾರ್ಥಿನಿಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ಉಚಿತ ಪ್ರಯಾಣದ ಸೌಲಭ್ಯ ಪಡೆದುಕೊಳ್ಳುತ್ತಿರುವ ಫಲಾನುಭವಿಗಳು ಇದಕ್ಕೆ ಮೆಚ್ಚುಗೆ ವ್ಯಕ್ತಪಡಿಸುತಿದ್ದಾರೆ. ಇನ್ನು  ಮಹಿಳೆಯರು ಕುಟುಂಬ ಸಮೇತರಾಗಿ ಧಾರ್ಮಿಕ ಕ್ಷೇತ್ರಗಳಿಗೆ ತೆರಳಿ  ದೇವರ ದರ್ಶನ ಮಾಡಿ ಪುನೀತರಾಗುತ್ತಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸಂಚಾರ ಮಾಡುತ್ತಿರುವುದರಿಂದ ಸುಗಮ ಸಂಚಾರಕ್ಕಾಗಿ ಸಾರಿಗೆ ಇಲಾಖೆಯು ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸುತ್ತಿದೆ. ಗ್ರಾಮೀಣ ಭಾಗದಿಂದ ಉದ್ಯೋಗಕ್ಕೆ ಹೋಗುವ ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರಿಗೆ ಶಕ್ತಿ ಯೋಜನೆ ವರದಾನವಾಗಿದೆ. ಒಟ್ಟಿನಲ್ಲಿ  ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಾಧ್ಯವಾಗದು ಎಂಬ ಟೀಕಾಕಾರರ ಮಾತನ್ನು ಜಾರಿಗೊಂಡಿರುವ **'ಶಕ್ತಿ'** ಯೋಜನೆ ಸುಳ್ಳಾಗಿಸಿದೆ.

ಹೆಣ್ಣಿಗೆ ಬೆಟ್ಟದಷ್ಟು ಪ್ರತಿಭೆ ಇದ್ದರೂ ಕೂಡ ತನ್ನವರಿಗಾಗಿ ತನ್ನ ಆಸೆ ಅಕಾಂಕ್ಷೆಗಳನ್ನು ತ್ಯಾಗ ಮಾಡುತ್ತಾಳೆ. ಹಾಗಾಗಿ ಅವಳ ಕನಸಿನ ರೆಕ್ಕೆಗಳು ಮತ್ತೆ ಹಾರುವಂತೆ ಮಾಡಲು ಆಕೆಗೆ ಒಂದು ಸಣ್ಣ ಪ್ರೋತ್ಸಾಹ ಬೇಕಾಗುತ್ತದೆ. ಆ ಒಂದು ಪ್ರೋತ್ಸಾಹವೇ ಸರ್ಕಾರವು ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಸೌಲಭ್ಯ ನೀಡಿರುವ ಶಕ್ತಿ ಯೋಜನೆ.

ಪ್ರತಿ ಮನೆ ಒಡತಿಗೆ ಮಾಹೆಯಾನ ರೂ. 2000 ನೀಡುವ **'ಗೃಹಲಕ್ಷ್ಮಿ'** ಯೋಜನೆ, ರಾಜ್ಯ ಗೃಹ ಬಳಕೆದಾರರಿಗೆ ಗರಿಷ್ಠ 200 ಯೂನಿಟ್ ಉಚಿತ ವಿದ್ಯುತ್ ಒದಗಿಸುವ **'ಗೃಹಜ್ಯೋತಿ'** ಯೋಜನೆ ಹಾಗೂ 2022-23 ರಲ್ಲಿ ತೇರ್ಗಡೆಯಾದ ಪದವೀಧರ ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ರೂ. 3000 ಹಾಗೂ ಡಿಪ್ಲೊಮಾ ಮಾಡಿರುವ ನಿರುದ್ಯೋಗಿಗಳಿಗೆ ರೂ. 1500 ದಂತೆ ಎರಡು ವರ್ಷಗಳ ಕಾಲ ನಿರುದ್ಯೋಗ ಭತ್ಯೆಯನ್ನು ನೀಡುವ **'ಯುವನಿಧಿ'** ಯೋಜನೆಗಳಿಗೆ ಈಗಾಗಲೇ ರೂಪುರೇಷೆಗಳು ಸಿದ್ಧಗೊಂಡಿದ್ದು, ಒಂದೆರಡು ತಿಂಗಳಲ್ಲಿ ಈ ಎಲ್ಲಾ ಯೋಜನೆಗಳೂ ಜಾರಿಗೆ ಬರಲಿವೆ. ಅಲ್ಲದೆ **'ಅನ್ನಭಾಗ್ಯ'** ಯೋಜನೆಯಡಿ 10 ಕೆ.ಜಿ ಉಚಿತ ಆಹಾರ ಧಾನ್ಯ ನೀಡಲು ರಾಜ್ಯ ಸರ್ಕಾರವು ಇತರೆ ರಾಜ್ಯಗಳಿಂದ ಹಾಗೂ ಕೇಂದ್ರ ಸರ್ಕಾರದೊಂದಿಗೆ ಮಾತುಕತೆಯನ್ನು ನಡೆಸಿದೆ.

**'ಶಕ್ತಿ'** ಯೋಜನೆ ಮತ್ತು **'ಗೃಹಲಕ್ಷ್ಮಿ'** ಯೋಜನೆಗಳಿಂದ ನಮ್ಮ ರಾಜ್ಯದ ಮಹಿಳೆಯರಿಗಂತೂ **'ಅಚ್ಚೇ ದಿನ್'** ಬಂದಿದೆ ಅಂತಲೇ ಹೇಳಬಹುದು. ಸರ್ಕಾರವಂತು ಎಲ್ಲಾ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಿದೆ. ಹಾಗಾಗಿ ಯೋಜನೆಗಳ ಸೌಲಭ್ಯಕ್ಕಾಗಿ ಸೇವಾ ಸಿಂಧು  ಮೂಲಕ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಕ್ರಮಕೈಗೊಳ್ಳಲಾಗುತ್ತಿರುವುದರಿಂದ ನಾಗರಿಕರು ಸಹನೆಯಿಂದ ವರ್ತಿಸಬೇಕಾಗಿದೆ.

ಮಹಿಳೆಯರು ತಮ್ಮ ಕನಸನ್ನು ನನಸು ಮಾಡಿಕೊಳ್ಳಲು ಸರ್ಕಾರವು ಜಾರಿಗೆ ತಂದಿರುವ ಮಹಿಳಾ ಪರ ಯೋಜನೆಗಳ ಸೌಲಭ್ಯವನ್ನು ಪಡೆಯುವಂತೆ ರಾಜ್ಯದ ಎಲ್ಲಾ ಮಹಿಳೆಯರಲ್ಲಿ ಮನವಿ ಮಾಡುತ್ತೇನೆ. ಹಾಗೆಯೇ ಯೋಜನೆಯು ಸಫಲವಾಗಲು ನಾಗರಿಕರು ಕೂಡ ಸಹಕರಿಸಬೇಕಾಗಿ ಕೋರುತ್ತೇನೆ.

ಹಾಗೆಯೇ, ವಿಶ್ವದಾದ್ಯಂತ ಜುಲೈ 11 ರಂದು ಜನಸಂಖ್ಯಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಜನಸಂಖ್ಯೆ ಹೆಚ್ಚಿದಷ್ಟು ದೇಶದ ಅಭಿವೃದ್ಧಿಯು ಕುಂಠಿತಗೊಳ್ಳುತ್ತದೆ. ನಮ್ಮ ದೇಶವು ಜನಸಂಖ್ಯೆಯಲ್ಲಿ ಚೀನಾ ದೇಶವನ್ನು ಸರಿಗಟ್ಟಿ ಮೊದಲ ಸ್ಥಾನ ಪಡೆಯುವತ್ತ ದಾಪುಗಾಲು ಹಾಕುತ್ತಿರುವುದರಿಂದ ನಾವು ನೀವೆಲ್ಲರೂ ಜನಸಂಖ್ಯೆ ನಿಯಂತ್ರಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಬೇಕಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಇಚ್ಚಿಸುತ್ತೇನೆ.

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Downloaded From:www.kpscvaani.com




# ಸಬಲೀಕರಣದತ್ತ ಮಹಿಳೆಯರ ಪಯಣ...

> **ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಹಾರುವ ಕನಸಿಗೆ ಶಕ್ತಿ ಯೋಜನೆಯು ರೆಕ್ಕೆ ಮೂಡಿಸಿದ್ದು, ಮಹಿಳೆಯರು ಆತ್ಮ ವಿಶ್ವಾಸದ ಹೆಜ್ಜೆ ಇಡುವಂತ್ತಾಗಿದೆ.**

ನಂಜುಂಡಪ್ಪ. ಏ

ಮಹಾತ್ಮಾ ಗಾಂಧೀಜಿಯವರು ಸ್ವರಾಜ್ಯದ ಕನಸು ಕಂಡಿದ್ದರು. ಮಹಿಳೆಯರು ಮಧ್ಯರಾತ್ರಿಯಲ್ಲಿಯೂ ನಿರ್ಭಯವಾಗಿ ಓಡಾಡಬೇಕೆಂದು ಬಯಸಿದ್ದರು. ಮಹಿಳಾ ಸ್ವಾತಂತ್ರ್ಯಕ್ಕೆ ಅನನ್ಯ ಪ್ರಾಶಸ್ತ್ಯ ನೀಡಿದ್ದರು. ಅವರ ಗ್ರಾಮ ಸ್ವರಾಜ್ಯ, ಮಹಿಳಾ ಸ್ವಾತಂತ್ರ್ಯದ ಕನಸು ಅಮೃತ ಮಹೋತ್ಸವದ ಈ ಸುಸಂದರ್ಭದಲ್ಲಿ ಸಾಕಾರಗೊಳ್ಳುತ್ತಿದೆ. ಮಹಿಳೆ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ, ಕುಟುಂಬಕ್ಕೆ ಮಾತ್ರ ಸೀಮಿತ ಎಂಬ ಕಟ್ಟುಪಾಡುಗಳು, ಅಡೆತಡೆಗಳನ್ನು ಮೀರಿ ಅಮಿತೋತ್ಸಾಹ, ಸಂಭ್ರಮೋಲ್ಲಾಸದಿಂದ ಮನೆಯಿಂದ ಹೊರ ಬಂದಿದ್ದಾಳೆ. ಮನೆಯನ್ನು ಮುನ್ನಡೆಸುವ, ಸಮಾಜದಲ್ಲಿ ನಿರ್ಭೀತಿಯ ವಾತಾವರಣ ಮೂಡಿಸಲು ಟೊಂಕ ಕಟ್ಟಿ ನಿಂತಿದ್ದಾಳೆ.

ಸ್ವಾತಂತ್ರ್ಯೋತ್ತರದ ನಂತರ ಯಾವುದೇ ಯೋಜನೆಗೂ ದೊರೆಯದಷ್ಟು ಅತ್ಯುತ್ತಮ ಪ್ರತಿಕ್ರಿಯೆ, ಸಕಾರಾತ್ಮಕ ಸ್ಪಂದನೆ ಶಕ್ತಿ ಯೋಜನೆಗೆ ಲಭಿಸಿದೆ. ತನ್ಮೂಲಕ ಮಹಿಳೆ ಸಶಕ್ತಳಾಗುವತ್ತ ಮುನ್ನಡೆದಿದ್ದಾಳೆ. ಹಾರುವ ಕನಸಿಗೆ ಈ ಯೋಜನೆ ರೆಕ್ಕೆ ಮೂಡಿಸಿದ್ದು, ಮಹಿಳೆ ಇದೀಗ ಆಗಸಕ್ಕೂ ಏಣಿ ಹಾಕಲು ಹೊರಟಿದ್ದಾಳೆ. ದೇಶ ಸ್ವಾತಂತ್ರ್ಯದ ಶತಮಾನೋತ್ಸವದತ್ತ ಸಾಗುತ್ತಿರುವಾಗ ಮಹಿಳೆಯರ ಸಹಭಾಗಿತ್ವಕ್ಕೆ ಈ ಯೋಜನೆ ಹೊಸ ಭಾಷ್ಯ ಬರೆದಿದೆ. ಮಹಿಳೆ ಗ್ರಾಮ ಸ್ವರಾಜ್ಯ ನಿರ್ಮಾಣಕ್ಕಾಗಿ ತನ್ನ ಪಯಣ ಆರಂಭಿಸಿದ್ದು, ನಗರ ಮತ್ತು ಗ್ರಾಮೀಣ ಪ್ರದೇಶದ ಸಂಪರ್ಕ ಸೇತುವಾಗಿ ಮಹಿಳೆಯು ಹೊರಹೊಮ್ಮಲಿದ್ದಾಳೆ. ಇಂತಹ ಮಹತ್ವದ ಸುಧಾರಣೆ, ಬದಲಾವಣೆಗೆ ಸರ್ಕಾರ ಶಕ್ತಿ ಯೋಜನೆ ಮೂಲಕ ವೇದಿಕೆ ಒದಗಿಸಿದೆ.

ಹೌದು ಶಕ್ತಿ ಯೋಜನೆ ಮುಂಬರುವ ದಿನಗಳಲ್ಲಿ ಸಾಕಷ್ಟು ಬದಲಾವಣೆ, ಬೆಳವಣಿಗೆಗಳಿಗೆ  ಕಾರಣವಾಗುವ ನಿರೀಕ್ಷೆಯಿದೆ. ಸಾಮಾನ್ಯ ಸರ್ಕಾರಿ ಬಸ್‌ಗಳಲ್ಲಿ




Downloaded From:www.kpscvaani.com



ಉಚಿತವಾಗಿ ಸಂಚರಿಸಲು ಅವಕಾಶ ಕಲ್ಪಿಸುವ ಸರ್ಕಾರದ ಶಕ್ತಿ ಯೋಜನೆಯಿಂದ ಆರ್ಥಿಕ ಪರಿಸ್ಥಿತಿ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ ಎಂಬ ಚರ್ಚೆ ಸರ್ವೆ ಸಾಮಾನ್ಯ. ಆದರೆ ಇದರಿಂದ ಉಂಟಾಗುವ ಲಾಭ, ಪ್ರಯೋಜನಗಳು ಅಗಾಧ. ಮಹಿಳೆಯರಿಗಾಗಿ ಸರ್ಕಾರ ಶಕ್ತಿ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ಹಾಗೆಂದು ಮಹಿಳೆಯರು ಉಚಿತವಾಗಿಯೇ ಪಯಣಿಸಬೇಕೆಂಬ ಯಾವುದೇ ಬಲವಂತವಿಲ್ಲ. ಆರ್ಥಿಕವಾಗಿ ಸಬಲರಾಗಿರುವವರು, ಉಚಿತ ಪಡೆಯಲು ಬಯಸದವರು ಹಣ ಕೊಟ್ಟು ಟಿಕೆಟ್ ಖರೀದಿಸಿ ಪ್ರಯಾಣಿಸಬಹುದು. ಇದು ಮಹಿಳೆಯರ ವಿವೇಚನೆಗೆ ಬಿಟ್ಟ ವಿಚಾರ. ಆದರೆ ಉಚಿತ ಟಿಕೆಟ್‌ನಲ್ಲಿ ಸಂಚರಿಸುವವರನ್ನು ಚಾಲಕರು, ನಿರ್ವಾಹಕರು, ಸಹ ಪ್ರಯಾಣಿಕರು ವ್ಯಂಗ್ಯ ಮಾಡುವಂತಿಲ್ಲ. ಏಕೆಂದರೆ ಮಹಿಳೆಯರ ಟಿಕೆಟ್ ಹಣವನ್ನು ಸರ್ಕಾರ ಭರಿಸುತ್ತದೆ. ಈ ಎಚ್ಚರ ಪ್ರತಿಯೊಬ್ಬರಲ್ಲೂ ಇರುವುದು ಅವಶ್ಯ.

ಇದೀಗ ಮಹಿಳೆ ತನ್ನ ಹಳ್ಳಿ, ನಗರಗಳಿಗೆ ಸಂಚರಿಸಿ ಮನೆ, ಕುಟುಂಬ, ಆಸ್ತಿಪಾಸ್ತಿ ರಕ್ಷಣೆಯಲ್ಲಿ ತೊಡಗಲಿದ್ದಾಳೆ. ಹಳ್ಳಿಗಳಿಂದ ಕಾಳು ಕಡ್ಡಿ ತರುವ, ನಗರಗಳಿಂದ ಮನೆಗೆ ಅಗತ್ಯ ವಸ್ತುಗಳನ್ನು ಕೊಂಡೊಯ್ಯುವ ಕೆಲಸ ಮಾಡಲಿದ್ದಾಳೆ. ಮಹಿಳೆಯರ ನಾಯಕತ್ವಕ್ಕೆ ಈ ಯೋಜನೆ ನೀರೆರೆದು ಪೋಷಿಸಲಿದೆ. ಆರ್ಥಿಕ ಸಂಕಷ್ಟ, ಕೌಟುಂಬಿಕ ಹೊಣೆಗಾರಿಕೆಯಿಂದ ಒಂದೇ ಕಡೆ ಜಿಡ್ಡು ಹಿಡಿದು ಕುಳಿತಿದ್ದ ಮಹಿಳೆ ಹೊಸ ಗಾಳಿ ಸೇವಿಸಲಿದ್ದಾಳೆ. ಹೊಸ ಪರಿಸರವನ್ನು ಕಣ್ತುಂಬಿಕೊಳ್ಳಲಿದ್ದಾಳೆ. ತಮಗಿಷ್ಟವಾದ ಪ್ರದೇಶಗಳಿಗೆ ಪ್ರವಾಸ ತೆರಳಲಿದ್ದಾಳೆ. ಇದರಿಂದ ಪ್ರವಾಸೋದ್ಯಮ ಚಟುವಟಿಕೆ



**ಯೋಜನೆಯ ಪ್ರಮುಖ ಅಂಶಗಳು :**

- ರಾಜ್ಯದ ಎಲ್ಲಾ ಮಹಿಳೆಯರು ಈ ಸೌಲಭ್ಯ ಪಡೆಯಲು ಅರ್ಹರು. 'ಶಕ್ತಿ ಯೋಜನೆ'ಯ ಸೌಲಭ್ಯವನ್ನು ಪ್ರತಿನಿತ್ಯ ರಾಜ್ಯದ 41.81 ಲಕ್ಷ ಮಹಿಳೆಯರು (11.58 ಲಕ್ಷ ಪಾಸ್ ಪ್ರಯಾಣಿಕರು ಸೇರಿದಂತೆ) ಪಡೆಯುವ ಅಂದಾಜು.
- ರಾಜ್ಯದ ಒಳಗೆ ಪ್ರಯಾಣಿಸಲು ಮಾತ್ರ ಅನ್ವಯ. ಅಂತರ ರಾಜ್ಯ ಪ್ರಯಾಣಕ್ಕೆ ಅವಕಾಶವಿಲ್ಲ.
- ರಾಜ್ಯದ 6308 ನಗರ, 5958 ಸಾಮಾನ್ಯ ಹಾಗೂ 6343 ವೇಗದೂತ ಬಸ್ಸುಗಳಲ್ಲಿ ಪ್ರಯಾಣಿಸಬಹುದು. ಐಷಾರಾಮಿ ಸಾರಿಗೆಗಳಿಗೆ ಈ ಸೌಲಭ್ಯ ಅನ್ವಯಿಸುವುದಿಲ್ಲ.
- ಇಟಿಎಂ ತಂತ್ರಾಂಶದಲ್ಲಿ ಉಚಿತ ಟಿಕೆಟ್ ವಿತರಣೆಗಾಗಿ ಅಗತ್ಯ ಮಾರ್ಪಾಡು, ಸಿಬ್ಬಂದಿಗೆ ಸೂಕ್ತ ತರಬೇತಿ.
- ಗುರುತಿನ ಚೀಟಿ ಪರಿಶೀಲಿಸಿ ಶೂನ್ಯ ಟಿಕೆಟ್ ವಿತರಣೆ.
- ಮುಂಗಡ ಬುಕಿಂಗ್ ಸೌಲಭ್ಯವಿರುವ ಬಸ್ಸುಗಳಲ್ಲಿ ಮಹಿಳೆಯರಿಗೆ ಮುಂಗಡ ಆಸನ ಕಾಯ್ದಿರಿಸಲು ಅವಕಾಶ.
- ಯೋಜನೆಯ ವೆಚ್ಚವನ್ನು ಇ.ಟಿ.ಎಂ.ಗಳಿಂದ ವಿತರಿಸಲಾದ ಶೂನ್ಯ ಟಿಕೆಟ್/ ಶಕ್ತಿ ಸ್ಮಾರ್ಟ್ ಕಾರ್ಡ್ ದತ್ತಾಂಶ ಆಧರಿಸಿ ನಿಗಮಗಳಿಗೆ ಸರ್ಕಾರದಿಂದ ಹಣ ಪಾವತಿ.
- ಮೂರು ತಿಂಗಳೊಳಗೆ "ಶಕ್ತಿ ಸ್ಮಾರ್ಟ್ ಕಾರ್ಡ್" ವಿತರಣೆ. ಸೇವಾಸಿಂಧು ತಂತ್ರಾಂಶದ ಮೂಲಕ ಜೂನ್ 15 ರಿಂದಲೇ ಅರ್ಜಿ ಸ್ವೀಕಾರ.
- ಸ್ಮಾರ್ಟ್ ಕಾರ್ಡ್ ಮಾಡಿಸಿಕೊಳ್ಳಲು ಮೂರು ತಿಂಗಳ ಕಾಲ ಅವಕಾಶ.
- ಸ್ಮಾರ್ಟ್ ಕಾರ್ಡ್ ವಿತರಿಸುವವರೆಗೆ, ಭಾರತ ಸರ್ಕಾರ/ ಕರ್ನಾಟಕ ಸರ್ಕಾರದ ಇಲಾಖೆ/ಸರ್ಕಾರಿ ಸ್ವಾಮ್ಯದ ಕಛೇರಿಗಳಿಂದ ವಿತರಿಸಿದ ಭಾವಚಿತ್ರ ಹಾಗೂ ವಾಸದ ವಿಳಾಸವಿರುವ ಗುರುತಿನ ಚೀಟಿಯನ್ನು ಪರಿಗಣಿಸಿ ಶೂನ್ಯ ಟಿಕೆಟ್ ವಿತರಣೆಗೆ ಕ್ರಮ.
- ಮಹಿಳಾ ಪ್ರಯಾಣಿಕರು ತಮ್ಮ ಪ್ರಯಾಣ ಸಂದರ್ಭದಲ್ಲಿ ಗುರುತಿನ ಚೀಟಿಯ ಮೂಲ/ನಕಲು/ಡಿಜಿಲಾಕರ್ [ಹಾರ್ಡ್ ಮತ್ತು ಸಾಫ್ಟ್ ಕಾಪಿ] ಮಾದರಿಯಲ್ಲಿ ಹಾಜರುಪಡಿಸಿ ಪ್ರಯಾಣಿಸಬಹುದು.
- ಮಹಿಳೆಯರ ಸುರಕ್ಷತೆಗೆ ಒತ್ತು. ಬಸ್ ಹತ್ತಿದ ನಂತರ ಸ್ವಯಂ ಚಾಲಿತ ಬಾಗಿಲುಗಳನ್ನು ಹಾಕಿದ ನಂತರವೇ ಬಸ್ ಚಾಲನೆ ಮಾಡಬೇಕು ಎಂದು ಚಾಲಕರಿಗೆ ಕಟ್ಟುನಿಟ್ಟಿನ ಸೂಚನೆ.



Downloaded From:www.kpscvaani.com



## ನೂಕುನುಗ್ಗಲು ತಪ್ಪಿಸಲು ಕ್ರಮ

ಶಕ್ತಿ ಯೋಜನೆಯಡಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪ್ರಸಿದ್ಧ ದೇವಸ್ಥಾನಗಳಿಗೆ ಭೇಟಿ ನೀಡುತ್ತಿರುವುದರಿಂದ ಉಂಟಾಗುತ್ತಿರುವ ನೂಕುನುಗ್ಗಲು ತಪ್ಪಿಸಲು ಸಾರಿಗೆ ಸಚಿವರಾದ ರಾಮಲಿಂಗಾ ರೆಡ್ಡಿ ಅವರು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸಚಿವರ ಸೂಚನೆ ಮೇರೆಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ವಿ. ಅನ್ಬು ಕುಮಾರ್ ಅವರು ನಿಗಮದ ಎಲ್ಲಾ 16 ವಿಭಾಗಗಳ ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಿಭಾಗೀಯ ಸಂಚಾರ ಅಧಿಕಾರಿಗಳು ಹಾಗೂ 83 ಘಟಕ ವ್ಯವಸ್ಥಾಪಕರುಗಳೊಂದಿಗೆ ಜೂನ್ 20 ರಂದು "ಶಕ್ತಿ"ಯೋಜನೆಗೆ ಸಂಬಂಧಪಟ್ಟಂತೆ ವಿಡಿಯೋ ಸಂವಾದ ನಡೆಸಿದ್ದಾರೆ.

ಕರ್ನಾಟಕ ಸರ್ಕಾರವು ಜಾರಿಗೊಳಿಸಿರುವ ಮಹತ್ವದ "ಶಕ್ತಿ" ಯೋಜನೆಯನ್ನು ಇನ್ನಷ್ಟು ಸುಗಮವಾಗಿ ನಡೆಸುವ ಸಂಬಂಧ ಹಾಗೂ ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ಕೂಲಂಕುಷ ಚರ್ಚೆ ನಡೆಸಿದರು. ಶಕ್ತಿ ಯೋಜನೆಯನ್ನು ವ್ಯವಸ್ಥಿತವಾಗಿ ನಡೆಸಲು, ವಿಭಾಗಗಳ ವ್ಯಾಪ್ತಿಯಲ್ಲಿ ಜನಸಂದಣಿ ಹೆಚ್ಚಿರುವ 10 ಸ್ಥಳಗಳನ್ನು, ವಿಶೇಷಜಾತ್ರೆ/ ಹಬ್ಬವಿರುವ ದಿನಗಳನ್ನು ಗುರುತಿಸಿ, ಪ್ರಯಾಣಿಕರ ಸಂದಣಿ ಅನುಗುಣವಾಗಿ ಘಟಕಗಳಿಂದ ಹೆಚ್ಚುವರಿ ಬಸ್ಸುಗಳ ತ್ವರಿತ ನಿಯೋಜನೆ, ಟಿಕೆಟ್ ವಿತರಣೆ, ಗುರುತಿಸಿರುವ ಸ್ಥಳಗಳಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಸುಗಮ ಸಂಚಾರಕ್ಕೆ ಅನುವಾಗುವ ನಿಟ್ಟಿನಲ್ಲಿ ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದ್ದಾರೆ.

ಯಾವುದೇ ಕಾರಣಕ್ಕೂ ಬಸ್ಸುಗಳ ನಿಯೋಜನೆ ಹಾಗೂ ಸಾರಿಗೆ ವ್ಯವಸ್ಥೆಯಲ್ಲಿ ಗೊಂದಲಕ್ಕೆ ಅವಕಾಶ ಕೊಡಬಾರದು ಹಾಗೂ ನಿಗಮದ ಚಾಲನಾ ಸಿಬ್ಬಂದಿಗಳೊಂದಿಗೆ ಸಂವಾದ ನಡೆಸಿ, ಪ್ರೋತ್ಸಾಹಿಸಬೇಕು. ಕೇಂದ್ರ ಕಛೇರಿಯ ಹಿರಿಯ ಅಧಿಕಾರಿಗಳು/ ಉಸ್ತುವಾರಿ ಅಧಿಕಾರಿಗಳು ಪ್ರತಿವಾರ ತಪ್ಪದೇ ವಿಭಾಗಗಳಿಗೆ ಭೇಟಿ ನೀಡಿ ಪರಾಮರ್ಶೆ ನಡೆಸಲು ಕೂಡ ಸೂಚನೆ ನೀಡಿದ್ದಾರೆ. ಅದೇ ರೀತಿ ವಿದ್ಯಾರ್ಥಿಗಳಿಗೂ ತೊಂದರೆ ಆಗದಂತೆ ಹೆಚ್ಚುವರಿ ಟ್ರಿಪ್‌ಗಳನ್ನು ಮಾಡುವಂತೆ ಕೂಡ ತಿಳಿಸಿದ್ದಾರೆ.

ಸಾರ್ವಜನಿಕರು ಸಹ ನಿಗಮದೊಂದಿಗೆ ಕೈಜೋಡಿಸಿ "ಶಕ್ತಿ" ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಸಹಕರಿಸುವಂತೆ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಹೆಚ್ಚಾಗುತ್ತದೆ, ಉದ್ಯೋಗಾವಕಾಶಗಳು ಸೃಜಿಸಲಿವೆ. ಹೀಗೆ ಹತ್ತು ಹಲವು ಭೌತಿಕ ಪ್ರಯೋಜನಗಳು ಶಕ್ತಿ ಯೋಜನೆಯಿಂದ ದೊರೆಯಲಿದೆ.

ಕೆಂಪೇಗೌಡ ಬಸ್ ನಿಲ್ದಾಣದಲ್ಲಿ 74 ವರ್ಷದ ಹಿರಿಯ ಮಹಿಳೆ ಉತ್ತರ ಹಳ್ಳಿಯ ನರಸಮ್ಮ ತಮ್ಮ ಹ್ಯಾಂಡ್ರಾಯ್ಡ್ ಮೊಬೈಲ್‌ನಲ್ಲಿದ್ದ ಆಧಾರ್ ಗುರುತು ಚೀಟಿಯನ್ನು ತೋರಿಸಿ ಧರ್ಮಸ್ಥಳಕ್ಕೆ ಉಚಿತ ಟಿಕೆಟ್ ಪಡೆದುಕೊಂಡರು. ಆಧುನಿಕ ತಂತ್ರಜ್ಞಾನ ಮೊಬೈಲ್‌ನ ಡಿಜಿಲಾಕರ್‌ನಲ್ಲಿ ನರಸಮ್ಮ ತಮ್ಮೆಲ್ಲಾ ದಾಖಲೆಗಳನ್ನು ಭದ್ರವಾಗಿಟ್ಟುಕೊಂಡಿದ್ದಾರೆ. ನಿರ್ವಾಹಕರು ನೀಡಿದ ಉಚಿತ ಟಿಕೆಟ್ ಅನ್ನು ಕಣ್ಣಿಗೆ ಒತ್ತಿಕೊಂಡು ತನ್ನ ಚೀಲದಲ್ಲಿ ಭದ್ರವಾಗಿಟ್ಟುಕೊಂಡರು. ನರಸಮ್ಮ ತಮ್ಮ ನೆರೆಯ 55 ವರ್ಷದ ಸುಶೀಲಮ್ಮನ ಜೊತೆ ತೀರ್ಥಯಾತ್ರೆ ಕೈಗೊಂಡಿದ್ದರು. ಕುಟುಂಬ ನಿರ್ವಹಣೆಯಲ್ಲಿ ಉಳಿಸಿದ ಹಣವನ್ನಷ್ಟೇ ಅಲ್ಲದೇ ಡಿಜಿ ಲಾಕರ್‌ನಲ್ಲಿ ದಾಖಲೆಗಳನ್ನು ಜೋಪಾ ಮಾಡುವುದು ಮಹಿಳೆಯರಿಗೆ ಗೊತ್ತು. ಮಹಿಳೆಯರ ಸಂಘಟಿತ ಪ್ರಯತ್ನ ಮತ್ತು ಆತ್ಮ ವಿಶ್ವಾಸಕ್ಕೆ ಇದೊಂದು ಉದಾಹರಣೆ ಮಾತ್ರ, ಇಂತಹ ಲಕ್ಷಾಂತರ

## ಮಹಿಳೆಯರನ್ನು ಗೌರವದಿಂದ ಕಾಣಲು ಸೂಚನೆ

**ರಾಜ್ಯದ ಒಟ್ಟಾರೆ 18,500 ಸಾರಿಗೆ ಬಸ್‌ಗಳಲ್ಲಿ ಮಹಿಳೆಯರು ಬಸ್‌ಗಳಲ್ಲಿ ಸಂಚರಿಸಲು ಅವಕಾಶ ಕಲ್ಪಿಸಲಾಗಿದ್ದು, ಇವರ ಪ್ರಯಾಣ ದರವನ್ನು ಸರ್ಕಾರ ಭರಿಸಲಿದೆ. ಚಾಲಕರು ಮತ್ತು ನಿರ್ವಾಹಕರು ಮಹಿಳಾ ಪ್ರಯಾಣಿಕರನ್ನು ಉಚಿತ ಪ್ರಯಾಣಿಕರೆಂದು ಅಗೌರವಯುತವಾಗಿ ನಡೆಸಿಕೊಳ್ಳಬಾರದು. ಇನ್ನೂ ಹೆಚ್ಚಿನ ಗೌರವಾದರಗಳಿಂದ ನೋಡಿಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಕೆ.ಎಸ್.ಆರ್.ಟಿ.ಸಿ ಮೂಲಕ ಪ್ರತಿನಿತ್ಯ 28 ರಿಂದ 30 ಲಕ್ಷ ಮಂದಿ ಪ್ರಯಾಣಿಸುತ್ತಾರೆ. ಸಾರಿಗೆ ಸಂಸ್ಥೆ ಪ್ರಯಾಣಿಕರ ಸ್ನೇಹಿಯಾಗಿದೆ. ಬಸ್‌ಗಳ ಕೊರತೆ ನೀಗಿಸಲು ಕ್ರಮ ಕೈಗೊಳ್ಳುತ್ತಿದ್ದು, ಬರುವ ದಿನಗಳಲ್ಲಿ ಟ್ರಿಪ್‌ಗಳ ಸಂಖ್ಯೆ ಹೆಚ್ಚಿಸುವುದು ಸೇರಿದಂತೆ ಮಹಿಳಾ ಪ್ರಯಾಣಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಲಾಗುವುದು.**

**–ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವರು**



Downloaded From:www.kpscvaani.com

ಮಹಿಳೆಯರು ಮನೆಯಿಂದ ಹೊರ ಬಂದು  ಸ್ವತಂತ್ರವಾಗಿ ವಿಹರಿಸುತ್ತಿದ್ದಾರೆ. ಅದು ಪ್ರವಾಸ, ಶಿಕ್ಷಣ, ಉದ್ಯೋಗ ಹೀಗೆ ಹತ್ತು ಹಲವು ವಲಯಗಳಲ್ಲಿ ಮಹಿಳೆ ಇನ್ನಷ್ಟು ಧೈರ್ಯ, ವಿಶ್ವಾಸ, ಆತ್ಮ ವಿಶ್ವಾಸದಿಂದ ಹಜ್ಜೆ ಹಾಕುತ್ತಾ, ಹೊಸ ಬದಲಾವಣೆಗೆ ನಾಂದಿಯಾಗಿದ್ದಾಳೆ.

ಯೋಜನೆಯ ವೈಶಿಷ್ಟ್ಯಗಳು ಮತ್ತು ಪ್ರಯೋಜನಗಳು ಹಲವು. ಮೊದಲಿಗೆ ಮಹಿಳೆಯರಿಗೆ ಸಾರಿಗೆ ಕೈಗೆಟುಕುವಂತಾಗಿರುವುದೇ ವಿಶೇಷ. ರಾಜ್ಯದಲ್ಲಿ ಅತಿ ಹೆಚ್ಚು ಜನರಿಗೆ ಉದ್ಯೋಗ ದೊರಕಿಸಿಕೊಟ್ಟಿರುವುದು ಜವಳಿ ವಲಯ. ಗಾರ್ಮೆಂಟ್ಸ್‌ಗಳಲ್ಲಿ ಮಹಿಳೆಯರದ್ದೇ ಸಿಂಹಪಾಲು. ನಗರ ಮತ್ತು ಗ್ರಾಮೀಣ ಆರ್ಥಿಕತೆಯಲ್ಲಿ, ಮಹಿಳಾ ಸ್ವಾವಲಂಬನೆಗೆ ಜವಳಿ ವಲಯ ಅನನ್ಯ ಕೊಡುಗೆ ನೀಡಿದೆ. ಇಂತಹ ಮಹಿಳೆಯರಿಗೆ ಈ ಯೋಜನೆ ಅತಿ ಹೆಚ್ಚು ಪ್ರಯೋಜನಕಾರಿ.

ಶಾಲಾ-ಕಾಲೇಜಿನ ವಿದ್ಯಾರ್ಥಿನಿಯರು ಕೂಡ ಈ ಯೋಜನೆಯಡಿ ಉಚಿತವಾಗಿ ಪ್ರಯಾಣಿಸಬಹುದಾಗಿದ್ದು, ಇದು ಬಾಲಕಿಯರ ಶಿಕ್ಷಣಕ್ಕೆ ಪೂರಕವಾಗಲಿದೆ. ಶಾಲೆ ತೊರೆಯುವ ಹೆಣ್ಣು ಮಕ್ಕಳ ಸಂಖ್ಯೆ ತಗ್ಗುವ ಜೊತೆಗೆ ಹೆಣ್ಣು ಮಕ್ಕಳಿಗೆ ತನಗಿಷ್ಟವಾಗುವ ದೂರದ ಶಿಕ್ಷಣ ಸಂಸ್ಥೆಗಳಿಗೆ ಸೇರಲು ಸಾಧ್ಯವಾಗಲಿದೆ. ಶೈಕ್ಷಣಿಕವಾಗಿ ಈ ಯೋಜನೆ ನಿಜಕ್ಕೂ ಶಕ್ತಿ ತುಂಬಲಿದೆ.

ಪ್ರತಿದಿನ ಕೆಲಸಕ್ಕೆ ತೆರಳುವ, ಆರೋಗ್ಯ ತಪಾಸಣೆ, ಇತರ ಉದ್ದೇಶಗಳಿಗಾಗಿ ಪ್ರಯಾಣಿಸಲು ಬಯಸುವ ಎಲ್ಲಾ ಮಹಿಳೆಯರು ಈ ವಿಶೇಷ ಪ್ರಯೋಜನಕ್ಕೆ ಅರ್ಹರು. ಇದರಿಂದ ವನಿತೆಯರು ಸಾಮಾಜಿಕ ಚಟುವಟಿಕೆಗಳನ್ನು ಪ್ರವೇಶಿಸುವುದಲ್ಲದೇ ಲಿಂಗ ಸಮಾನತೆಯನ್ನು ಉತ್ತೇಜಿಸಲಿದ್ದಾರೆ. ಮಹಿಳೆಯರು ಉಳಿಸಿದ ಹಣದಿಂದ ಆರ್ಥಿಕ ಹೊರೆ ತಗ್ಗಿ ಬದುಕು ಹಸನು ಮಾಡಿಕೊಳ್ಳಲು ಶಕ್ತಿ ಯೋಜನೆ ಮಹಿಳೆಯರಿಗೆ ಹುರುಪು ತುಂಬಲಿದೆ.

ಸಮಾಜ ನಿಂತ ನೀರಾಗಬಾರದು. ಹಾಗೇನಾದರೂ ಆದರೆ ಅದು ಕೊಳೆತು ಗಬ್ಬೆದ್ದು ನಾರುತ್ತದೆ. ಹಾಗಾಗಿಯೇ ಶಕ್ತಿ ಯೋಜನೆ ಮಹಿಳೆಯರ ಚಲನಶೀಲತೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ, ಮಾನಸಿಕ ಒತ್ತಡಗಳಿಂದ ಹೊರ ಬರಲು ಸದಾವಕಾಶವಾಗಿದೆ. ಮುಕ್ತ ಮತ್ತು ಸುಲಭವಾಗಿ ಪ್ರಯಾಣಿಸುವ ಜೊತೆಗೆ ಇದು, ಮಹಿಳಾ  ಸ್ವಾತಂತ್ರ್ಯವನ್ನು ಹೆಚ್ಚಿಸುತ್ತದೆ. ರಾಜ್ಯದಾದ್ಯಂತ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಲು ಸಮಾನ ಅವಕಾಶ ಕಲ್ಪಿಸುವ ಜೊತೆಗೆ  ಮಹಿಳಾ ಸಬಲೀಕರಣಕ್ಕೆ ಉತ್ತೇಜಿಸಲು ಇದು ಪ್ರಮುಖ ಹೆಜ್ಜೆಯಾಗಿದೆ. ಯೋಜನೆಯ ಅರ್ಹತಾ ಮಾನದಂಡವೆಂದರೆ ಮಹಿಳೆಯರು ಕರ್ನಾಟಕದ ನಿವಾಸಿಗಳಾಗಿರಬೇಕು. ಅವರು ರಾಜ್ಯದಲ್ಲಿ ಶಾಶ್ವತವಾಗಿ ವಾಸಿಸುತ್ತಿರಬೇಕು.

### ಶಕ್ತಿ ಯೋಜನೆಯ ಲಾಂಛನದ ಪರಿಕಲ್ಪನೆ

ಶಕ್ತಿ ಯೋಜನೆಗೆ ಸಿದ್ಧಪಡಿಸಿರುವ ಲಾಂಛನದ ಪರಿಕಲ್ಪನೆ ತುಂಬಾ ವಿಶಿಷ್ಟವಾಗಿದೆ. ಅಂತಾರಾಷ್ಟ್ರೀಯ ಮಹಿಳೆಯರ ಸಾಮಾಜಿಕ ಮತ್ತು ರಾಜಕೀಯ ಒಕ್ಕೂಟವು 1908 ರಲ್ಲಿ ಮಹಿಳಾ ಕಾರ್ಯಕ್ರಮಗಳಲ್ಲಿ ಬಿಳಿ, ಹಸಿರು ಹಾಗೂ ನೇರಳೆ ಬಣ್ಣ ಬಳಸಲು ನಿರ್ಧರಿಸಿತು. ಅದರಂತೆ ಬಿಳಿ-ಪವಿತ್ರತೆ, ಹಸಿರು-ಭರವಸೆ, ನೇರಳೆ-ಗೌರವ ಮತ್ತು ನ್ಯಾಯದ ಪ್ರತೀಕ ಮತ್ತು ಕೆಂಪುಚುಕ್ಕೆಯು ಭಾರತೀಯ ಮಹಿಳೆಯ ಸಿಂಧೂರವಾಗುವುದರಿಂದ ಈ ಬಣ್ಣಗಳನ್ನು ಲಾಂಛನಕ್ಕೆ ಬಳಸಲಾಗಿದೆ. 'ಶಕ್ತಿ' ಅಕ್ಷರದ 'ತ' ಒತ್ತಕ್ಷರವು ಕೀಲಿಯಂತಿದ್ದು, ಕೀಲಿಯು ಮಹಿಳಾ ಸಬಲೀಕರಣದ ಚಾಲನೆಗೆ ನೀಡಿರುವ  ಸಂಕೇತವನ್ನು ಸೂಚಿಸುತ್ತದೆ. ಹಾಗಾಗಿ ಒಟ್ಟಾರೆ ಈ ಲಾಂಛನವು ಮಹಿಳೆಯರ ಸಬಲೀಕರಣದತ್ತ ಇಟ್ಟಿರುವ ದಿಟ್ಟ ಹೆಜ್ಜೆಯ ಪ್ರತೀಕವಾಗಿದೆ.



## ಮಹಿಳೆಯರಿಂದ ದೇಶದಲ್ಲಿ ಬದಲಾವಣೆ ಸಾಧ್ಯ

**ಭಾರತದ ಸಾರ್ವಜನಿಕ ವಲಯದಲ್ಲಿ ಮಹಿಳೆಯರು ದೇಶದಲ್ಲಿ 24% ರಷ್ಟು ಮಾತ್ರ ಭಾಗವಹಿಸುತ್ತಿದ್ದಾರೆ. ಸಾಮಾಜಿಕವಾಗಿ ಮಹಿಳೆಯರು ಹೆಚ್ಚು ಪಾಲ್ಗೊಂಡಾಗ ಅಂತಹ ದೇಶದಲ್ಲಿ ಬದಲಾವಣೆ ಮತ್ತು ಅಭಿವೃದ್ಧಿ ಸಾಧ್ಯ. ಹೆಣ್ಣು ಮಕ್ಕಳಲ್ಲಿ ಶಕ್ತಿ ತುಂಬಿದಾಗ ಪ್ರಗತಿ ಕಾಣಬಹುದು. ಶಕ್ತಿ ಯೋಜನೆ ಮೂಲಕ ಮಹಿಳೆಯರಿಗೆ ನಾವು ಶಕ್ತಿ ತುಂಬುತ್ತಿದ್ದೇವೆ. ಈ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತದೆ,  ಆರ್ಥಿಕ ಪರಿಸ್ಥಿತಿ ಹದಗೆಡಲಿದೆ ಎಂಬ ಯಾವುದೇ ಕುಹಕದ ಮಾತುಗಳಿಗೆ ಕಿವಿಗೊಡಬಾರದು. ಸಮಾಜದಲ್ಲಿ ಅಶಕ್ತರನ್ನು ಮುಂದೆ ತರುವ, ಅವರಿಗೆ ಪುಷ್ಠಿ ತುಂಬುವ ಕೆಲಸದಲ್ಲಿ ಸರ್ಕಾರ ನಿರತವಾಗಿದೆ. ಎಲ್ಲಾ ಜಾತಿ, ಧರ್ಮದ ಬಡವರನ್ನು  ಸಾಮಾಜಿಕ ಮತ್ತು ಆರ್ಥಿಕವಾಗಿ ಮುನ್ನಡೆಸಿ ಅಸಮಾನತೆ ಕಡಿಮೆ ಮಾಡುತ್ತೇವೆ. ಶ್ರೀಮಂತರ ಕೈಯಲ್ಲಿ ಹಣ ಇದ್ದರೆ ಅದು ನಿರುಪಯುಕ್ತ. ಆದರೆ ಬಡವರಲ್ಲಿದ್ದರೆ ಉಪಯುಕ್ತ. ಬಡವರ ಬಳಿ ಹಣ ಇರುವಂತೆ ಮಾಡುವುದೇ ನಮ್ಮ ಸರ್ಕಾರದ ಪ್ರಾಥಮಿಕ ಕೆಲಸ.**

ಸಿದ್ದರಾಮಯ್ಯ
ಮುಖ್ಯಮಂತ್ರಿಗಳು



Downloaded From:www.kpscvaani.com



## ಶಕ್ತಿ ಯೋಜನೆಗೆ ಬಲವರ್ಧನೆ

**ಈ ಯೋಜನೆಯ ಬಲವರ್ಧನೆಗಾಗಿ ಪ್ರಸಕ್ತ ವರ್ಷದಲ್ಲಿ ನಾಲ್ಕೂ ನಿಗಮಗಳಿಗೆ ಒಟ್ಟು 1894 ಹೊಸ ವಾಹನಗಳ ಸೇರ್ಪಡೆಗೆ ಕ್ರಮಕೈಗೊಳ್ಳಲಾಗಿದ್ದು, ಆದಾಗ್ಯೂ, ಶಕ್ತಿ ಯೋಜನೆ ಅನುಷ್ಠಾನಗೊಂಡ ಮೇಲೆ ಸಾರ್ವಜನಿಕ ಬೇಡಿಕೆಗನುಸಾರವಾಗಿ ಹೆಚ್ಚುವರಿ ಬಸ್ಸುಗಳ ಸೇರ್ಪಡೆಗೆ ಮತ್ತು ಅಗತ್ಯಕ್ಕನುಸಾರ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಸಾರಿಗೆ ಇಲಾಖೆಯು ಸನ್ನದ್ಧವಾಗಿದೆ. ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾದಲ್ಲಿ, ಬಸ್ಸುಗಳ ಬೇಡಿಕೆ ಅಧಿಕವಾಗುವ ಸಾಧ್ಯತೆ ಕಂಡುಬಂದರೆ ಅಂತಹ ಸಂದರ್ಭದಲ್ಲಿ ಬಸ್ಸುಗಳ ಕೊರತೆ ನೀಗಿಸಲು ಅನುಸೂಚಿಗಳ ವೇಳಾಪಟ್ಟಿ/ಮಾರ್ಗ ಪರಿಷ್ಕರಣೆ ಮಾಡಲಾಗುವುದು.**

**–ಅನ್ಬು ಕುಮಾರ್**
**ವ್ಯವಸ್ಥಾಪಕ ನಿರ್ದೇಶಕರು,**
**ಕೆ.ಎಸ್.ಆರ್.ಟಿ.ಸಿ**

ಇಂತಹ ಅಭೂತಪೂರ್ವ ಶಕ್ತಿ ಯೋಜನೆಗೆ ವಿಧಾನಸೌಧದ ಪೂರ್ವದ್ವಾರದ ಮೆಟ್ಟಿಲುಗಳ ಮುಂಭಾಗದಲ್ಲಿ ಜೂನ್ 11 ರ ಅಪರಾಹ್ನ ಚಾಲನೆ ನೀಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಕ್ತಿ – ಸಬಲೀಕರಣದತ್ತ ಮಹಿಳೆಯರ ಪಯಣ ಎಂಬ ಘೋಷವಾಕ್ಯದ ಲಾಂಛನ, ಶಕ್ತಿ ಯೋಜನೆಯ ಸ್ಮಾರ್ಟ್ ಕಾರ್ಡ್ ಬಿಡುಗಡೆ ಮಾಡಿದರು. ಮಹಿಳಾ ಸಬಲೀಕರಣದತ್ತ ದಿಟ್ಟ ಹೆಜ್ಜೆ ಎಂಬ ಸ್ಟಿಕ್ಕರ್ ಅನ್ನು ಲೋಕಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಸಾರಿಗೆ ಸಚಿವರಾದ ರಾಮಲಿಂಗಾ ರೆಡ್ಡಿ ಮಾತನಾಡಿ, ಎಕ್ಸ್ ಪ್ರೆಸ್ ಸೇರಿದಂತೆ ರಾಜ್ಯದ ಶೇ 90ಕ್ಕೂ ಹೆಚ್ಚು ಸಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಮಹಿಳೆಯರಿಗೆ ಅವಕಾಶ ಕಲ್ಪಿಸಲಾಗಿದೆ. ಇಡೀ ದೇಶದಲ್ಲಿ ಅತ್ಯುತ್ತಮ ಸಾರಿಗೆ ಎನ್ನುವ ಖ್ಯಾತಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಭಾಜನವಾಗಿದ್ದು, ಮಹಿಳೆಯರ ಪ್ರಯಾಣದ ಟಿಕೆಟ್ ಮೊತ್ತವನ್ನು ಸಾರಿಗೆ ಸಂಸ್ಥೆಗೆ ಸರ್ಕಾರ ಭರಿಸಲಿದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಹೆಣ್ಣು ಕುಟುಂಬದ ಕಣ್ಣು, ಯಾವುದೇ ಊರಿಗೆ ಹೋದರೂ ಅಲ್ಲಿನ ಗ್ರಾಮ ದೇವತೆ ಹೆಸರು ಕೇಳುತ್ತೇವೆ. ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ಮಹೋನ್ನತ ಸ್ಥಾನವಿದ್ದು, ಇಂತಹ ಮಹಿಳೆಯರ ಶ್ರೇಯೋಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಲಿದೆ. ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ ಅವರು ಚುನಾವಣಾ ಪ್ರಚಾರ ಸಂದರ್ಭದಲ್ಲಿ ಮಂಗಳೂರಿನಲ್ಲಿ ಐದನೇ ಗ್ಯಾರೆಂಟಿಯಾದ ಶಕ್ತಿ ಯೋಜನೆ ಜಾರಿ ಮಾಡುವುದಾಗಿ ಪ್ರಕಟಿಸಿದ್ದು, ಅದನ್ನೀಗ ಸಾಕಾರಗೊಳಿಸಿದ್ದೇವೆ ಎಂದು ಹೆಮ್ಮೆಯಿಂದ ಹೇಳಿದರು.

ಬಳಿಕ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಧರ್ಮಸ್ಥಳಕ್ಕೆ ತೆರಳುವ ಬಸ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮತ್ತು ಸಾರಿಗೆ ಸಚಿವರಾದ ರಾಮಲಿಂಗಾ ರೆಡ್ಡಿ ಅವರು ಹಸಿರು ನಿಶಾನೆ ತೋರಿ, ಮಹಿಳಾ ಪ್ರಯಾಣಿಕರಿಗೆ ಗುಲಾಬಿ ಹೂ ನೀಡಿ ಶುಭ ಹಾರೈಸಿದರು.

ಪ್ರಸ್ತುತ ರಾಜ್ಯದ 41.95 ಲಕ್ಷ ಮಹಿಳೆಯರು ಸರ್ಕಾರಿ ಬಸ್‌ಗಳಲ್ಲಿ ಸರಾಸರಿ ಪ್ರಯಾಣಿಸುತ್ತಿದ್ದು, ಈ ಯೋಜನೆ ಜಾರಿಯಾದ ನಂತರ ಧಾರ್ಮಿಕ ಪ್ರವಾಸೋದ್ಯಮ ಅನನ್ಯವಾಗಿ ಬೆಳವಣಿಗೆಯಾಗುವ ನಿರೀಕ್ಷೆಯನ್ನು ಮೂಡಿಸಿದೆ.

ಒಟ್ಟಿನಲ್ಲಿ ಈ ಯೋಜನೆಯಡಿ ಜೂನ್ 11 ರಿಂದ ರಾಜ್ಯದ ಮಹಿಳೆಯರು, ವಿದ್ಯಾರ್ಥಿನಿಯರು, ಮತ್ತು ಲಿಂಗತ್ವ ಅಲ್ಪಸಂಖ್ಯಾತರು ರಾಜ್ಯದಾದ್ಯಂತ ಸರ್ಕಾರಿ ಬಸ್‌ನಲ್ಲಿ ಖುಷಿ ಖುಷಿಯಾಗಿ ಉಚಿತ ಪ್ರಯಾಣ ಮಾಡುತ್ತಿದ್ದಾರೆ. ■



Downloaded From:www.kpscvaani.com



# ಗ್ಯಾರಂಟಿ ಯೋಜನೆಗಳಿಗೆ ಚಾಲನೆ ನೀಡುತ್ತಿರುವ ಸರ್ಕಾರ

**ಚುನಾವಣೆಗೆ ಮುನ್ನ ಘೋಷಣೆ ಮಾಡಿದ್ದ ಐದು ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಗೆ ಸರ್ಕಾರ ಚಾಲನೆ ನೀಡಿದೆ.**

**ಮಂಜುನಾಥ್ ಚಾಂದ್**

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಶಕ್ತಿ' ಯೋಜನೆಗೆ ಚಾಲನೆ ಸಿಕ್ಕಿದೆ. ಅಧಿಕಾರಕ್ಕೆ ಬರುವುದಕ್ಕೂ ಮುನ್ನ ಕಾಂಗ್ರೆಸ್ ಪಕ್ಷ ಘೋಷಿಸಿದ ಐದು 'ಗ್ಯಾರಂಟಿ ಯೋಜನೆ'ಗಳಲ್ಲಿ ಅತ್ಯಂತ ಜನಪ್ರಿಯವಾದುದು ಮಹಿಳೆಯರಿಗೆ ಸರ್ಕಾರಿ ಬಸ್ಸಿನಲ್ಲಿ ಉಚಿತ ಪ್ರಯಾಣ. ಈಗ ಅದರ ಅನುಷ್ಠಾನದಿಂದ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಂಡಿದೆ.

ಇಂತಹ ಯೋಜನೆಗಳನ್ನು ಆರಂಭಿಸುವುದರಿಂದ ಬೊಕ್ಕಸದ ಮೇಲೆ ಭಾರೀ ದೊಡ್ಡ ಹೊರೆ ಬೀಳುತ್ತದೆ, ಹಾಗಾಗಿ ಇದನ್ನು ಜಾರಿಗೆ ತರಲು ಅಸಾಧ್ಯ ಎಂಬ ಟೀಕೆಗಳಿಗೆ ಸರ್ಕಾರ ಈ ಮೂಲಕ ಕಡಿವಾಣ ಹಾಕಿದೆ. ಖರ್ಚು–ವೆಚ್ಚಗಳಿಗೆ ಅಂಕುಶ ಹಾಕಿ, ತೆರಿಗೆ ಸಂಗ್ರಹದ ಕೆಲಸವನ್ನು ಕಟ್ಟುನಿಟ್ಟಾಗಿ ಮಾಡಿದರೆ ಬೊಕ್ಕಸಕ್ಕೆ ಭಾರವಾಗದಂತೆ ಜಾರಿ ಸಾಧ್ಯವಿದೆ. ಎಲ್ಲಕ್ಕಿಂತ ಮುಖ್ಯವಾಗಿ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವ ನೂರು ಯೋಜನೆಗಳಿಗಿಂತ ಇಂತಹ ಜನಪರವಾದ ಐದು ಯೋಜನೆಗಳು ಸಾಕು. ಯಾವ ಮಧ್ಯವರ್ತಿಯೂ ಇಲ್ಲದೆ ಒಂದು ಯೋಜನೆ ಜನರನ್ನು ನೇರವಾಗಿ ತಲುಪುತ್ತದೋ ಅದೇ ಆ ಯೋಜನೆಯ ಯಶಸ್ಸು.

ಆವತ್ತು ಬೆಳಿಗ್ಗೆ ಆ ತಾಯಿ ತನ್ನ ಮೊಮ್ಮಗನ ಗೃಹ ಪ್ರವೇಶಕ್ಕೆ ಹೊರಟಿದ್ದಳು. ಅಪ್ಪಟ ಉತ್ತರ ಕರ್ನಾಟಕ ಶೈಲಿಯ ಟೋಪ ಸೆರಗಿನ ಸೀರೆ ಉಟ್ಟಿದ್ದ ಆಕೀ ತಾನು ಹತ್ತುವ ಸರ್ಕಾರಿ ಬಸ್ಸಿನ ಬಾಗಿಲಿಗೆ ಶಿರವೊತ್ತಿ ನಮಸ್ಕರಿಸಿದಳು.

ಇದಕ್ಕೆ ಕಾರಣವಿಷ್ಟೇ. ಅಂದು ಜೂನ್ 11. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಶಕ್ತಿ' ಯೋಜನೆಯನ್ನು ಜಾರಿಗೆ ತಂದ ದಿನ. ಮಹಿಳೆಯರಿಗೆ ಸರ್ಕಾರಿ ಬಸ್ಸಿನಲ್ಲಿ ಉಚಿತ ಪ್ರಯಾಣದ ಸೌಲಭ್ಯಕ್ಕೆ ಚಾಲನೆ ನೀಡಿದ ದಿನ. ಇಂತಹ ಜನಪರವಾದ ಸೌಕರ್ಯವನ್ನು ಒದಗಿಸಿದ ರಾಜ್ಯ ಸರ್ಕಾರಕ್ಕೆ ಆ ತಾಯಿ ಕೃತಜ್ಞತೆ ಸಲ್ಲಿಸಿದ ಪರಿ ಅದಾಗಿತ್ತು.

ಆಕೆಯ ಹೆಸರು ನಿಂಗವ್ವ ಸಿಂಗಾಡಿ. ಬೆಳಗಾವಿ ಜಿಲ್ಲೆ ಸಂಗೊಳ್ಳಿ ಗ್ರಾಮ ಸವದತ್ತಿ ಎಂಬಲ್ಲಿ ಆಕೆ ಏರಿದ್ದು ಧಾರವಾಡ–ಗೋಕಾಕ್ ನಡುವಿನ ಬಸ್ಸನ್ನು. ಇಡೀ ಜೀವನವನ್ನು ಕಾಯಕವೆಂದೇ ನಂಬಿ ಸವೆಸಿದ್ದ ತಾಯಿಗೆ ಜೀವನದಲ್ಲಿ ಮೊದಲ ಬಾರಿಗೆ ಪ್ರಯಾಣವೇ



Downloaded From:www.kpscvaani.com



"ನಾವು ಯೋಜನೆಗಾಗಿ ಎಷ್ಟು ಅನುದಾನವನ್ನು ಖರ್ಚು ಮಾಡುತ್ತೇವೆ ಎನ್ನುವುದಕ್ಕಿಂತ ಯಾರಿಗಾಗಿ ಆ ಹಣವನ್ನು ವಿನಿಯೋಗ ಮಾಡುತ್ತಿದ್ದೇವೆ ಎನ್ನುವುದು ಮುಖ್ಯ. ಈ ಹೊತ್ತಿನಲ್ಲಿ ನೂರು ಟೀಕೆಗಳು ಎದುರಾದರೂ ಅದ್ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ಗುರಿಯೆಡೆಗೆ ಹೆಜ್ಜೆ ಹಾಕುತ್ತೇವೆ"

**–ಸಿದ್ದರಾಮಯ್ಯ,** ಮುಖ್ಯಮಂತ್ರಿಗಳು

ಉಚಿತ ಎಂದು ಹೇಳಿದಾಗ ನಂಬಲಿಕ್ಕೇ ಸಾಧ್ಯವಾಗಲಿಲ್ಲ. ತಕ್ಷಣ ಆಕೆ ಬಸ್ಸಿನ ಮೆಟ್ಟಿಲುಗಳಿಗೇ ನಮಸ್ಕಾರ ಮಾಡಿ ಇಂತಹುದೊಂದು ಯೋಜನೆಯನ್ನು ಜಾರಿಗೆ ತಂದ ಸರ್ಕಾರಕ್ಕೆ ಆಶೀರ್ವಾದ ಮಾಡಿದ್ದಳು. ಈ ಮೂಲಕ ತಾಯಿ ಮನಸ್ಸಿನ ನಿಂಗವ್ವ ಉಚಿತ ಪ್ರಯಾಣದ ಫಲವನ್ನು ಪಡೆದು ಸರ್ಕಾರದ ಯೋಜನೆಯ ನಿಜವಾದ ವಾರಸುದಾರರು ಯಾರು ಮತ್ತು ಯಾಕೆ ಇಂತಹ ಯೋಜನೆಗಳು ಬೇಕು ಎಂಬುದಕ್ಕೆ ಆಕೆ ಸಾಕ್ಷಿಯಾಗಿದ್ದಳು.

ಇದು ಕೇವಲ ಒಂದು ಉದಾಹರಣೆ ಮಾತ್ರ ಆಗಿತ್ತು. ಅಂದು ರಾಜ್ಯದ ಉದ್ದಗಲಕ್ಕೂ ಮಹಿಳಾ ವೃಂದದಲ್ಲಿ ಸಂಭ್ರಮದ ಹೊಳೆ ಹರಿದಿತ್ತು. ಬೆಳಗಾವಿಯ ತಾಯಿ ನಿಂಗವ್ವ ಈ ಎಲ್ಲ ಮಹಿಳೆಯರ ಪಾಲಿನ ಪ್ರತಿನಿಧಿಯಾಗಿದ್ದಳು. ಲಕ್ಷಾಂತರ ಮಂದಿ ಮಹಿಳೆಯರ ಅವ್ಯಕ್ತ ಭಾವನೆಗಳೂ ಇದೇ ಆಗಿದ್ದವು ಎಂಬುದರಲ್ಲಿ ಅನುಮಾನವಿರಲಿಲ್ಲ. ಅಷ್ಟಕ್ಕೂ ನಿಂಗವ್ವ ಮತ್ತು ಆಕೆಯಂತಹ ತಾಯಂದಿರು ಹತ್ತಿದ್ದು ಐಷಾರಾಮಿ ಬಸ್ಸನ್ನಲ್ಲ, ಬಡ–ಮಧ್ಯಮ ವರ್ಗದವರ ವಾಹನವೆಂಬ ಖ್ಯಾತಿಗೆ ಒಳಗಾದ ಸರ್ಕಾರಿ



ಬಸ್ಸನ್ನು. ಅಂದರೆ ಸರ್ಕಾರ ಈ ಯೋಜನೆಗಾಗಿ ವಿನಿಯೋಗ ಮಾಡುವ ಪ್ರತಿಯೊಂದು ಕಾಸೂ ಕೂಡ ಬಡ ಹಾಗೂ ಮಧ್ಯಮವರ್ಗದವರಿಗೆ ಸಂದಂತ್ತಾಯಿತು. ಇಂತಹುದನ್ನು ಹಂಗಿಸುವ ಮತ್ತು ಇದಕ್ಕೆ ಅರ್ಥಶಾಸ್ತ್ರದ ಸಿದ್ಧಾಂತವನ್ನು ಮುಂದಿಡುವವರು ಸಾಮಾಜಿಕ ನ್ಯಾಯದ ವ್ಯಾಖ್ಯಾನ ಅರಿಯದವರು.

ಸರ್ಕಾರದ ಯೋಜನೆಗಳು ಉಳ್ಳವರನ್ನು ಓಲೈಸುವುದನ್ನು ಬಿಟ್ಟು ತಳ ಸಮುದಾಯವನ್ನು, ಹಸಿದವರನ್ನು, ರಟ್ಟೆ ಬತ್ತುವಂತೆ ದುಡಿದವರನ್ನು ಪೊರೆಯುವ ಕೆಲಸ ಮಾಡಿದಾಗ ಇಂತಹ ಪ್ರತಿಕ್ರಿಯೆಗಳು ಬರುತ್ತವೆ. ಈ ಎಲ್ಲ 'ಬಿಟ್ಟಿ ಭಾಗ್ಯ'ಗಳ ಔಚಿತ್ಯವನ್ನೂ, ಅದು ತಂದೊಡ್ಡುವ ಖರ್ಚಿನ ಬಾಬತ್ತನ್ನು, ರಾಜ್ಯದ ಬಜೆಟ್ ಮೇಲೆ ಬೀಳುವ ಹೊರೆಯನ್ನೂ ಪ್ರಶ್ನಿಸುವವರು ದುಡಿಯುವ ವರ್ಗದ ದನಿಗಳಲ್ಲ. ಆ ದಿನದ ದುಡಿಮೆಯಲ್ಲಿ ಹಸಿವನ್ನು ನೀಗಿಸಿಕೊಂಡವರಲ್ಲ. ಇಂತಹ ಯೋಜನೆಗಳನ್ನು 'ದುಡ್ಡಿನ ತಕ್ಕಡಿ'ಯಲ್ಲಿಟ್ಟು ತೂಗಿ ನೋಡುವವರು ಸಾಮಾಜಿಕ ಸಮಾನತೆಯನ್ನೇ ಅವಮಾನಿಸುವವರು. ಈ ಎಲ್ಲ ಹಿನ್ನೆಲೆಯಲ್ಲಿ ನೋಡಿದರೆ ಇತ್ತೀಚಿನ ಇತಿಹಾಸದಲ್ಲಿ, ಈಗಿನ ರಾಜಕೀಯ ವಿದ್ಯಮಾನಗಳಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ನಿಲುವು ಐತಿಹಾಸಿಕ ನಡೆಯೇ ಆಗಿದೆ.

ಒಂದು ಸಣ್ಣ ಪ್ರಯಾಣಕ್ಕೂ ಕೈಯೊಡ್ಡುವ ಸ್ಥಿತಿಯಲ್ಲಿರುವ ಅನೇಕ ಮಹಿಳೆಯರಿಗೆ ಸಿಕ್ಕ ಬಹುದೊಡ್ಡ ಸ್ವಾತಂತ್ರ್ಯವಿದು ಎಂದು ಬಣ್ಣಿಸುತ್ತಿರುವುದು ಒಂದು ಕಡೆಯಾದರೆ ದುಡಿದುಣ್ಣುವ ಮಹಿಳೆಯರ ಬಹುದೊಡ್ಡ ವರ್ಗ ಬಸ್ ಪ್ರಯಾಣದಿಂದ ಉಳಿಯುವ ಹಣವನ್ನು ತಮ್ಮ ಸಣ್ಣ ಪುಟ್ಟ ಆಸೆಗಳನ್ನು ಪೂರೈಸಿಕೊಳ್ಳುವತ್ತ ಯೋಚಿಸುತ್ತಾರೆ ಎನ್ನುವುದು ಮಾತ್ರ ದಿಟ. ಅವುಗಳಲ್ಲಿ ಮನೆಕರ್ಚು, ಮಕ್ಕಳ ಶಿಕ್ಷಣ, ಅಪ್ಪ–ಅಮ್ಮನ ಆರೋಗ್ಯ ಮೊದಲಾದ ಅಂಶಗಳು ಸೇರಿವೆ.

"ಸಮಾಜದಲ್ಲಿ ಅರ್ಧದಷ್ಟಿರುವ ಮಹಿಳೆಯರು ಶತಮಾನಗಳ ಕಾಲದಿಂದ ಅಕ್ಷರ ಸಂಸ್ಕೃತಿ, ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಅಂಥವರಿಗೆ ಶಕ್ತಿಯನ್ನು ತುಂಬಿದಾಗ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳನ್ನು ಕ್ರಮೇಣ ಅಳಿಸಿ ಹಾಕಲು ಸಾಧ್ಯವಾಗುತ್ತದೆ" ಎಂದು ಶಕ್ತಿ ಯೋಜನೆಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ ಮಾತು ಅರ್ಥಪೂರ್ಣವಾಗಿತ್ತು.

ಇದರ ಜೊತೆಗೆ ಚುನಾವಣೆಗೂ ಮುನ್ನ ಭರವಸೆ ನೀಡಿದ್ದ ಐದು ಜನ ಕಲ್ಯಾಣ ಯೋಜನೆಗಳನ್ನೂ ರಾಜ್ಯದಲ್ಲಿ



Downloaded From:www.kpscvaani.com

ಹಂತ ಹಂತವಾಗಿ ಜಾರಿಗೆ ತರುವ ಬಗ್ಗೆ ಸರ್ಕಾರ ಈಗಾಗಲೇ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಿದೆ. ಅದರ ಮೊದಲ ಹಂತವಾಗಿ ಜಾರಿಗೆ ಬಂದಿದ್ದೇ ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆ. ಪ್ರತಿಯೊಂದು ಮನೆಯ ಯಜಮಾನಿಗೆ 2000 ಮಾಸಿಕ ಭತ್ಯೆಯನ್ನು ನೀಡುವ 'ಗೃಹಲಕ್ಷ್ಮಿ' ಯೋಜನೆ ಆಗಸ್ಟ್ 15ರಿಂದ ಅನುಷ್ಠಾನಕ್ಕೆ ತರಲು ನಿರ್ಧರಿಸಲಾಗಿದೆ ಇವೆರಡೂ ಯೋಜನೆಗಳು ಸಾಕಾರಗೊಂಡರೆ ಪ್ರತಿ ಮನೆಯಲ್ಲಿ ಅಕ್ಷರಶಃ 'ಅಚ್ಛೇದಿನ್' ಜಾರಿಗೆ ಬಂದಂತಾಗುತ್ತದೆ.

ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಪೂರೈಕೆ ಮಾಡುವ 'ಗೃಹ ಜ್ಯೋತಿ', ಪ್ರತಿಯೊಂದು ಬಿಪಿಎಲ್ ಮತ್ತು ಅಂತ್ಯೋದಯ ಕುಟುಂಬಕ್ಕೆ ಹತ್ತು ಕೆಜಿ ಅಕ್ಕಿಯನ್ನು ನೀಡುವ 'ಅನ್ನ ಭಾಗ್ಯ' ಮತ್ತು ಪದವೀಧರರಿಗೆ ಮಾಸಿಕ 3000 ರೂ. ನೀಡುವ 'ಯುವನಿಧಿ' ಯೋಜನೆಗಳು ಇನ್ನೆರಡು ತಿಂಗಳಲ್ಲಿ ಜಾರಿಗೆ ಬರುವುದು ನಿಶ್ಚಿತವಾಗಿದೆ.

ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಜನರ ಸಂಕಷ್ಟದ ಹೊರೆಯನ್ನು ತಗ್ಗಿಸುವ ಇಂತಹ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ.  ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯದಂತೆ ಜನರ ಆಶೀರ್ವಾದದಿಂದ ಆರಿಸಿ ಬಂದ ಒಂದು ಸರ್ಕಾರ ಉಳ್ಳವರ ದನಿಯಾಗುವ ಬದಲು ಜನಸಾಮಾನ್ಯರ ದನಿಯಾಗಬೇಕು ಎಂಬ ಕಳಕಳಿ ಈ ಪ್ರಯತ್ನದ ಹಿಂದೆ ಇದೆ ಎಂಬುದು ಇದರಿಂದ ವೇದ್ಯವಾಗುತ್ತದೆ. 'ಅಭಿವೃದ್ಧಿ' ಎಂದರೆ ಕೇವಲ ಕಟ್ಟಡ, ಸೇತುವೆ, ರಸ್ತೆಗಳಲ್ಲ, ನಿಜವಾದ 'ಅಭಿವೃದ್ಧಿ' ಎಂದರೆ ಜನರ ಶ್ರೇಯೋಭಿವೃದ್ಧಿ ಎಂಬುದು ಇಲ್ಲಿ ನಿಚ್ಚಳವಾಗಿ ಕಾಣುತ್ತಿದೆ. ಇದು ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕಂಡ 'ಸಾಮಾಜಿಕ ಪ್ರಜಾಪ್ರಭುತ್ವ'ದ ಕಿಂಡಿಯಲ್ಲಿ ಕಾಣುವ ಪ್ರಯತ್ನವೂ ಹೌದು.

ಅವಳು ಅಂದರೆ ಅವ್ವ, ಅಕ್ಕ, ಅಜ್ಜಿ, ಪತ್ನಿ ಯಾರಾದರೂ, ಅವಳಿಗೊಂದು ಆರ್ಥಿಕ ಸ್ವಾತಂತ್ರ್ಯ, ಮತ್ತು ಸಾಮಾಜಿಕ ಸ್ವಾತಂತ್ರ್ಯ, ಇವೆರಡನ್ನೂ ತಂದುಕೊಟ್ಟಿದ್ದು ಸರ್ಕಾರ ಆರಂಭಿಸಿದ 'ಶಕ್ತಿ' ಯೋಜನೆ. ಅವಳು ಕೈಯಲ್ಲಿ ಚಿಕ್ಕಾಸೂ ಇಲ್ಲದೇ ತವರಿಗೆ ಹೊರಟು ಬಿಡಬಹುದು ಅಥವಾ



ಕೆಲಸಕ್ಕೆ ಹೊರಡಬಹುದು. ಇಂತಹ ಮುಕ್ತ ಸ್ವಾತಂತ್ರ್ಯ ಲಭ್ಯವಾಗಿದ್ದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಮಹಿಳೆಯರಿಗೆ ಆರಂಭಿಸಿದ ಉಚಿತ ಪ್ರಯಾಣದ ಸೌಲಭ್ಯದಿಂದ. ಸರ್ಕಾರ ಆಗಸ್ಟ್ 15ರಿಂದ ಆರಂಭಿಸುವ ಗೃಹಲಕ್ಷ್ಮಿ ಯೋಜನೆಯೂ ಜಾರಿಗೆ ಬಂದುಬಿಟ್ಟರೆ ಅವರಿಗೆ ಪರಿಪೂರ್ಣ ಸ್ವಾತಂತ್ರ್ಯ ಖಚಿತ.

ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿ ನೀಡುವ ಗ್ಯಾರಂಟಿಯಿಂದ ಜನರನ್ನು ಸೋಮಾರಿ ಮಾಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ ಮೂರು ಹೊತ್ತು ಊಟ ಮಾಡುವವರಿಗೆ ಇದರ ಬೆಲೆ ಗೊತ್ತಾಗುವುದಿಲ್ಲ. ಅಲ್ಲದೆ 10 ಕೆಜಿ ಅಕ್ಕಿ ಸಿಕ್ಕ ಕೂಡಲೇ ಯಾರೂ ಕೆಲಸ ಮಾಡದೇ ಕೂರುವುದಿಲ್ಲ. ಆಹಾರಧಾನ್ಯ ಒಂದರಿಂದಲೇ ಜೀವನ ಕೂಡ ಸಾಗುವುದಿಲ್ಲ. ಆಹಾರಧಾನ್ಯ ಸಿಕ್ಕರೆ ಉದ್ಯೋಗ ಮಾಡುವುದಿಲ್ಲ ಎನ್ನುವುದಾದರೆ ಉಳ್ಳವರೆಲ್ಲರೂ ಕೆಲಸ ಮಾಡದೇ ಕೂರಬೇಕಾಗಿತ್ತು. ಇದು ಹಸಿದವರ ಹೊಟ್ಟೆ ತುಂಬಿಸಲು ಸರ್ಕಾರ ಮಾಡುತ್ತಿರುವ ನೆರವು. ಇನ್ನು ನಿಜವಾಗಿಯೂ ಉಚಿತ ಅಕ್ಕಿಯ ಅವಶ್ಯಕತೆ ಇಲ್ಲದವರು ಈ ಸೌಲಭ್ಯವನ್ನು ಪಡೆದುಕೊಳ್ಳದಿದ್ದರೆ ಖಂಡಿತವಾಗಿ ಉಚಿತ ಅಕ್ಕಿಯ ಅವಶ್ಯಕತೆ ಇರುವವರಿಗೆ ನೀಡಲು ನಮ್ಮ ರಾಜ್ಯದಲ್ಲಿ ಸಿಗುವ ಅಕ್ಕಿಯೇ ಸಾಕಾಗಬಹುದು.

ಯುವನಿಧಿ ಯೋಜನೆಯಡಿ 2022-23 ನೇ ಶೈಕ್ಷಣಿಕ ವರ್ಷದಲ್ಲಿ ಪದವಿ ಪೂರೈಸಿದವರಿಗೆ 3 ಸಾವಿರ ಹಾಗೂ ಡಿಪ್ಲೊಮಾ ಪೂರೈಸಿದವರಿಗೆ 1500 ರೂ.ಗಳನ್ನು 24 ತಿಂಗಳ ಕಾಲ ನಿರುದ್ಯೋಗಿ ಭತ್ಯೆ ನೀಡಲಾಗುವುದು. ಈ ಮಧ್ಯೆ ಅವರಿಗೆ ಕೆಲಸ ಸಿಕ್ಕರೆ ಸೌಲಭ್ಯವನ್ನು ನಿಲ್ಲಿಸಲಾಗುವುದು. ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕುಟುಂಬದ ಮಕ್ಕಳಿಗೆ ಈ ಭತ್ಯೆಯು ತುಂಬಾ ಸಹಕಾರಿಯಾಗಲಿದೆ. ಕೆಲಸಕ್ಕೆ ಅರ್ಜಿ ಸಲ್ಲಿಸುವ ಖರ್ಚು, ಕೆಲಸ ಹುಡುಕುವ ಓಡಾಟದ ಖರ್ಚಿಗೆ ಪೋಷಕರನ್ನು ಅವಲಂಬಿಸುವುದು ತಪ್ಪಲಿದೆ. ಇದರಿಂದ ಕುಟುಂಬದ ಆರ್ಥಿಕ ಹೊರೆಯು ಕಡಿಮೆಯಾಗಲಿದೆ.

ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವ ಗೃಹ ಜ್ಯೋತಿ ಸೌಲಭ್ಯವನ್ನು ಪಡೆದುಕೊಳ್ಳಲು ಜೂನ್ 18 ರಿಂದ ಅರ್ಜಿ ಸಲ್ಲಿಕೆಗೆ  ಚಾಲನೆ ನೀಡಲಾಗಿದೆ. ಗ್ರಾಹಕರಿಗೆ ಉಚಿತ ವಿದ್ಯುತ್ ಪೂರೈಕೆ ಸಂಬಂಧ ಇಂಧನ ಇಲಾಖೆ ಈಗಾಗಲೇ ಆದೇಶ ಹೊರಡಿಸಿದೆ.

ಆಧಾರ್ ಸಂಖ್ಯೆ ಮತ್ತು ವಿದ್ಯುತ್ ಖಾತೆ ಸಂಖ್ಯೆ (ಆರ್‌ಆರ್ ಸಂಖ್ಯೆ) ಹಾಗೂ ಮೊಬೈಲ್ ನಂಬರ್ ನಮೂದಿಸಿ ಗ್ರಾಮ ಒನ್, ಗ್ರಾಮ ಪಂಚಾಯ್ತಿ, ನಾಡ ಕಚೇರಿ, ಬೆಂಗಳೂರು ಒನ್, ವಿದ್ಯುತ್ ಸರಬರಾಜು ಕಂಪನಿಯ ಸ್ಥಳೀಯ ಕಚೇರಿಗಳಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಇದಲ್ಲದೆ ಸೇವಾಸಿಂಧು ಪೋರ್ಟಲ್‌ನಲ್ಲಿ ಕೂಡ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿಕೊಂಡು ಅರ್ಜಿ ಸಲ್ಲಿಸಬಹುದು.

ಒಟ್ಟಿನಲ್ಲಿ ಈ ಎಲ್ಲಾ ಐದು ಗ್ಯಾರಂಟಿ ಯೋಜನೆಗಳು ತಳಸಮುದಾಯದ ಕುಟುಂಬಗಳಿಗೆ ಸಂಜೀವಿನಿಯಾಗಿ ಅವರನ್ನು ಆರ್ಥಿಕವಾಗಿ ಮೇಲೆತ್ತಲು ಶಕ್ತಿಯನ್ನು  ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸಲಿದೆ. ■


Downloaded From:www.kpscvaani.com

# ಸಚಿವ ಸಂಪುಟದ ನೂತನ ಸಚಿವರ ಕಿರು ಪರಿಚಯ

● ಚಂದ್ರಮುಖಿ

**ರಾಜ್ಯದಲ್ಲಿ ಅಧಿಕಾರ ಸೂತ್ರ ಹಿಡಿದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಕೇವಲ ಹದಿನೈದು ದಿನಗಳಲ್ಲಿ ಪೂರ್ಣ ಪ್ರಮಾಣದ ಸಚಿವ ಸಂಪುಟವನ್ನು ರಚಿಸಿದೆ. ಮೊದಲ ಕಂತಿನಲ್ಲಿ ಸಿಎಂ ಮತ್ತು ಡಿಸಿಎಂ ಸೇರಿದಂತೆ ಹತ್ತು ಮಂದಿಯ ಸಂಪುಟ ರಚಿಸಲಾಗಿತ್ತು. ಮೇ 27ರಂದು ನಡೆದ ಸಮಾರಂಭದಲ್ಲಿ 24 ಮಂದಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ನೂತನ ಸಚಿವರಿಗೆ ಅಧಿಕಾರದ ಗೋಪ್ಯತೆಯನ್ನು ಬೋಧಿಸಿದರು. 24 ನೂತನ ಸಚಿವರ ಖಾತೆ ಮತ್ತು ಕಿರುಪರಿಚಯವನ್ನು ಇಲ್ಲಿ ನೀಡಲಾಗಿದೆ.**

### ಎಚ್.ಕೆ.ಪಾಟೀಲ್:



ಎಪ್ಪತ್ತು ವರ್ಷ ವಯಸ್ಸಿನ **ಎಚ್.ಕೆ.ಪಾಟೀಲ್** ಅವರು ಹಿಂದಿನ ಬಾರಿ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಅವರು ಅಭೂತಪೂರ್ವವಾದ ಕೆಲಸ ಮಾಡಿದವರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಆರ್‌ಡಿಪಿಆರ್)ಯ ಪ್ರಾದರ್ಶಕತೆಗೆ ಕೇಂದ್ರ ಸರ್ಕಾರದಿಂದ ಸತತ ಮೂರು ಬಾರಿ ಇ–ಪುರಸ್ಕಾರ ಸಂದಿತ್ತು. ಮೂಲತಃ ಗದಗ ಜಿಲ್ಲೆಯ ಹುಲಕೋಟಿಯವರಾದ ಹನುಮಂತಗೌಡ ಕೃಷ್ಣೇಗೌಡ ಪಾಟೀಲ್ ಅವರು ಪ್ರತಿನಿಧಿಸುತ್ತಿರುವುದು ಗದಗ ವಿಧಾನಸಭಾ ಕ್ಷೇತ್ರವನ್ನು. ಹಿಂದೆ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರಗಳಲ್ಲಿ ನೀರಾವರಿ, ಕೃಷಿ, ಜವಳಿ ಖಾತೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದವರು. ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿಯೂ ಕೆಲಸ ಮಾಡಿದ ಪಾಟೀಲ್ ಅವರಿಗೆ ಈ ಬಾರಿ **ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಖಾತೆಯ** ಜವಾಬ್ದಾರಿಯನ್ನು ವಹಿಸಲಾಗಿದೆ. ಬಿಎಸ್‌ಸಿ ಹಾಗೂ ಕಾನೂನು ಪದವಿಯನ್ನು ಪಡೆದಿರುವ ಪಾಟೀಲರು ಸಹಕಾರಿ ಕ್ಷೇತ್ರದ ದಿಗ್ಗಜ ಎಂದೇ ಖ್ಯಾತರಾಗಿದ್ದ ಕೆ.ಎಚ್.ಪಾಟೀಲರ ಪುತ್ರ.

### ಕೃಷ್ಣ ಬೈರೇಗೌಡ:

ಐವತ್ತು ವರ್ಷ ವಯಸ್ಸಿನ **ಕೃಷ್ಣ ಬೈರೇಗೌಡ** ಅವರು ಆರು ಬಾರಿ ವಿಧಾನಸಭೆಯನ್ನು ಪ್ರವೇಶಿಸಿದ್ದು, ಮೂರನೇ ಬಾರಿ ಸಚಿವರಾಗಿದ್ದಾರೆ. ಬೆಂಗಳೂರಿನ ಬ್ಯಾಟರಾಯನಪುರ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಇರುವ ಜನರೊಂದಿಗೆ ನಿರಂತರ ಒಡನಾಟವನ್ನು ಕಾಯ್ದುಕೊಂಡವರು. ಸಿ.ಬೈರೇಗೌಡ ಅವರ ಪುತ್ರರಾಗಿರುವ ಇವರು ಬಿಬಿಎಂ ಮತ್ತು ಎಂಎ ಸ್ನಾತಕೋತ್ತರ ಪದವಿಯನ್ನು ಪಡೆದು ಅಮೆರಿಕದಲ್ಲಿ ಉದ್ಯೋಗ ನಿರ್ವಹಿಸುತ್ತಿದ್ದರು. ತಂದೆಯ ನಿಧನದ ಬಳಿಕ ರಾಜ್ಯ ರಾಜಕೀಯವನ್ನು ಪ್ರವೇಶಿಸಿದರು. ಮೊದಲಬಾರಿಗೆ 2003 ರಲ್ಲಿ ತಂದೆ ಪ್ರತಿನಿಧಿಸುತ್ತಿದ್ದ ವೇಮಗಲ್ ಕ್ಷೇತ್ರದಿಂದ ಸ್ಪರ್ಧಿಸಿ ವಿಜಯಿಯಾದರು. ವಿಧಾನಸಭೆಯನ್ನು ಪ್ರವೇಶಿಸಿದ ಅತ್ಯಂತ ಕಿರಿಯ ವಯಸ್ಸಿನ ನಾಯಕ ಎಂಬ ಹೆಗ್ಗಳಿಕೆ ಅವರದ್ದು. ಅಲ್ಲಿಂದ ಮುಂದೆ



ಅವರು ಸಂಪೂರ್ಣವಾಗಿ ಸಾಮಾಜಿಕ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕೃಷಿಯಲ್ಲಿ ಅವರಿಗೆ ವಿಶೇಷವಾದ ಆಸಕ್ತಿ. 2013ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಮೊದಲ ಬಾರಿಗೆ ಅವರು ಕೃಷಿ ಸಚಿವರಾದರು. ಬಳಿಕ 2018ರಲ್ಲಿ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಸಮ್ಮಿಶ್ರ ಸರ್ಕಾರ ರಚನೆಯಾದಾಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಖಾತೆ ಸಿಕ್ಕಿತು. ಈಗ ಇವರಿಗೆ ಬಹುಮುಖ್ಯವಾದ **ಕಂದಾಯ ಖಾತೆಯ** ಜವಾಬ್ದಾರಿಯನ್ನು ವಹಿಸಲಾಗಿದೆ.

### ದಿನೇಶ್ ಗುಂಡುರಾವ್:



ಐವತ್ತೊಂರು ವರ್ಷ ವಯಸ್ಸಿನ **ದಿನೇಶ್ ಗುಂಡುರಾವ್** ಅವರು ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಅವರ ಪುತ್ರ. ಈ ಹಿಂದೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಕೆಲಸ ಮಾಡಿದವರು. ದಿನೇಶ್ ಗುಂಡುರಾವ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್‌ನಲ್ಲಿ ಎಂಜಿನಿಯರಿಂಗ್ ಪದವೀಧರರು. ಸತತ ಐದನೇ ಬಾರಿ ಬೆಂಗಳೂರಿನ ಗಾಂಧಿನಗರ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಹಿಂದೆ ಆಹಾರ ಮತ್ತು ನಾಗರಿಕ ಸರಬರಾಜು ಖಾತೆಯನ್ನು ನಿರ್ವಹಿಸಿದ್ದ ಇವರು ಈ ಬಾರಿ **ಆರೋಗ್ಯ ಮತ್ತು ಕುಟುಂಬ ಕಲ್ಯಾಣ** ಸಚಿವರು. ತಮಿಳು ನಾಡು, ಪುದುಚೇರಿ ಮತ್ತು ಗೋವಾದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಕೆಲಸ ಮಾಡಿದವರು. ಸಮಾಜ ಸೇವೆಯಲ್ಲಿಯೂ ಇವರು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು.

### ಚೆಲುವರಾಯ ಸ್ವಾಮಿ:



ಅರವತ್ತೊಂರು ವರ್ಷ ವಯಸ್ಸಿನ **ಚೆಲುವರಾಯ ಸ್ವಾಮಿ** ಅವರು 1994ರಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರಾಗುವ ಮೂಲಕ ರಾಜಕೀಯ ಪ್ರವೇಶಿಸಿದರು. ಬಳಿಕ ಜಿ.ಪಂ. ಉಪಾಧ್ಯಕ್ಷರಾಗಿಯೂ ಸೇವೆ. ಮೂಲ ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಹೊಣಕೆರೆ ಹೋಬಳಿಯ ಇಜ್ಜಲಘಟ್ಟ ಗ್ರಾಮದವರು. ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಚೆಲುವರಾಯ ಸ್ವಾಮಿ ಅವರು ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪದವೀಧರರು. 1999ರಲ್ಲಿ ನಾಗಮಂಗಲ ಕ್ಷೇತ್ರದಿಂದ ವಿಧಾನಸಭೆ ಪ್ರವೇಶ. ಈ ಮೊದಲು ಜೆಡಿಎಸ್‌ನಲ್ಲಿದ್ದ ಇವರು 2004ರಲ್ಲಿ ಕುಮಾರಸ್ವಾಮಿ ಸರ್ಕಾರದ



Downloaded From:www.kpscvaani.com

ಅವಧಿಯಲ್ಲಿ ಆರೋಗ್ಯ ಸಚಿವರಾಗಿ ಮತ್ತೊಮ್ಮೆ ಸಮ್ಮಿಶ್ರ ಸರ್ಕಾರದಲ್ಲಿ ಸಾರಿಗೆ ಸಚಿವರಾಗಿ ಕಾರ್ಯನಿರ್ವಹಿಸಿದರು. ಈ ನಡುವೆ ಮಂಡ್ಯ ಲೋಕಸಭೆಯಿಂದ ಸ್ಪರ್ಧಿಸಿ ಸಂಸತ್ ಸದಸ್ಯರಾದರು. ಬಳಿಕ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದರು. ಈಗ ನಾಲ್ಕನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಚೆಲುವರಾಯ ಸ್ವಾಮಿ ಅವರಿಗೆ **ಕೃಷಿ ಖಾತೆಯ** ಜವಾಬ್ದಾರಿಯನ್ನು ವಹಿಸಲಾಗಿದೆ.

### ಡಾ. ಎಚ್.ಸಿ. ಮಹದೇವಪ್ಪ:



ಎಪ್ಪತ್ತು ವರ್ಷ ವಯಸ್ಸಿನ **ಡಾ. ಎಚ್.ಸಿ. ಮಹದೇವಪ್ಪ** ಅವರು ಆಯ್ಕೆ ಮಾಡಿಕೊಂಡಿದ್ದು ವೈದ್ಯಕೀಯ ಕ್ಷೇತ್ರವನ್ನು. ಆದರೆ ಬೆಳೆದಿದ್ದು ರಾಜಕೀಯ ಕ್ಷೇತ್ರದಲ್ಲಿ. ಎಂಬಿಬಿಎಸ್ ಪದವೀಧರರಾದ ಮಹದೇವಪ್ಪ ಅವರು ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ಹದಿನಾರು ಎಂಬ ಗ್ರಾಮದವರು. ಜನತಾ ಪಕ್ಷದಲ್ಲಿದ್ದ ಇವರು ವಿಧಾನಸಭೆಯನ್ನು ಪ್ರವೇಶ ಮಾಡಿದ್ದು 1985ರಲ್ಲಿ. ಟಿ.ನರಸೀಪುರ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಇವರು ಆರು ಬಾರಿ ಶಾಸಕರಾಗಿದ್ದಾರೆ. 2013ರಲ್ಲಿ ಮೊದಲ ಬಾರಿಗೆ ಸಚಿವರಾಗುವ ಮೂಲಕ ಲೋಕೋಪಯೋಗಿ ಖಾತೆಯನ್ನು ನಿರ್ವಹಿಸಿದರು. ಆ ಬಳಿಕ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಹೊಣೆ ಹೊತ್ತಿದ್ದ ಮಹದೇವಪ್ಪ ಅವರು ಈ ಬಾರಿ **ಸಮಾಜ ಕಲ್ಯಾಣ** ಸಚಿವರಾಗಿದ್ದಾರೆ.

### ಈಶ್ವರ ಖಂಡ್ರೆ:



ಅರವತ್ತೊಂದು ವರ್ಷ ವಯಸ್ಸಿನ **ಈಶ್ವರ ಖಂಡ್ರೆ** ಅವರು ಮಾಜಿ ಸಚಿವ ಭೀಮಣ್ಣ ಖಂಡ್ರೆ ಅವರ ಪುತ್ರ. ಭಾಲ್ಕಿ ಇವರ ಹುಟ್ಟೂರು. ದೊಡ್ಡಪ್ಪ ಅಪ್ಪ ಎಂಜಿನಿಯರಿಂಗ್ ಕಾಲೇಜಿನಿಂದ ಎಂಜಿನಿಯರಿಂಗ್ ಪದವಿ. ಭಾಲ್ಕಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಖಂಡ್ರೆ ಸತತ ನಾಲ್ಕನೇ ಬಾರಿ ವಿಧಾನಸಭೆ ಪ್ರವೇಶಿಸುತ್ತಿದ್ದಾರೆ. 2013ರಲ್ಲಿ ಸಿದ್ದರಾಮಯ್ಯ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಮೊದಲ ಬಾರಿಗೆ ಮಂತ್ರಿಯಾದರು. ಆಗ ಪೌರಾಡಳಿತ ಸಚಿವರಾಗಿದ್ದರು. 2018ರಿಂದ ಕಾಂಗ್ರೆಸ್ ಕಾರ್ಯಾಧ್ಯಕ್ಷರೂ ಆಗಿ ಕಾರ್ಯನಿರ್ವಹಿಸುತ್ತಿರುವ ಖಂಡ್ರೆ ಶಾಂತಿ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ ಆಗಿದ್ದಾರೆ. ಈ ಬಾರಿ ಈಶ್ವರ ಖಂಡ್ರೆ ಅವರಿಗೆ **ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಖಾತೆಯ** ಹೊಣೆಯನ್ನು ವಹಿಸಲಾಗಿದೆ.

### ಕೆ.ವೆಂಕಟೇಶ್:

ಎಪ್ಪತ್ತೈದು ವರ್ಷ ವಯಸ್ಸಿನ **ಕೆ.ವೆಂಕಟೇಶ್** ಅವರು ಪಿರಿಯಾಪಟ್ಟಣದ ಕಿತ್ತೂರು ಗ್ರಾಮದವರು. ಹಳೆಯ ಮೈಸೂರು ಭಾಗದ ಪ್ರಭಾವಿ ಒಕ್ಕಲಿಗ ನಾಯಕರಾದ ಕೆ.ವೆಂಕಟೇಶ್ ಅವರು ಜನತಾ ಪರಿವಾರದಲ್ಲಿ ಗುರುತಿಸಿಕೊಂಡವರು. ಸಿದ್ದರಾಮಯ್ಯ



ಕಾಂಗ್ರೆಸ್ ಸೇರಿಕೊಂಡಾಗ ಇವರೂ ಕೂಡ ಅನುಸರಿಸಿದರು. ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ವೆಂಕಟೇಶ್ ಅವರು ಮೊದಲ ಬಾರಿಗೆ ಶಾಸಕರಾಗಿದ್ದು 1985ರಲ್ಲಿ. ತಮ್ಮ ರಾಜಕೀಯ ಜೀವನದಲ್ಲಿ ಅನೇಕ ಏಳುಬೀಳುಗಳ ನಡುವೆಯೂ ಆರು ಬಾರಿ ವಿಧಾನಸಭೆಯನ್ನು ಪ್ರವೇಶಿಸಿರುವುದು ವಿಶೇಷ. ಬಿಎಸ್‌ಸಿ ಪದವೀಧರರಾಗಿರುವ ವೆಂಕಟೇಶ್ ಜೆ.ಎಚ್.ಪಟೇಲ್ ಮಂತ್ರಿಮಂಡಲದಲ್ಲಿಯೇ ಕಾಡಾ ಮಂತ್ರಿಯಾಗಿದ್ದರು. ಈ ಬಾರಿ ಅವರಿಗೆ **ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ** ಜವಾಬ್ದಾರಿ ದೊರೆತಿದೆ.

### ಕೆ.ಎನ್.ರಾಜಣ್ಣ:



ಎಪ್ಪತ್ತೆರಡು ವರ್ಷ ವಯಸ್ಸಿನ **ಕೆ.ಎನ್.ರಾಜಣ್ಣ** ಅವರು ವಾಲ್ಮೀಕಿ ಸಮುದಾಯದ ಪ್ರಮುಖ ನಾಯಕರು. ರಾಜಣ್ಣ ಅವರು ಬಿಎಸ್‌ಸಿ, ಕಾನೂನು ಪದವೀಧರರು. 1975ರಷ್ಟು ಹಿಂದೆಯೇ ಕ್ಯಾತ್ಸಂದ್ರ ಪಟ್ಟಣ ಪಂಚಾಯತ್ ಅಧ್ಯಕ್ಷರಾಗುವ ಮೂಲಕ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. 1998ರಲ್ಲಿ ವಿಧಾನ ಪರಿಷತ್ ಸದಸ್ಯರಾಗುವ ಮೂಲಕ ಶಕ್ತಿಕೇಂದ್ರವನ್ನು ಪ್ರವೇಶಿಸಿದರು. 2006ರಲ್ಲಿ ಅಂದು ಅಸ್ತಿತ್ವದಲ್ಲಿದ್ದ ಬೆಳ್ಳಾವಿ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಶಾಸಕರಾಗಿ ವಿಜಯಿಯಾದರು. ಬಳಿಕ ಮಧುಗಿರಿ ಕ್ಷೇತ್ರದಿಂದ ಆಯ್ಕೆಯಾದರು. 2018ರಲ್ಲಿ ಇವರಿಗೆ ಜನಾಶೀರ್ವಾದ ಸಿಕ್ಕಿರಲಿಲ್ಲ. ಸಹಕಾರ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ರಾಜಣ್ಣ ಅವರಿಗೆ 'ಸಹಕಾರಿ ರತ್ನ' ಪ್ರಶಸ್ತಿ ಕೂಡ ಲಭಿಸಿದೆ. ಈ ಬಾರಿ ಸಿದ್ದರಾಮಯ್ಯ ಮಂತ್ರಿ ಮಂಡಲದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ರಾಜಣ್ಣ ಅವರಿಗೆ **ಸಹಕಾರ ಖಾತೆ** ಯನ್ನೇ ನೀಡಲಾಗಿದೆ.

### ಶರಣಪ್ಪ ದರ್ಶನಾಪುರ:



ಅರವತ್ತೆರಡು ವರ್ಷ ವಯಸ್ಸಿನ **ಶರಣಪ್ಪ ದರ್ಶನಾಪುರ** ಅವರು ಜೆ.ಎಚ್.ಪಟೇಲ್ ಅವರ ಸಂಪುಟದಲ್ಲಿಯೇ ಇಂಧನದಂತಹ ಬಹುಮುಖ್ಯ ಖಾತೆಯನ್ನು ನಿರ್ವಹಿಸಿದ್ದರು. ಶರಣಪ್ಪ ದರ್ಶನಾಪುರ ಅವರು ತಮ್ಮ ತಂದೆ ಬಾಪುಗೌಡ ತೆರವುಗೊಳಿಸಿದ ಶಹಾಪುರ ಕ್ಷೇತ್ರವನ್ನು ಪ್ರತನಿಧಿಸುತ್ತಿದ್ದಾರೆ. ಈ ಕ್ಷೇತ್ರದಿಂದಲೇ ಅವರು ಐದು ಬಾರಿ ಆಯ್ಕೆಯಾಗಿದ್ದಾರೆ. ಈ ನಡುವೆ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ ಸಚಿವರಾಗಿದ್ದರು. 1994ರಲ್ಲಿ ಅವರು ಮೊದಲ ಬಾರಿಗೆ ಶಾಸಕರಾದವರು. ಈ ಬಾರಿ ಅವರಿಗೆ **ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ** ಖಾತೆಯ ಹೊಣೆಯನ್ನು ವಹಿಸಲಾಗಿದೆ.




Downloaded From:www.kpscvaani.com

**ಡಾ ಶರಣಪ್ರಕಾಶ ಪಾಟೀಲ್:**



ಐವತ್ತಾರು ವರ್ಷ ವಯಸ್ಸಿನ **ಡಾ ಶರಣಪ್ರಕಾಶ ಪಾಟೀಲ್** ಅವರು ಗುಲ್ಬರ್ಗ ಜಿಲ್ಲೆ ಸೇಡಂ ತಾಲೂಕಿನ ಉಡಗಿಯವರು. ವೃತ್ತಿಯಲ್ಲಿ ವೈದ್ಯರು. ಸೇಡಂ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಡಾ.ಶರಣ ಪ್ರಕಾಶ ರುದ್ರಪ್ಪ ಪಾಟೀಲರು ನಾಲ್ಕನೇ ಬಾರಿಗೆ ವಿಧಾನಸಭೆಯನ್ನು ಪ್ರವೇಶಿಸಿದ್ದಾರೆ ಮತ್ತು ಎರಡನೇ ಬಾರಿ ಸಚಿವರಾಗಿದ್ದಾರೆ. 2013ರಲ್ಲಿ ಸಿದ್ದರಾಮಯ್ಯ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಮೊದಲ ಬಾರಿಗೆ ವೈದ್ಯಕೀಯ ಶಿಕ್ಷಣ ಖಾತೆಯ ಸಹಾಯಕ ಸಚಿವರಾಗಿದ್ದರು. ಆ ಬಳಿಕ ಸಂಪುಟ ದರ್ಜೆಗೆ ಬಡ್ತಿ ಹೊಂದಿದ್ದರು. ಈ ಬಾರಿಯೂ ಅವರಿಗೆ **ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ** ಖಾತೆ ದಕ್ಕಿದೆ.

**ಶಿವಾನಂದ ಪಾಟೀಲ್:**



ಐವತ್ತೊಂಬತ್ತು ವರ್ಷ ವಯಸ್ಸಿನ **ಶಿವಾನಂದ ಪಾಟೀಲ್** ಅವರು ಆರು ಬಾರಿ ಶಾಸಕರಾಗಿದ್ದು, ಎರಡನೇ ಬಾರಿ ಮಂತ್ರಿ ಸ್ಥಾನವನ್ನು ಪಡೆದಿದ್ದಾರೆ. ವಿಜಯಪುರದವರಾದ ಶಿವಾನಂದ ಸಿದ್ದರಾಮಗೌಡ ಪಾಟೀಲರು ಡಿಪ್ಲೊಮಾ ಪದವೀಧರರು. ಪಂಚಲಸಾಲಿ ಸಮಾಜದ ಪ್ರಮುಖ ನಾಯಕರು. ಈ ಹಿಂದೆ ಇದ್ದ ತಿಕೋಟಾ ಮತಕ್ಷೇತ್ರದಿಂದ ಎರಡು ಬಾರಿ ಮತ್ತು ಈಗಿನ ಬಸವನಬಾಗೇವಾಡಿ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. 2018ರಲ್ಲಿ ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಪಾಟೀಲರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿದ್ದರು. ಈಗ ಎರಡನೇ ಬಾರಿ ಮಂತ್ರಿ ಸ್ಥಾನ ಒಲಿದಿದ್ದು **ಜವಳಿ, ಸಕ್ಕರೆ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ** ಖಾತೆಯ ಜವಾಬ್ದಾರಿಯನ್ನು ವಹಿಸಲಾಗಿದೆ.

**ಎಸ್.ಎಸ್.ಮಲ್ಲಿಕಾರ್ಜುನ:**



ಐವತ್ತಾರು ವರ್ಷ ವಯಸ್ಸಿನ **ಎಸ್.ಎಸ್.ಮಲ್ಲಿಕಾರ್ಜುನ** ಅವರು 1999ರಲ್ಲಿ ಎಸ್.ಎಂ.ಕೃಷ್ಣ ಅವರ ಸರ್ಕಾರದಲ್ಲಿಯೇ ಯುವಜನ ಹಾಗೂ ಕ್ರೀಡಾ ಖಾತೆ ಸಚಿವರಾಗಿದ್ದ ಪ್ರಭಾವಿ ವೀರಶೈವ ಲಿಂಗಾಯತ ನಾಯಕ ಶಾಮನೂರು ಶಿವಶಂಕರ್ ಅವರ ಪುತ್ರ. ಬಿಕಾಂ ಪದವೀಧರರಾದ ಇವರು 1998ರಲ್ಲಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಮಲ್ಲಿಕಾರ್ಜುನ್ ನಾಲ್ಕನೇ ಬಾರಿ ಈ ಕ್ಷೇತ್ರದಿಂದ ಆಯ್ಕೆ ಹೊಂದಿದ್ದಾರೆ. ಲೋಕಸಭೆ ಚುನಾವಣೆಯಲ್ಲೂ ತಮ್ಮ ಸಾಮರ್ಥ್ಯ ಪ್ರದರ್ಶಿಸಿರುವ ಎಸ್ಎಸ್ಎಂ ಅವರು ಮೂರು ಬಾರಿ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. 2013ರಲ್ಲಿ ತೋಟಗಾರಿಕೆ ಮತ್ತು ಎಪಿಎಂಸಿ ಖಾತೆಯನ್ನು ನಿರ್ವಹಿಸಿದ್ದರು. ಈಗ ಇವರಿಗೆ **ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ** ಖಾತೆಯನ್ನು ನೀಡಲಾಗಿದೆ.

**ಆರ್.ಬಿ. ತಿಮ್ಮಾಪುರ:**



ಐವತ್ತೊಂಬತ್ತು ವರ್ಷ ವಯಸ್ಸಿನ **ಆರ್.ಬಿ. ತಿಮ್ಮಾಪುರ** ಅವರು ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನವರು. ಕಾನೂನು ಪದವೀಧರರು. ಒಂದು ಬಾರಿ ವಿಧಾನ ಪರಿಷತ್ ಸದಸ್ಯ ಹಾಗೂ ಮೂರು ಬಾರಿ ಶಾಸಕರಾಗಿರುವ ರಾಮಪ್ಪ ಬಾಳಪ್ಪ ತಿಮ್ಮಾಪುರ ಅವರು ಪ್ರತಿನಿಧಿಸುತ್ತಿರುವುದು ಮುಧೋಳ ಮೀಸಲು ಕ್ಷೇತ್ರ. ಈಗ ಐದನೇ ಬಾರಿಗೆ ಮಂತ್ರಿ ಸ್ಥಾನ ದಕ್ಕಿದೆ. ಈ ಹಿಂದೆ ಇವರು ಸಕ್ಕರೆ, ಬಂದರು ಹಾಗೂ ಒಳನಾಡು ಸಾರಿಗೆ ಖಾತೆಗಳನ್ನು ನಿರ್ವಹಿಸಿದ್ದರು. ಈ ಬಾರಿ ತಿಮ್ಮಾಪುರ ಅವರಿಗೆ **ಅಬಕಾರಿ ಮತ್ತು ಮುಜರಾಯಿ** ಖಾತೆಯ ಜವಾಬ್ದಾರಿಯನ್ನು ವಹಿಸಲಾಗಿದೆ.

**ಶಿವರಾಜ ತಂಗಡಗಿ:**



ಐವತ್ತೂರು ವರ್ಷ ವಯಸ್ಸಿನ **ಶಿವರಾಜ ತಂಗಡಗಿ** ಅವರು ಭೋವಿ ಸಮುದಾಯಕ್ಕೆ ಸೇರಿದ ತಂಗಡಗಿ ಬಾಗಲಕೋಟೆ ಜಿಲ್ಲೆ ಇಳಕಲ್‌ನವರು. ಕನಕಗಿರಿ ಮೀಸಲು ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಇವರು ಮೊದಲು ವಿಧಾನಸಭೆಯನ್ನು ಪ್ರವೇಶಿಸಿದ್ದು 2008ರಲ್ಲಿ ಪಕ್ಷೇತರರಾಗಿ. ಇದಕ್ಕೂ ಮುನ್ನ ಇಳಕಲ್ ಪುರಸಭೆ ಸದಸ್ಯರಾಗಿ ರಾಜಕೀಯಕ್ಕೆ ಮುನ್ನುಡಿ ಬರೆದರು. 2013ರಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಯಾದ ಶಿವರಾಜ ತಂಗಡಗಿ ಸಿದ್ದರಾಮಯ್ಯ ಸಂಪುಟದಲ್ಲಿ ಸಣ್ಣ ನೀರಾವರಿ ಖಾತೆಯನ್ನು ನಿರ್ವಹಿಸಿದ್ದರು. ಈಗ **ಹಿಂದುಳಿದ ವರ್ಗಗಳು ಮತ್ತು ಕನ್ನಡ ಸಂಸ್ಕೃತಿ** ಖಾತೆ ಸಚಿವರಾಗಿದ್ದಾರೆ.

**ಲಕ್ಷ್ಮೀ ಹೆಬ್ಬಾಳ್ಕರ್:**



ನಲವತ್ತೆಂಟು ವರ್ಷ ವಯಸ್ಸಿನ **ಲಕ್ಷ್ಮೀ ಹೆಬ್ಬಾಳ್ಕರ್** ಬೆಳಗಾವಿ ಜಿಲ್ಲೆ ಖಾನಾಪುರ ತಾಲೂಕಿನ ಚಿಕ್ಕ ಹಟ್ಟಿಹೊಳಿ ಎಂಬ ಗ್ರಾಮದವರು. ಲಕ್ಷ್ಮೀ ರವೀಂದ್ರ ಹೆಬ್ಬಾಳ್ಕರ್ ಅವರು ರಾಜಕೀಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರರು. ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಮೊದಲ ಮಹಿಳಾ ಅಧ್ಯಕ್ಷರಾದವರು. ಕಳೆದ ಎರಡು ಅವಧಿಗಳಿಂದ



Downloaded From:www.kpscvaani.com

ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. 2013ರಲ್ಲಿ ಇದೇ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಆ ಬಳಿಕ 2014ರಲ್ಲಿ ಬೆಳಗಾವಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವ ಹೊಂದಿದ್ದರು. ಅವರನ್ನು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. 2018ರಲ್ಲಿ ಅವರು ಮೊದಲ ಬಾರಿಗೆ ಶಾಸಕರಾದರು. ಈಗ ಎರಡನೇ ಬಾರಿ ಶಾಸಕಿಯಾದ ಹೆಬ್ಬಾಳ್ಕರ್ ಅವರಿಗೆ ಮೊದಲ ಬಾರಿಗೆ ಸಚಿವ ಸ್ಥಾನ ದಕ್ಕಿದೆ. ಸಿದ್ದರಾಮಯ್ಯ ಸರ್ಕಾರದಲ್ಲಿ ಏಕೈಕ ಮಹಿಳಾ ಸಚಿವರಾಗಿರುವ ಇವರಿಗೆ **ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಶೇಷ ಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ** ಖಾತೆಯನ್ನು ವಹಿಸಲಾಗಿದೆ.

### ಡಿ. ಸುಧಾಕರ್:



ಅರವತ್ತೆರಡು ವರ್ಷ ವಯಸ್ಸಿನ **ಡಿ. ಸುಧಾಕರ್** ಅವರು ಸಿದ್ದರಾಮಯ್ಯ ಸಂಪುಟದಲ್ಲಿರುವ ಏಕೈಕ ಜೈನ ಸಮುದಾಯದ ಮಂತ್ರಿ. ಇವರು ಪ್ರತಿನಿಧಿಸುತ್ತಿರುವ ಕ್ಷೇತ್ರ ಚಿತ್ರದುರ್ಗ ಜಿಲ್ಲೆಯ ಹಿರಿಯೂರು. ಚಳ್ಳಕೆರೆಯಿಂದ ಒಂದು ಬಾರಿ ಮತ್ತು ಹಿರಿಯೂರಿನಿಂದ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಮಂತ್ರಿ ಸ್ಥಾನ ಸಿಗುತ್ತಿರುವುದು ಇದು ಎರಡನೇ ಬಾರಿ. 2008ರಲ್ಲಿ ಯಡಿಯೂರಪ್ಪ ಸರ್ಕಾರದಲ್ಲಿ ಸಮಾಜ ಕಲ್ಯಾಣ ಮತ್ತು ಮುಜರಾಯಿ ಖಾತೆಯ ಕಾರ್ಯಭಾರವನ್ನು ವಹಿಸಿಕೊಂಡಿದ್ದರು. ಈ ಹಿಂದೆ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ದಶರಥಯ್ಯ ಸುಧಾಕರ್ ಅವರಿಗೆ ಈ ಬಾರಿ **ಯೋಜನೆ ಮತ್ತು ಸಾಂಖ್ಯಿಕ** ಖಾತೆಯ ಜವಾಬ್ದಾರಿ ಲಭಿಸಿದೆ.

### ಮಾಂಕಾಳ ವೈದ್ಯ:



ಐವತ್ತೊಂದು ವರ್ಷ ವಯಸ್ಸಿನ **ಮಾಂಕಾಳ ವೈದ್ಯ** ಅವರು ಮೊದಲ ಬಾರಿಗೆ ಸಚಿವ ಸ್ಥಾನದ ಭಾಗ್ಯಕ್ಕೆ ಪಾತ್ರರಾಗಿದ್ದಾರೆ. ಮಾಂಕಾಳ ಎಸ್ ವೈದ್ಯ ಅವರು ವಿಧಾನಸಭೆಯನ್ನು ಪ್ರವೇಶಿಸಿದ್ದು ಪಕ್ಷೇತರರಾಗಿ. 2013ರಲ್ಲಿ ಭಟ್ಕಳ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದರು. ಆ ಬಳಿಕ ಅವರು ಕಾಂಗ್ರೆಸ್ ಪಕ್ಷವನ್ನು ಸೇರಿಕೊಂಡರು. ಆದರೆ 2018ರ ಚುನಾವಣೆಯಲ್ಲಿ ಅವರಿಗೆ ಜಯ ಲಭಿಸಿರಲಿಲ್ಲ. 2023ರ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಿ ಗೆದ್ದರು. ಇವರ ತಂದೆ ಮೀನುಗಾರ ವೃತ್ತಿಯನ್ನು ಮಾಡುತ್ತಿದ್ದರು. ತಂದೆಗೆ ಸಹಾಯ ಮಾಡುತ್ತಿದ್ದ ಮಾಂಕಾಳ ಅವರು ಓದಿದ್ದು ಎಂಟನೇ ತರಗತಿ ಮಾತ್ರ. ಉದ್ಯೋಗ ಅರಸಿಕೊಂಡು ಬೆಂಗಳೂರಿಗೆ ಬಂದರು. ಕೆಲಕಾಲ ಹೋಟೆಲ್‌ನಲ್ಲಿ ಕೆಲಸ ಮಾಡಿದರು. ಮತ್ತೆ ಮುರುಡೇಶ್ವರಕ್ಕೆ ತೆರಳಿ ತಮ್ಮದೇ ಸ್ವಂತ ಹೋಟೆಲ್ ತೆರೆದರು. ಆದರೆ ಅವರ ಕೈಹಿಡಿದಿದ್ದು ರಾಜಕೀಯ. ಇವರಿಗೆ **ಬಂದರು, ಮೀನುಗಾರಿಕೆ ಮತ್ತು ಒಳನಾಡು ಸಾರಿಗೆ** ಖಾತೆಯನ್ನು ನಿರ್ವಹಿಸುವ ಗುರುತರ ಹೊಣೆ.

### ಸಂತೋಷ್ ಲಾಡ್:



ನಲವತ್ತೆಂಟು ವರ್ಷ ವಯಸ್ಸಿನ **ಸಂತೋಷ್ ಲಾಡ್** ಅವರು ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನವರು. ಮರಾಠ ಸಮುದಾಯಕ್ಕೆ ಸೇರಿದ ಇವರು ಬಿಕಾಂ ಪದವೀಧರರು. ಸಂತೋಷ್ ಅವರಿಗೆ ಕ್ರೀಡೆಯಲ್ಲಿ ಅಪಾರವಾದ ಆಸಕ್ತಿ. ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿಯೂ ಭಾಗವಹಿಸಿದ್ದಾರೆ. ಇವರ ಕುಟುಂಬ ಮೊದಲಿನಿಂದಲೂ ಗಣಿ ಉದ್ಯಮದಲ್ಲಿ ತೊಡಗಿಸಿಕೊಂಡಿತ್ತು. ಇವರೂ ಅದನ್ನು ಮುಂದುವರಿಸಿದ್ದಾರೆ. ಸಂಡೂರು ಪಟ್ಟಣ ಪಂಚಾಯ್ತಿ ಸದಸ್ಯರಾಗುವ ಮೂಲಕ ರಾಜಕೀಯಕ್ಕೆ ಎಂಟ್ರಿ. ಎಂ.ವೈ.ಘೋರ್ಪಡೆಯಂಥವರು ಪ್ರತಿನಿಧಿಸುತ್ತಿದ್ದ ಸಂಡೂರು ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದು ಮೊದಲ ಬಾರಿಗೆ ವಿಜಯಿಯಾಗಿದ್ದು 2004ರಲ್ಲಿ. ನಂತರ ಕಾಂಗ್ರೆಸ್ ಸೇರಿದರು. ಈಗ ಇವರು ಪ್ರತಿನಿಧಿಸುತ್ತಿರುವ ಕ್ಷೇತ್ರ ಧಾರವಾಡ ಜಿಲ್ಲೆಯ ಕಲಘಟಗಿ. 2013ರಲ್ಲಿ ವಾರ್ತಾ ಮತ್ತು ಮೂಲಸೌಕರ್ಯ ಸಹಾಯಕ ಸಚಿವರಾಗಿದ್ದರು. ಈಗ ಇವರು **ಕಾರ್ಮಿಕ** ಸಚಿವರು.

### ರಹೀಂ ಖಾನ್:



ಐವತ್ತೇಳು ವರ್ಷ ವಯಸ್ಸಿನ ರಹೀಂ ಖಾನ್ ಅವರು ಪ್ರತಿನಿಧಿಸುತ್ತಿರುವ ಕ್ಷೇತ್ರ ಬೀದರ್ ಉತ್ತರ. ಪಿಯುಸಿ ವರೆಗಿನ ಶಿಕ್ಷಣ. ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ರಹೀಂ ಖಾನ್ ಅವರು 2008ರ ಚುನಾವಣೆಯಲ್ಲಿ ಬಿಎಸ್‌ಪಿಯಿಂದ ಸ್ಪರ್ಧಿಸಿ ಸೋಲು ಅನುಭವಿಸಿದ್ದರು. ಆದರೆ 2009ರಲ್ಲಿ ಉಪಚುನಾವಣೆ ನಡೆದಾಗ ಕಾಂಗ್ರೆಸ್‌ನಿಂದ ವಿಜಯವನ್ನು ಕಂಡರು. ಎಲ್ಲ ಸವಾಲುಗಳ ನಡುವೆ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ರಹೀಂ ಖಾನ್ ಎರಡನೇ ಬಾರಿ ಸಚಿವರಾಗುವ ಅವಕಾಶವನ್ನು ಪಡೆದಿದ್ದಾರೆ. ಈ ಬಾರಿ ಅವರಿಗೆ **ಪೌರಾಡಳಿತ ಮತ್ತು ಹಜ್** ಖಾತೆಯನ್ನು ನೀಡಲಾಗಿದೆ. 2018ರಲ್ಲಿ ಆರು ತಿಂಗಳು ಆಡಳಿತ ನಡೆಸಿದ ಕುಮಾರಸ್ವಾಮಿ ನೇತೃತ್ವದ ಸರ್ಕಾರದಲ್ಲಿ ಖಾನ್ ಕ್ರೀಡಾ ಸಚಿವರಾಗಿದ್ದರು.

### ಬಿ.ನಾಗೇಂದ್ರ:

ಐವತ್ತೂರು ವರ್ಷ ವಯಸ್ಸಿನ **ಬಿ.ನಾಗೇಂದ್ರ** ಅವರು ಬಳ್ಳಾರಿಯ ಗಣಿ ರಾಜಕೀಯದ ಪ್ರಬಲ ಪೈಪೋಟಿಯ ನಡುವೆಯೂ ನಾಲ್ಕು ಬಾರಿ ಶಾಸಕರಾಗಿ ವಿಧಾನಸಭೆಯ ಮೆಟ್ಟಿಲು ಹತ್ತಿದ್ದಾರೆ. ಬಳ್ಳಾರಿ ಗ್ರಾಮೀಣ ಮೀಸಲು ವಿಧಾನಸಭಾ ಕ್ಷೇತ್ರವನ್ನು



Downloaded From:www.kpscvaani.com

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರೊಂದಿಗೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಡಾ.ಜಿ.ಪರಮೇಶ್ವರ್ ಅವರಿಗೆ ಗೃಹ ಖಾತೆಯನ್ನು, ಕೆ.ಎಚ್.ಮುನಿಯಪ್ಪ ಅವರಿಗೆ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಖಾತೆಯನ್ನು, ಕೆ.ಜೆ.ಜಾರ್ಜ್ ಅವರಿಗೆ ಇಂಧನ ಖಾತೆಯನ್ನು, ಎಂ.ಬಿ.ಪಾಟೀಲ್ ಅವರಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಖಾತೆಯನ್ನು, ಸತೀಶ್ ಜಾರಕಿಹೊಳಿ ಅವರಿಗೆ ಲೋಕೋಪಯೋಗಿ ಖಾತೆಯನ್ನು ರಾಮಲಿಂಗಾ ರೆಡ್ಡಿ ಅವರಿಗೆ ಸಾರಿಗೆ ಮತ್ತು ಹಜ್ ಖಾತೆಯನ್ನು, ಪ್ರಿಯಾಂಕ ಖರ್ಗೆ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಖಾತೆಯನ್ನು ಹಾಗೂ ಜಮೀರ್ ಅಹಮದ್ ಖಾನ್ ಅವರಿಗೆ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಖಾತೆಯ ಹೊಣೆಯನ್ನು ವಹಿಸಲಾಗಿದೆ.



ಪ್ರತಿನಿಧಿಸುವ ನಾಗೇಂದ್ರ ಅವರು ಈ ಬಾರಿ ಸೋಲಿಸಿದ್ದು ಬಿಜೆಪಿಯ ಪ್ರಬಲ ಸ್ಪರ್ಧಿ ಬಿ. ಶ್ರೀರಾಮುಲು ಅವರನ್ನು. ಈ ಮೊದಲು ಕೂಡ್ಲಿಗಿ ಕ್ಷೇತ್ರದಿಂದ ಎರಡು ಬಾರಿ ಬಿಜೆಪಿ ಮತ್ತು ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದಿದ್ದರು. ವಾಲ್ಮೀಕಿ ಸಮುದಾಯದ ನಾಯಕರಾದ ನಾಗೇಂದ್ರ ವಾಣಿಜ್ಯ ಪದವಿಯನ್ನು ಪಡೆದಿದ್ದಾರೆ. ಸಿದ್ದರಾಮಯ್ಯ ಸಚಿವ ಸಂಪುಟದಲ್ಲಿ ಮೊದಲ ಬಾರಿ ಸಚಿವರಾಗುವ ಅವಕಾಶ. ಅವರಿಗೆ **ಯುವಜನ ಸೇವೆಗಳು, ಕ್ರೀಡೆ ಮತ್ತು ಎಸ್.ಟಿ.ಕಲ್ಯಾಣ** ಖಾತೆಯ ಜವಾಬ್ದಾರಿಯನ್ನು ನೀಡಲಾಗಿದೆ.

### ಮಧು ಬಂಗಾರಪ್ಪ:



ಐವತ್ತಾರು ವರ್ಷ ವಯಸ್ಸಿನ **ಮಧು ಬಂಗಾರಪ್ಪ** ಅವರು ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ ಪುತ್ರ ಮಧು ಎರಡನೇ ಬಾರಿ ಶಿವಮೊಗ್ಗ ಜಿಲ್ಲೆ ಸೊರಬ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಈ ಹಿಂದೆ ಜಾತ್ಯಾತೀತ ಜನತಾದಳದಿಂದ ಆಯ್ಕೆಯಾಗಿದ್ದರು. 2021ರಲ್ಲಿ ಕಾಂಗ್ರೆಸ್ ಸೇರಿದ ಬಳಿಕ ಅವರನ್ನು ಪಕ್ಷದ ಹಿಂದುಳಿದ ವರ್ಗದ ಘಟಕದ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಸಿನೆಮಾ ಮತ್ತು ಕೃಷಿಯಲ್ಲಿ ವಿಶೇಷವಾದ ಆಸಕ್ತಿ. ಒಂಭತ್ತಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ ನಟ, ನಿರ್ದೇಶಕ ಮತ್ತು ನಿರ್ಮಾಪಕರಾಗಿ ಕೆಲಸ ಮಾಡಿದ್ದರು. ಶಿವಮೊಗ್ಗದ ಶರಾವತಿ ಶಿಕ್ಷಣ ಟ್ರಸ್ಟ್ ಹೆಸರಿನಲ್ಲಿ ಅನೇಕ ಶಾಲೆ-ಕಾಲೇಜುಗಳನ್ನು ನಡೆಸುತ್ತಿದ್ದಾರೆ. ತಮ್ಮ ಸಹೋದರ ಕುಮಾರ ಬಂಗಾರಪ್ಪ ಅವರನ್ನು ಸೋಲಿಸಿ ವಿಧಾನಸಭೆ ಪ್ರವೇಶಿಸಿರುವ ಮಧು ಅವರಿಗೆ ಇದೇ ಮೊದಲ ಬಾರಿಗೆ ಸಚಿವ ಸ್ಥಾನ ದೊರಕಿದೆ. ಅವರಿಗೆ **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ** ಖಾತೆಯ ಜವಾಬ್ದಾರಿ ವಹಿಸಲಾಗಿದೆ.

### ಡಾ.ಎಂ.ಸಿ.ಸುಧಾಕರ್:



ಐವತ್ತ ನಾಲ್ಕು ವರ್ಷ ವಯಸ್ಸಿನ **ಡಾ.ಎಂ.ಸಿ.ಸುಧಾಕರ್** ಅವರು ಎಂಡಿಎಸ್ ಪದವೀಧರರು. ಪ್ರತಿನಿಧಿಸುತ್ತಿರುವ ಕ್ಷೇತ್ರ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ. 2004ರಲ್ಲಿ ಸಕ್ರಿಯ ರಾಜಕಾರಣಕ್ಕೆ ಪ್ರವೇಶ ಪಡೆದು ಶಾಸಕರಾಗಿ ಆಯ್ಕೆಯೂ ಆದರು. ಆ ನಂತರ ನಡೆದ ಚುನಾವಣೆಯಲ್ಲೂ ಗೆಲುವು ಸಾಧಿಸಿದರು. ಆದರೆ ಸ್ಥಳೀಯ ರಾಜಕಾರಣದ ಕಾರಣದಿಂದ 2013 ಮತ್ತು 2018ರಲ್ಲಿ ಪಕ್ಷೇತರರಾಗಿ ಕಣಕ್ಕಿಳಿದರು. ಅವರಿಗೆ ಗೆಲುವು ಲಭಿಸಿರಲಿಲ್ಲ. ಈ ಬಾರಿ ಮತ್ತೆ ಕಾಂಗ್ರೆಸ್ ಟಿಕೆಟ್‌ನಿಂದಲೇ ಸ್ಪರ್ಧಿಸಿ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಒಕ್ಕಲಿಗ ಸಮುದಾಯದ ನಾಯಕರಾದ ಸುಧಾಕರ್ ಅವರು ಮೊದಲ ಬಾರಿಗೆ ಸಚಿವರಾಗಿದ್ದಾರೆ. ಅವರಿಗೆ **ಉನ್ನತ ಶಿಕ್ಷಣ** ದಂತಹ ಉನ್ನತ ಖಾತೆಯ ಹೊಣೆಯನ್ನೇ ವಹಿಸಲಾಗಿದೆ.

### ಬಿ.ಎಸ್. ಸುರೇಶ್:



ಐವತ್ತೊಂದು ವರ್ಷ ವಯಸ್ಸಿನ **ಬೈರತಿ ಸುರೇಶ್** ಪಿಯುಸಿ ವರೆಗೆ ಶಿಕ್ಷಣ ಪಡೆದಿದ್ದಾರೆ. ಬೆಂಗಳೂರಿನ ಹೆಬ್ಬಾಳ ವಿಧಾನಸಭಾ ಕ್ಷೇತ್ರದಿಂದ ಎರಡನೇ ಬಾರಿಗೆ ಶಾಸಕ. 2018ರಲ್ಲಿ ಚುನಾವಣೆಗೆ ಸ್ಪರ್ಧಿಸಲು ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಕಣಕ್ಕಿಳಿದರು. ಚುನಾವಣೆಯಲ್ಲಿ ಗೆಲುವು ಸಾಧಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹೊರತುಪಡಿಸಿದರೆ ಸಂಪುಟದಲ್ಲಿರುವ ಏಕೈಕ ಕುರುಬ ಸಮುದಾಯದ ನಾಯಕ ಬೈರತಿ ಸುರೇಶ್. ಅನೇಕ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸುರೇಶ್ ಅವರು ಮೊದಲ ಬಾರಿಗೆ ಮಂತ್ರಿ ಆಗಿದ್ದಾರೆ. ಅವರಿಗೆ ದೊರೆತಿರುವ ಖಾತೆ **ನಗರಾಭಿವೃದ್ಧಿ.**

### ಎನ್.ಎಸ್.ಬೋಸರಾಜು:



ಎಪ್ಪತ್ತ ಆರು ವರ್ಷ ವಯಸ್ಸಿನ **ಎನ್.ಎಸ್.ಬೋಸರಾಜು** ಅವರು ಮೂಲತಃ ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಮಂಡಲದ ಮೊಗಲ್ಲು ಗ್ರಾಮದ ತೆಲುಗು ಕ್ಷತ್ರಿಯ ಕುಟುಂಬಕ್ಕೆ ಸೇರಿದವರು. ರಾಯಚೂರು ಜಿಲ್ಲೆಯ ಮಾನ್ವಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ನಡಿಂಪಳ್ಳಿ ಎಸ್ ಬೋಸರಾಜು ಅವರು ಡಿಪ್ಲೊಮಾ ಪದವೀಧರರು. 1972ರಲ್ಲಿಯೇ ಯುವ ಕಾಂಗ್ರೆಸ್ ಅಧ್ಯಕ್ಷರಾಗುವ ಮೂಲಕ ರಾಜಕೀಯ ಪ್ರವೇಶ ಪಡೆದವರು. ಆ ಬಳಿಕ ಅವಿಭಜಿತ ರಾಯಚೂರು-ಕೊಪ್ಪಳ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. 2014ರಿಂದ 2020ರ ತನಕ ವಿಧಾನ ಪರಿಷತ್ ಸದಸ್ಯರಾಗಿದ್ದರು. ಅದಕ್ಕೂ ಮೊದಲು ಮಾನ್ವಿಯಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಈ ಬಾರಿ ಶಾಸಕರಲ್ಲದಿರುವ ಇವರು ಸಂಪುಟಕ್ಕೆ ಅಚ್ಚರಿಯ ಸೇರ್ಪಡೆಯಾಗಿದ್ದಾರೆ. ಅವರಿಗೆ **ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ** ಖಾತೆಯನ್ನು ವಹಿಸಲಾಗಿದೆ.



Downloaded From:www.kpscvaani.com



# ಸಮಸ್ಯಾ ನಿರ್ವಹಣಾ ತಂತ್ರದಲ್ಲಿ ಸಂತೋಷ್ ಲಾಡ್ ಮುಂಚೂಣಿಯಲ್ಲಿ...

**ಸಮಸ್ಯೆಗಳು ಹೇಳಿ–ಕೇಳಿ ಬರುವುದಿಲ್ಲ. ಅಲ್ಲವೇ ? ಅಪಘಾತ ಹಾಗೂ ಅವಗಡಗಳು ಅನಿರೀಕ್ಷಿತವಾಗಿ ಸಂಭವಿಸುತ್ತವೆ. ಅಂತಹ ಸಂದರ್ಭದಲ್ಲಿ ಅವುಗಳನ್ನು ಎದುರಿಸುವುದು ಹೇಗೆ ? ಯಾವ ರೀತಿ ಸ್ಪಂದಿಸಬೇಕು ? ಕೈಗೊಳ್ಳಬೇಕಾದ ತುರ್ತು ಕ್ರಮಗಳೇನು ? ಎಂಬುದನ್ನೇ ಸಮಸ್ಯಾ ನಿರ್ವಹಣಾ ತಂತ್ರ ಎಂದು ಬಣ್ಣಿಸುತ್ತಾರೆ. ಈ ಸಮಸ್ಯಾ ನಿರ್ವಹಣಾ ತಂತ್ರದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಮುಂಚೂಣಿಯಲ್ಲಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಒಂದು ಉದಾಹರಣೆ ಇಲ್ಲಿದೆ.**

**ಡಿ.ಪಿ.ಮುರಳೀಧರ್**

ಇದೇ ಜೂನ್ 2. ಇನ್ನೇನು ರಾತ್ರಿ ಏಳು ಗಂಟೆಯಾಗಲು ಕೆಲವೇ ಕ್ಷಣಗಳು ಬಾಕಿ ಇದ್ದವು. ಪಶ್ಚಿಮ ಬಂಗಾಳದ ಹೌರಾ ರೈಲು ಕೋಲ್ಕತ್ತಾದ ನಿಲ್ದಾಣದದಿಂದ ತಮಿಳು ನಾಡಿನ ರಾಜಧಾನಿ ಚನ್ನೈನ ಸೆಂಟ್ರಲ್ ರೈಲು ನಿಲ್ದಾಣದತ್ತ ವೇಗವಾಗಿ ಪಯಣಿಸುತ್ತಿದ್ದ ರೈಲು ಸಂಖ್ಯೆ : 12841 ಶಾಲಿಮಾರ್ – ಕೋರಮಂಡಲ್ ಎಕ್ಸ್‌ಪ್ರೆಸ್ ಒಡಿಶಾ ರಾಜ್ಯದ ಬಾಲಸೋರ್ ಜಿಲ್ಲೆಯ ಬಹನಾಗಾ ಬಜಾರ್ ರೈಲು ನಿಲ್ದಾಣದಲ್ಲಿ ಮುಖ್ಯ ಹಳಿಯ ಮೇಲೆ ನಿಂತಿದ್ದ ಗೂಡ್ಸ್ (ಸರಕು ಸಾಗಣಾ) ರೈಲಿಗೆ ಡಿಕ್ಕಿ ಹೊಡೆಯಿತು. ಇದರ ಪರಿಣಾಮ ಶಾಲಿಮಾರ್ – ಕೋರಮಂಡಲ್ ಎಕ್ಸ್‌ಪ್ರೆಸ್‌ನ 21 ಬೋಗಿಗಳು ನಜ್ಜುಗೊಜ್ಜಾಗಿ ಅಕ್ಕ–ಪಕ್ಕ ಮಾತ್ರವಲ್ಲದೆ, ಪಕ್ಕದ ಹಳಿಗಳ ಮೇಲೆಯೂ ಮಗುಚಿ ಬಿದ್ದವು.

ಬೆಂಗಳೂರಿನ ಸಂಪೂರ್ಣ ಹವಾನಿಯಂತ್ರಿತ ಸರ್ ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣದಿಂದ ಕೋಲ್ಕತ್ತಾದ ಹೌರಾ ರೈಲು ನಿಲ್ದಾಣದತ್ತ ಪಯಣಿಸುತ್ತಿದ್ದ ರೈಲು ಸಂಖ್ಯೆ : 12864 ಬೆಂಗಳೂರು ಹೌರಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು





Downloaded From:www.kpscvaani.com





ಬಹನಾಗಾ ಬಜಾರ್ ರೈಲು ನಿಲ್ದಾಣದ ಮೂಲಕ ತನ್ನ ಗಮ್ಯ ಸ್ಥಾನದತ್ತ ವೇಗವಾಗಿ ಹಾದು ಹೋಗುತ್ತಿತ್ತು.

ಬೆಂಗಳೂರು ಹೌರಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಚಲಿಸಬೇಕಿದ್ದ ಹಳಿಯ ಮೇಲೆ ಶಾಲಿಮಾರ್–ಕೋರಮಂಡಲ್ ಎಕ್ಸ್‌ಪ್ರೆಸ್‌ನ ಮೂರು ಬೋಗಿಗಳು ಬಿದಿದ್ದವು. ಮೊದಲು ಸಂಭವಿಸಿದ ಅಪಘಾತ ಇನ್ನೂ ಅರಿವಿಗೆ ಬರುವಷ್ಟರಲ್ಲಿ, ಒಂದು ಅಪಘಾತ ನಡೆದ ಕೆಲವೇ ಕ್ಷಣಗಳ ಅಂತರದಲ್ಲಿ, ಮತ್ತೊಂದು ಅವಗಡ ಸಂಭವಿಸಿತು.

ಈ ತ್ರಿವಳಿ ರೈಲು ಅಪಘಾತದಲ್ಲಿ 289 ಪ್ರಯಾಣಿಕರು ಮೃತರಾದರು. ಅಪಘಾತದಲ್ಲಿ ಗಾಯಗೊಂಡ ಒಂದು ಸಾವಿರಕ್ಕೂ ಹೆಚ್ಚು ಪ್ರಯಾಣಿಕರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲು ಅಲ್ಲಿನ ಜಿಲ್ಲಾಡಳಿತ ಹಾಗೂ ಸ್ಥಳೀಯರು ರೈಲ್ವೇ ಮಂತ್ರಾಲಯಕ್ಕೆ ನೆರವಾದರು.

ಇತ್ತೀಚಿನ ವರ್ಷಗಳಲ್ಲಿ ಭಾರತೀಯ ರೈಲ್ವೇ ಇತಿಹಾಸದಲ್ಲಿಯೇ ಅತೀ ಹೆಚ್ಚು ಜೀವಹಾನಿಯನ್ನು ಉಂಟು ಮಾಡಿದ ದೊಡ್ಡ ದುರಂತ ಹಾಗೂ ಅತ್ಯಂತ ಕಹಿ ಘಟನೆ ಇದಾಗಿದೆ.

ಅಂದು ರಾತ್ರಿ ವಿವಿಧ ಸುದ್ದಿ ವಾಹಿನಿಗಳಲ್ಲಿ ಬಿತ್ತರವಾಗುತ್ತಿದ್ದ ಈ ಸುದ್ದಿಯನ್ನು ಗಮನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತ್ಯಂತ ಕಳವಳಗೊಳ್ಳುತ್ತಾರೆ. ಕೂಡಲೇ ತಮ್ಮ ಸಂಪುಟದ ಸಹೋದ್ಯೋಗಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ದೂರವಾಣಿ ಕರೆ ಮಾಡುತ್ತಾರೆ. ರೈಲು ಅಪಘಾತ ಸಂಭವಿಸಿದ ಸ್ಥಳಕ್ಕೆ ತೆರಳಿ ರಾಜ್ಯದ ಪ್ರಯಾಣಿಕರಿಗೆ ಆದ್ಯತೆಯ ಮೇರೆಗೆ ನೆರವು ಒದಗಿಸಲು ಧಾವಿಸುವಂತೆ ಸೂಚಿಸುತ್ತಾರೆ.

ಮುಖ್ಯಮಂತ್ರಿಯವರ ಸೂಚನೆಯನ್ನು ಗೌರವಿಸಿ, ಅಂದು ರಾತ್ರಿಯೇ, ರಾಜ್ಯ ತುರ್ತು ಕಾರ್ಯ ನಿರ್ವಹಣಾ ಕೇಂದ್ರಕ್ಕೆ ಚಾಲನೆ ನೀಡುವತ್ತ, ರೈಲ್ವೇ ಮಂತ್ರಾಲಯ ಹಾಗೂ ಒಡಿಶಾ ಸರ್ಕಾರದೊಡನೆ ನಿರಂತರ ಸಂಪರ್ಕ ಸಾಧಿಸುವತ್ತ, ರೈಲು ದುರಂತ ಕುರಿತು ಕರೆ ಸ್ವೀಕರಿಸಿ, ಸಾರ್ವಜನಿಕರಿಗೆ ತಾಜಾ ಮಾಹಿತಿ ನೀಡಲು ಶುಲ್ಕ–ರಹಿತ ದೂರವಾಣಿ ಸಂಖ್ಯೆಯನ್ನು ಸ್ಥಾಪಿಸುವತ್ತ ಕ್ರಮವಹಿಸಿ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಕರ್ನಾಟಕ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಡಾ ಮನೋಜ್ ರಾಜನ್, ವಕ್ತಾರ ಅನಿಲ್ ಕುಮಾರ್ ತಡ್ಕಲ್, ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ವಿಭಾಗದ ಎಸ್.ಎಸ್.ಎಂ. ಗವಾಸ್ಕರ್ ಮತ್ತು ಸಿದ್ದಣ್ಣ ಗೌಡ ಅವರ ಜೊತೆಗೂಡಿ, ಮರುದಿನ ಜೂನ್ 3 ರಂದು ಮಧ್ಯಾಹ್ನ 2–30 ಗಂಟೆಗೆ ರಾಜ್ಯದ ರಾಜಧಾನಿ ಬೆಂಗಳೂರಿನಿಂದ ಒಡಿಶಾ ರಾಜ್ಯದ ರಾಜಧಾನಿ ಭುವನೇಶ್ವರಕ್ಕೆ ವಿಶೇಷ ವಿಮಾನದಲ್ಲಿ ಪ್ರಯಾಣಿಸುತ್ತಾರೆ.

ವಿಮಾನದಿಂದ ಇಳಿದೊಡನೆಯೇ, ಸಂತೋಷ್ ಲಾಡ್ ನೇತೃತ್ವದ ತಂಡ ಭದ್ರಕ್ ಜಿಲ್ಲಾ ಕೇಂದ್ರದಲ್ಲಿನ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡುತ್ತದೆ. ಅಲ್ಲಿ ದಾಖಲಾಗಿದ್ದ ಗಾಯಗೊಂಡವರನ್ನು ಕಂಡು ಶೀಘ್ರ ಗುಣಮುಖರಾಗುವಂತೆ ಹಾರೈಸಿ, ಅಲ್ಲಿಂದ ರೈಲು ಅಪಘಾತ ಸಂಭವಿಸಿದ ಬಹನಾಗಾ ಬಜಾರ್ ರೈಲು ನಿಲ್ದಾಣಕ್ಕೆ ತೆರಳುತ್ತದೆ. ಅಲ್ಲಿ ದುರಂತ ಸಂಭವಿಸಿದ ಸ್ಥಳವನ್ನು ಸಮಗ್ರವಾಗಿ ಪರಿಶೀಲಿಸುತ್ತದೆ.

ಘಟನಾ ಸ್ಥಳದಲ್ಲಿಯೇ ಮೊಕ್ಕಾಂ ಹೂಡಿದ್ದ ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರ ಜೊತೆಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಘಟನೆಯ ವಿವರಗಳು, ರಕ್ಷಣಾ ಹಾಗೂ ಪರಿಹಾರದ ಕ್ರಮಗಳ ಕುರಿತು ಸವಿವರವಾಗಿ ಮಾತುಕತೆ ನಡೆಸುತ್ತಾರೆ.

ಬಾಲಾಸೋರ್‌ನಲ್ಲಿ ತಾತ್ಕಾಲಿಕವಾಗಿ ಸ್ಥಾಪಿಸಿದ್ದ ಶವಾಗಾರಕ್ಕೂ ಸಚಿವರ ನೇತೃತ್ವದ ತಂಡ ಭೇಟಿ ನೀಡಿ, ಸಂತ್ರಸ್ತರ ವಿವರಗಳ ಕುರಿತು ಮಾಹಿತಿ ಪಡೆಯುತ್ತದೆ. ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿ, ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿ ಮುಂದೆ ಸಾಗುತ್ತದೆ.

ಬಾಲಾಸೋರ್ ಜಿಲ್ಲಾ ಕೇಂದ್ರದಲ್ಲಿನ ಆಸ್ಪತ್ರೆ ಹಾಗೂ ಫಕೀರ್ ಮೋಹನ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಗೆ ತೆರಳಿ ಅಲ್ಲಿ ದಾಖಲಾದವರ ವಿವರಗಳನ್ನೂ ತಂಡ ಕಲೆ ಹಾಕುತ್ತದೆ. ಅಲ್ಲಿ ರಕ್ತದಾನ ಮಾಡಲು ಸ್ವಯಂ ಪ್ರೇರಿತರಾಗಿ ಆಗಮಿಸಿ ಸಾಲುಗಟ್ಟಿ ನಿಂತಿದ್ದ ಯುವ ಸಮೂಹವನ್ನು ಕಂಡು ಸಂತೋಷ್ ಲಾಡ್ ಅವರು ಪುಳಕಿತರಾಗುತ್ತಾರೆ. ಯುವ ಜನತೆಯನ್ನು ತುಂಬು ಹೃದಯದಿಂದ ಅಭಿನಂದಿಸುತ್ತಾರೆ.





Downloaded From:www.kpscvaani.com



ಅಂತೆಯೇ, ಜೂನ್ 4 ರಂದು ಒಡಿಶಾ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಮುಖ್ಯ ಅಭಿವೃದ್ಧಿ ಆಯುಕ್ತರಾದ ಪ್ರದೀಪ್ ಕುಮಾರ್ ಜೇನಾ ಹಾಗೂ ಅಲ್ಲಿನ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳನ್ನು ಭೇಟಿ ಮಾಡಿ, ಅವರೊಂದಿಗೆ ತಂಡವು ಸುದೀರ್ಘವಾಗಿ ಚರ್ಚಿಸುತ್ತದೆ.

ಇಂತಹ ಸಂಕಷ್ಟದ ಸಂದರ್ಭದಲ್ಲಿ ಒಡಿಶಾ ಸರ್ಕಾರಕ್ಕೆ ವೈದ್ಯರನ್ನು ಕಳುಹಿಸಿ ಕೊಡುವುದು, ಔಷಧಿಗಳನ್ನು ಪೂರೈಸುವುದೂ ಸೇರಿದಂತೆ ಯಾವುದೇ ರೀತಿಯ ನೆರವು ಬಯಸಿದಲ್ಲಿ, ಅವುಗಳನ್ನು ಕೂಡಲೇ ಒದಗಿಸಲು ಕರ್ನಾಟಕ ಸರ್ಕಾರವು ಬದ್ಧವಿದೆ ಮತ್ತು ಸಿದ್ಧವಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂದೇಶವನ್ನು ಸಂತೋಷ್ ಲಾಡ್ ಅವರು ಸಭೆಯಲ್ಲಿ ಪ್ರಕಟಿಸಿ, ಅಲ್ಲಿನ ಅಧಿಕಾರಿಗಳಲ್ಲಿ ಧೈರ್ಯವನ್ನು ಮೂಡಿಸಿ, ಅವರಲ್ಲಿ ವಿಶ್ವಾಸವನ್ನು ಬಿತ್ತುತ್ತಾರೆ.

ಕಟಕ್‌ನಲ್ಲಿನ ಶ್ರೀರಾಮಚಂದ್ರ ಭಾಂಜ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಗೆ ತೆರಳಿ ಅಲ್ಲಿ ದಾಖಲಾದವರ ಮಾಹಿತಿ ವಿವರಗಳನ್ನು ತಂಡವು ಸಂಗ್ರಹಿಸುತ್ತದೆ. ಮೃತಪಟ್ಟವರಲ್ಲಿ ಹಾಗೂ ತೀವ್ರವಾಗಿ ಗಾಯಗೊಂಡವರಲ್ಲಿ ಕರ್ನಾಟಕದವರು ಇಲ್ಲ ಎಂಬುದನ್ನು ತಂಡ ಖಚಿತಪಡಿಸಿಕೊಳ್ಳುತ್ತದೆ.

ನಂತರ, ಸಂತೋಷ್ ಲಾಡ್ ಅವರು ದೂರವಾಣಿ ಕರೆಮಾಡಿ ಮೃತಪಟ್ಟವರ ಹಾಗೂ ತೀವ್ರವಾಗಿ ಗಾಯಗೊಂಡವರ ಪಟ್ಟಿಗಳಲ್ಲಿ ಕರ್ನಾಟಕದವರು ಇಲ್ಲ ಎಂಬ ಖಚಿತ ಮಾಹಿತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಿಳಿಸುತ್ತಾರೆ. ಕನ್ನಡಿಗರೆಲ್ಲರೂ ಕ್ಷೇಮ ಎಂಬ ಸಂದೇಶ ಸ್ವೀಕೃತವಾದೊಡನೆಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿಟ್ಟುಸಿರುಬಿಡುತ್ತಾರೆ.

**ಸಮಸ್ಯೆ ಇಷ್ಟಕ್ಕೆ ಮುಗಿಯಲಿಲ್ಲ ! ಸಮಸ್ಯೆ ಮತ್ತೆರಡು ಕಡೆಗಳಲ್ಲಿಯೂ ಇತ್ತು !**

ಒಡಿಶಾದಲ್ಲಿ ರೈಲು ಅಪಘಾತ ಸಂಭವಿಸಿ ಕೋಲ್ಕತ್ತಾ ಹಾಗೂ ಬೆಂಗಳೂರು ನಡುವೆ ರೈಲು ಸಂಚಾರ ಸ್ಥಗಿತಗೊಂಡ ಹಿನ್ನೆಲೆಯಲ್ಲಿ, 45 ನೇ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್ ಷಿಪ್‌ನಲ್ಲಿ ಪಾಲ್ಗೊಳ್ಳಲು ಕೋಲ್ಕತ್ತಾಗೆ ತೆರಳಿದ್ದ ಹದಿನಾರು ವರ್ಷ ವಯೋಮಾನದೊಳಗಿನ ಕಿರಿಯರ ತಂಡದ ಬಾಲಕ ಮತ್ತು ಬಾಲಕಿಯರನ್ನು ಒಳಗೊಂಡ ಕ್ರೀಡಾಪಟುಗಳು ಹಾಗೂ ತರಬೇತುದಾರರೂ (ಕೋಚ್) ಸೇರಿದಂತೆ 32 ಮಂದಿ ಕರ್ನಾಟಕದತ್ತ ಪ್ರಯಾಣಿಸಲು ಸಾಧ್ಯವಾಗದೇ ಹೌರಾ ರೈಲು ನಿಲ್ದಾಣದಲ್ಲಿಯೇ ಸಿಕ್ಕಿಬಿದ್ದಿದ್ದಾರೆ ಎಂಬ ವಿಷಯವನ್ನು ಕ್ರೀಡಾ ತಂಡದ ಓರ್ವರು ಸಂತೋಷ್ ಲಾಡ್ ಅವರಿಗೆ ದೂರವಾಣಿ ಕರೆ ಮಾಡಿ ಸಹಾಯ ಮಾಡುವಂತೆ ಕೋರುತ್ತಾರೆ.

ಸಂಕಷ್ಟದ ತುರ್ತು ಕರೆಗೆ ಕೂಡಲೇ ಸ್ಪಂದಿಸುವ ಸಂತೋಷ್ ಲಾಡ್ ಅವರು ರೈಲು ನಿಲ್ದಾಣದಲ್ಲಿ ದಿಕ್ಕು ತೋಚದೆ ಕಾಯುತ್ತಿದ್ದ ಎಲ್ಲಾ ಕ್ರೀಡಾ ಪಟುಗಳನ್ನೂ ಜೂನ್ 4 ರಂದು ಕೋಲ್ಕತ್ತಾದಿಂದ ಬೆಂಗಳೂರಿಗೆ ವಿಮಾನದಲ್ಲಿ ಕರೆತರುವ ವ್ಯವಸ್ಥೆ ಮಾಡುತ್ತಾರೆ.

ಅಷ್ಟೇ ಅಲ್ಲ ! ಒಡಿಶಾದ ಧಾರ್ಮಿಕ ಕ್ಷೇತ್ರ ಪುರಿಯಲ್ಲಿ ನಡೆಯುತ್ತಿದ್ದ ಜಾನಪದ ಮೇಳದಲ್ಲಿ ಪಾಲ್ಗೊಳ್ಳಲು ತೆರಳಿದ್ದ ಕರ್ನಾಟಕದ 17 ಮಂದಿ ಜಾನಪದ ಕಲಾವಿದರ ತಂಡವೂ ಕೂಡಾ, ರೈಲು ಅಪಘಾತ ಸಂಭವಿಸಿದ ಹಿನ್ನೆಲೆಯಲ್ಲಿ, ಬಸ್ಸು ಅಥವಾ ರೈಲು ಸಂಚಾರ ಇಲ್ಲದೆಯೇ ಪುರಿಯಲ್ಲಿಯೇ ಸಿಕ್ಕಿ ಹಾಕಿಕೊಂಡಿದೆ ಎಂಬ ವಿಷಯವು ಸಚಿವರ ಗಮನಕ್ಕೆ ಬಂದಾಗ, 17–ಸದಸ್ಯರ ಜಾನಪದ ಕಲಾ ತಂಡವನ್ನೂ ಮೂರು ವಿವಿಧ ವಿಮಾನಗಳಲ್ಲಿ ಜೂನ್ 4 ರಂದು ರಾತ್ರಿ ಬೆಂಗಳೂರಿಗೆ ಕರೆತರುವಲ್ಲಿ ಸಂತೋಷ್ ಲಾಡ್ ಪ್ರಮುಖ ಪಾತ್ರ ವಹಿಸಿರುತ್ತಾರೆ.

**ಸಂತೋಷ್ ಲಾಡ್ ಏಕೆ ?**

ಅಪಘಾತದ ಸುದ್ದಿ ಹೊರಬರುತ್ತಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಸ್ಯಾ ನಿರ್ವಹಣಾ ತಂತ್ರ ಅನುಷ್ಠಾನಕ್ಕೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನೇ ಏಕೆ ಆಯ್ಕೆ ಮಾಡಿದರು ? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಉತ್ತರಾಖಂಡ್ ರಾಜ್ಯದಲ್ಲಿನ ಪುಣ್ಯ ಕ್ಷೇತ್ರಗಳಾದ ಬದರಿನಾಥ್ ಹಾಗೂ




Downloaded From:www.kpscvaani.com





ಕೇದಾರ್‌ನಾಥ್‌ನಲ್ಲಿ 2013 ರ ಜುಲೈನಲ್ಲಿ ಸಂಭವಿಸಿದ ನೆರೆ ಮತ್ತು ಭೂ ಕುಸಿತದ ಸಂದರ್ಭದಲ್ಲಿ ಕನ್ನಡಿಗರ ರಕ್ಷಣೆಗೆ ಸಿದ್ದರಾಮಯ್ಯ ಅವರು ನಿಯೋಜಿಸಿದ್ದು, ಅಂದಿನ ತಮ್ಮ ಸಂಪುಟದಲ್ಲಿ ವಾರ್ತಾ ಮತ್ತು ಮೂಲ ಸೌಲಭ್ಯಗಳ ಅಭಿವೃದ್ಧಿ ಖಾತೆಯ ರಾಜ್ಯ ಸಚಿವರಾಗಿದ್ದ ಸಂತೋಷ್ ಲಾಡ್ ಅವರನ್ನೇ.

ಕನ್ನಡ, ಇಂಗ್ಲೀಷ್, ಹಿಂದಿ ಹಾಗೂ ಮರಾಠಿ ಭಾಷೆಯಲ್ಲಿ ಪ್ರಾವಿಣ್ಯತೆ ಹೊಂದಿದ್ದ ಉತ್ಸಾಹೀ ಯುವಕ ಎಂಬ ಕಾರಣಕ್ಕಾಗಿ ಸಂತೋಷ್ ಲಾಡ್ ಅವರನ್ನು ಉತ್ತರಾಖಂಡದ ನೆರೆ ಮತ್ತು ಭೂ ಕುಸಿತದ ಸಂದರ್ಭದಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಕನ್ನಡಿಗರ ರಕ್ಷಣಾ ಕಾರ್ಯಕ್ಕೆ ಸಿದ್ದರಾಮಯ್ಯ ಅವರು ನಿಯೋಜಿಸಿದ್ದರು.

ಸಂತೋಷ್ ಲಾಡ್ ಅವರ 13–ದಿನಗಳ ರಕ್ಷಣಾ ಕಾರ್ಯದಲ್ಲಿ ಭಾರತೀಯ ಆರಕ್ಷಕ ಸೇವಾ ಅಧಿಕಾರಿ ಹೇಮಂತ್ ಎಂ ನಿಂಬಾಳ್ಕರ್ ಅವರೂ ಕೂಡಾ ಅತ್ಯುತ್ಸಾಹದಿಂದ ಶ್ರಮಿಸಿದ್ದರು. ಇದಾದ ನಂತರ, ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಕಾರ್ಮಿಕ ಖಾತೆಯನ್ನು ಪಡೆದ ಸಂತೋಷ್ ಲಾಡ್ ಅವರು ಸಂಪುಟ ದರ್ಜೆ ಸಚಿವರಾಗಿ ಬಡ್ತಿ ಪಡೆದರು ಎಂಬುದು ಇದೀಗ ಇತಿಹಾಸ. ಈ ಹಿನ್ನೆಲೆಯಲ್ಲಿಯೇ, ಒಡಿಶಾ ರೈಲು ದುರಂತದ ಸುದ್ದಿ ತಮ್ಮ ಗಮನಕ್ಕೆ ಬಂದೊಡನೆಯೇ, ಕನ್ನಡಿಗರ ರಕ್ಷಣೆಗಾಗಿ ಸಮಸ್ಯಾ ನಿರ್ವಹಣಾ ತಂತ್ರದ ಅನುಷ್ಠಾನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೊದಲ ಆಯ್ಕೆ ಸಂತೋಷ್ ಲಾಡ್ ಆಗಿದ್ದರು.

ತಮ್ಮ ಹಿಂದಿನ ಅನುಭವದಲ್ಲಿ ವಿಪತ್ತು ನಿರ್ವಹಣೆಯಲ್ಲಿ ರಾಜ್ಯ ಸರ್ಕಾರಕ್ಕೆ ಹಲವು ಸಲಹೆಗಳನ್ನು ನೀಡಿದ್ದ ಸಂತೋಷ್ ಲಾಡ್ ಅವರು ಇದಕ್ಕಾಗಿಯೇ ಪ್ರತ್ಯೇಕ ಯೋಜನೆ ರೂಪಿಸಲು ಶಿಫಾರಸ್ಸು ಮಾಡಿದ್ದರು.



ಬಹುಜನರಿಗೆ ದೇಶದ ಯಾವುದೋ ಒಂದು ಮೂಲೆಯಲ್ಲಿ ಅಪಘಾತವಾದರೆ, ನಮಗೆ ಏನು ಸಂಬಂಧ ? ಎನಿಸುತ್ತದೆ. ಆದರೆ, ನಮ್ಮ ರಾಜ್ಯದ ಮುಖ್ಯಮಂತ್ರಿಗೆ ಯಾವುದೋ ಮೂಲೆಯಲ್ಲಿ ಅಪಘಾತವಾದರೂ ಅದರಲ್ಲಿ ನಮ್ಮ ಕನ್ನಡಿಗರಿಗೆ ಏನಾಗಿದೆಯೋ ಏನೋ ಎಂಬ ಕಳಕಳಿ ಮತ್ತು ಕಾಳಜಿ ಹೊರ ಹೊಮ್ಮಿದ್ದು ಒಂದೆಡೆ ವ್ಯಕ್ತವಾಗುತ್ತದೆ.

ಅಂತೆಯೇ, ಮುಖ್ಯಮಂತ್ರಿಯವರ ಮಾತನ್ನು ಮರು ಪ್ರಶ್ನಿಸದೆ, ಅವರ ಸೂಚನೆಯನ್ನು ತಲೆಬಾಗಿ ಸ್ವೀಕರಿಸಿ, ತಮಗೆ ವಹಿಸಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ಮತ್ತು ಕರಾರುವಕ್ಕಾಗಿ ನಿರ್ವಹಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಶ್ರೇಷ್ಠ ವ್ಯಕ್ತಿತ್ವ ಗೋಚರಿಸಿದ್ದು ಮತ್ತೊಂದೆಡೆ ಬಹಿರಂಗಗೊಳ್ಳುತ್ತದೆ. ಈ ಭೀಕರ ರೈಲು ಅಪಘಾತದ ಸಂದರ್ಭದಲ್ಲಿ ಈ ಇಬ್ಬರು ಮಹನೀಯರ ನಡೆ ಮತ್ತು ನಡವಳಿಕೆ ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿದೆ.

ಸಿದ್ದರಾಮಯ್ಯ ಅವರ ಎರಡನೇ ಸಂಪುಟದಲ್ಲಿಯೂ, ಎರಡನೇ ಬಾರಿಗೆ ಕಾರ್ಮಿಕ ಸಚಿವರ ಸ್ಥಾನವನ್ನು ಅಲಂಕರಿಸಿರುವ ಸಂತೋಷ್ ಲಾಡ್ ಅವರು ಸಮಸ್ಯಾ ನಿರ್ವಹಣಾ ತಂತ್ರದಲ್ಲಿ ಎಂದಿನಂತೆ ಮುಂಚೂಣಿಯಲ್ಲಿದ್ದಾರೆ.



Downloaded From:www.kpscvaani.com





# ವೆರೈಟಿ ಮಾವು ಮತ್ತು ಹಲಸು ಮೇಳಕ್ಕೆ ಉತ್ತಮ ಜನಸ್ಪಂದನೆ

**ಈ ಬಾರಿ ರಾಜ್ಯದ ವಿವಿಧೆಡೆಯಲ್ಲಿ ಸರ್ಕಾರದಿಂದ ಆಯೋಜಿಸಲಾಗಿದ್ದ ಮಾವು ಮತ್ತು ಹಲಸು ಮೇಳಕ್ಕೆ ಜನರಿಂದ ಉತ್ತಮ ಸ್ಪಂದನೆ ದೊರಕಿದೆ.**

ಡಾ. ವರ ಪ್ರಸಾದ್ ರಾವ್ ಪಿ.ವಿ

ರಾಜ್ಯದಲ್ಲಿ ಮಾವು ಹಾಗೂ ಹಲಸು ಹಣ್ಣಿನ ಋತುಮಾನ ಈಗಾಗಲೇ ಆರಂಭವಾಗಿದ್ದು, ಜುಲೈ ಮಾಹೆಯ ಅಂತ್ಯದವರೆಗೆ ಹಣ್ಣಿನ ಸುಗ್ಗಿ ನಡೆಯುತ್ತಿದೆ. ಹಾಗಾಗಿ ವರ್ಷಕ್ಕೊಮ್ಮೆ ದೊರಕುವ ಹಣ್ಣುಗಳ ರಾಜ ಮಾವಿನ ಹಣ್ಣು ಮತ್ತು ಹಲಸಿನ ಹಣ್ಣನ್ನು ಸವಿಯಲು ಜನರಿಗೆ ಕಡಿಮೆ ಬೆಲೆಗೆ ದೊರಕಿಸಿಕೊಡುವ ಸಲುವಾಗಿ ಪ್ರತಿ ವರ್ಷ ಸರ್ಕಾರವು ಮಾವು ಮತ್ತು ಹಲಸು ಮೇಳವನ್ನು ಆಯೋಜನೆ ಮಾಡುತ್ತದೆ.

ಈ ವರ್ಷ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ವಿವಿಧೆಡೆಗಳಲ್ಲಿ ಮಾವು ಮತ್ತು ಹಲಸು ಮೇಳವನ್ನು ಆಯೋಜಿಸಲಾಗಿತ್ತು. ಕೊಪ್ಪಳದ ಮಾವು ಮೇಳದಲ್ಲಿ ವಿಶ್ವದ ಅತ್ಯಂತ ದುಬಾರಿ ಮಾವು ಮಿಯಾಜಾಕಿಯನ್ನು ಪ್ರದರ್ಶಿಸಿದ್ದು ವಿಶೇಷವಾಗಿತ್ತು.

**"ಹಸಿದು ಹಲಸು ತಿನ್ನು, ಉಂಡು ಮಾವು ತಿನ್ನು"** ಎಂಬ ಮಾತಿನಂತೆ ಹಲಸು ಹಾಗೂ ಮಾವಿನ ಸೀಸನ್ ಶುರುವಾಗಿದ್ದು, ಜುಲೈ ಕೊನೆಯವರಗೆ ರಸ್ತೆ ಬದಿಯಲ್ಲಿ ಈ ಎರಡು ಹಣ್ಣುಗಳ ಮಾರಾಟ ನಡೆಯುತ್ತದೆ. ರುಚಿ ರುಚಿಯಾದ ಹಣ್ಣುಗಳಿಗಾಗಿ ಜನ ಹುಡುಕಾಡುತ್ತಾರೆ. ಆದರೆ ರಾಸಾಯನಿಕ ಮುಕ್ತ ಹಾಗೂ ಉತ್ತಮ ಗುಣಮಟ್ಟದ ಹಣ್ಣುಗಳು ಯಾವುದು ಎನ್ನುವುದು ಜನರಿಗೆ ಗೊತ್ತಾಗುವುದಿಲ್ಲ.

ಹೀಗಾಗಿ ತೋಟಗಾರಿಕೆ ಇಲಾಖೆಯು ಜಿಲ್ಲಾಡಳಿತ ಮತ್ತು ಹಾಪ್‌ಕಾಮ್ಸ್ ಆಶ್ರಯದಲ್ಲಿ ರಾಜ್ಯದ ಹಲವು ಕಡೆಗಳಲ್ಲಿ ಮಾವು ಮತ್ತು ಹಲಸು ಮೇಳಗಳನ್ನು ನಿರಂತರವಾಗಿ ಆಯೋಜಿಸಿ, ನೈಸರ್ಗಿಕವಾಗಿ ಮಾಗಿಸಿರುವ ವಿವಿಧ ಹಲಸು ಮತ್ತು ಮಾವಿನ ಹಣ್ಣುಗಳನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವ ಮತ್ತು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ ರೈತರಿಗೆ ನ್ಯಾಯಬೆಲೆ ದೊರಕಿಸಿ ಕೊಡುವ ಉದ್ದೇಶದಿಂದ ಹಣ್ಣುಗಳ ತಳಿಗಳ ಪ್ರದರ್ಶನ ಹಾಗೂ ಮಾರಾಟ ಮೇಳಗಳನ್ನು ಆಯೋಜಿಸುತ್ತದೆ. ಹಾಗಾಗಿ ಈ ಬಾರಿ ಮಡಿಕೇರಿ, ಹುಬ್ಬಳ್ಳಿ, ಮೈಸೂರು, ಕೊಪ್ಪಳ, ಚಿಕ್ಕಬಳ್ಳಾಪುರ, ಉಡುಪಿ, ಮಡಿಕೇರಿ ಸೇರಿದಂತೆ ರಾಜಧಾನಿ ಬೆಂಗಳೂರಿನಲ್ಲಿಯೂ ಆಯೋಜಿಸಲಾಗಿತ್ತು.

ಹಣ್ಣುಗಳ ಮೇಳಗಳಲ್ಲಿ ಮಾವು ಮತ್ತು ಹಲಸಿನ ಹಣ್ಣುಗಳ ಘಮ ಘಮ ಸುವಾಸನೆ ಪಸರಿಸಿಕೊಂಡಿತ್ತು. ಒಂದು ಕಡೆ ಬಾಯಲ್ಲಿ ನೀರೂರಿಸುವ ಹಲಸಿನ ಹಣ್ಣುಗಳು, ಮತ್ತೊಂದೆಡೆ



Downloaded From:www.kpscvaani.com




**'ಮೀಯಾ ಜಾಕಿ' ಎಂಬ ಜಪಾನ್ ಮಾವು**

'ಕೊಪ್ಪಳ ಮಾವು ಮೇಳ–2023'ದಲ್ಲಿ ಜಗತ್ತಿನ ಅತ್ಯಂತ ದುಬಾರಿ ಮಾವು 'ಮೀಯಾ ಜಾಕಿ' ಎಂಬ ಜಪಾನ್ ತಳಿಯನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಈ ಮಾವಿನ ಹಣ್ಣಿನ ರುಚಿಗಿಂತ ಬೆಲೆ ಜನರ ಗಮನಸೆಳೆಯಿತು. ಈ ಮಾವಿನ ಹಣ್ಣಿನ ಬೆಲೆ ಕೆಜಿಗೆ 2.50 ಲಕ್ಷ ರೂ ಗಳು. ಮಾವು ಬೆಳೆಯುವ ಕೊಪ್ಪಳ ಜಿಲ್ಲೆಯ ರೈತರಿಗೆ ಈ ತಳಿ ಪರಿಚಯಿಸುವ ಉದ್ದೇಶದಿಂದ 40 ಸಾವಿರ ರೂ ನೀಡಿ ಒಂದು ಹಣ್ಣನ್ನು ಖರೀದಿಸಿ ಪ್ರದರ್ಶನಕ್ಕೆ ಇಡಲಾಗಿತ್ತು. ಈ ತಳಿಯ ಮಾವಿನ ಹಣ್ಣು ಒಂದು ಕೆಜಿಗೆ 5 ರಿಂದ 6 ಹಣ್ಣು ಬರುತ್ತದೆ.

ಕೆಂಪು ಕೆಂಪಾದ ಸೆಂಧೂರ, ಮಲಗೋಬಾದಂತ ವಿವಿಧ ತಳಿಯ ಮಾವಿನ ಹಣ್ಣುಗಳು. ತಾಜಾ ಹಣ್ಣಿಗಾಗಿ ಸ್ಟಾಲ್‌ಗಳಿಗೆ ಮುಗಿಬಿದ್ದ ಗ್ರಾಹಕರು. ಇದು ಮಾವು ಮತ್ತು ಹಲಸು ಮೇಳದಲ್ಲಿ ಕಂಡು ಬಂದ ದೃಶ್ಯಗಳು.

ಬೆಂಗಳೂರು ನಗರದ ಲಾಲ್‌ಬಾಗ್ ಮುಖ್ಯರಸ್ತೆಯಲ್ಲಿರುವ ಹಾಪ್‌ಕಾಮ್ಸ್ ಕೇಂದ್ರ ಮಳಿಗೆಯಲ್ಲಿ ಮೇಳಕ್ಕೆ ಚಾಲನೆ ನೀಡಿಲಾಯಿತು. ಮೇಳವು ಜೂನ್ 5 ರವರೆಗೆ ನಡೆಯಿತು. ಈ ಮೇಳದಲ್ಲಿ 20 ಕ್ಕೂ ಹೆಚ್ಚು ಬಗೆಯ ಮಾವುಗಳ ಪ್ರದರ್ಶನ ಮತ್ತು ಮಾರಾಟ ಮಾಡಲಾಯಿತು.

ಹಲಸಿನ ಹಣ್ಣನ್ನು 'ಬಡವರ ಹಣ್ಣು', 'ಬಡವರ ಕಲ್ಪವೃಕ್ಷ' ಎಂತಲೂ ಜನಜನಿತವಾಗಿದೆ. ಹೊರಗಡೆ ಒರಟಾದರೂ ಒಳಗಡೆ ಮಾತ್ರ ಸ್ವಾದಿಷ್ಟ ಹಣ್ಣು ಹಲಸು. ಹಲಸಿನಲ್ಲೂ ಅನೇಕ ವಿಧಗಳಿವೆ. ಬಣ್ಣ, ರುಚಿ, ಆಕಾರ, ಗಾತ್ರದ ಆಧಾರದ ಮೇಲೆ 100 ಕ್ಕೂ ಹೆಚ್ಚು ಪ್ರಭೇದಗಳನ್ನು ಕೃಷಿ ಇಲಾಖೆ ಗುರುತಿಸಿದೆ. ಕರ್ನಾಟಕದಲ್ಲಿ ಮಲೆನಾಡು ಹಾಗೂ ಕರಾವಳಿ ಕಾಡುಗಳಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. ವಿಶ್ವದಲ್ಲೇ ಭಾರತ ದೇಶವು ಹಲಸು ಬೆಳೆಯಲ್ಲಿ ದ್ವಿತೀಯ ಸ್ಥಾನದಲ್ಲಿದ್ದರೆ, ಭಾರತದಲ್ಲಿ ನಮ್ಮ ಕರ್ನಾಟಕ ಹಲಸು ಬೆಳೆಯಲ್ಲಿ ತೃತೀಯ ಸ್ಥಾನದಲ್ಲಿದೆ.

ಬಾಯಿಗಿಟ್ಟರೆ ಜೇನು ಸವಿದಂತೆನಿಸುವ ಸ್ವಾದಿಷ್ಟ ಹಲಸಿನದು. ಹಣ್ಣು ಮತ್ತು ಬೀಜದಲ್ಲಿರುವ ಅಪಾರವಾದ ಫೈಟೋ ಕೆಮಿಕಲ್ಸ್, ಪೋಷಕ ನಾರು, ಪ್ರೋಟೀನ್, ವಿಟಮಿನ್, ಖನಿಜಗಳು ಸೇರಿದಂತೆ ಅನೇಕ ಪೋಷಕಾಂಶಗಳು ಇವೆ. ದೇಹದ ಆರೋಗ್ಯಕ್ಕೆ ಹಲಸು ಅನೇಕ ರೀತಿಯಲ್ಲಿ ಮಹತ್ವದ್ದಾಗಿದೆ.

ಹಿಂದೆಲ್ಲಾ ಮಾವು, ಬಾಳೆಗಳಂತೆ ಹಲಸನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಿರಲಿಲ್ಲ. ಇಳುವರಿ ದೃಷ್ಟಿಯಿಂದ ಈ ಹಣ್ಣಿನ ಬೇಸಾಯ ಇತರ ಹಣ್ಣಿಗಿಂತ ಹೆಚ್ಚು ಲಾಭದಾಯಕ. ಹಾಗಾಗಿ ಹಲಸಿನಲ್ಲೂ ಕಸಿ ಗಿಡಗಳು ದೊರೆಯುತ್ತಿರುವುದರಿಂದ ಈಗೀಗ ಬಹಳಷ್ಟು ರೈತರು ಹಲಸನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲಾರಂಭಿಸಿದ್ದಾರೆ. 5 ಕೆಜಿಯಿಂದ 50 ಕೆಜಿಗಳವರೆಗೆ ತೂಗುವ ಇದು ಗಾತ್ರದಲ್ಲಿ ಹಣ್ಣುಗಳ ದೊಡ್ಡಣ್ಣನೂ ಹೌದು. ಹೊಲಗಳಲ್ಲಿ ಹೆಚ್ಚಾಗಿ ಹಲಸನ್ನು ಬೆಳೆಯಲಾಗುತ್ತದೆ.

ರಾಜ್ಯದ ನಾನಾ ಕಡೆಯಿಂದ ರೈತರು ತಾವು ಬೆಳೆದಿರುವ ಮಾವು ಹಲಸಿನ ಹಣ್ಣನ್ನು ಇಲ್ಲಿ ಮಾರಾಟ ಮಾಡಲು ಅವಕಾಶ ನೀಡಲಾಗುತ್ತದೆ. ಇನ್ನು ರೈತರಿಗೆ ಮತ್ತು ಗ್ರಾಹಕರಿಗೆ ಅನುಕೂಲವಾಗಲಿ ಅಂತಾ ಹಣ್ಣಿನ ದರವನ್ನು ತೋಟಗಾರಿಕೆ ಇಲಾಖೆಯೇ ನಿಗದಿ ಮಾಡುತ್ತದೆ.

ಅಕಾಲಿಕ ಮಳೆ ಮತ್ತು ಬಿಸಿಗಾಳಿಯಿಂದ ರಾಜ್ಯದಲ್ಲಿ ಮಾವಿನ ಇಳುವರಿ ಕಡಿಮೆಯಾಗಿತ್ತು, ಹಾಗಾಗಿ ಈ ಬಾರಿ ಮಾವಿನ ಮೇಳ ನಡೆಯುವುದೇ ಅನುಮಾನ ಎನ್ನಲಾಗುತ್ತಿತ್ತು. ಆದರೆ ಸದ್ಯ ಮೇಳವನ್ನು ಆಯೋಜಿಸಲಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಬೇಡಿಕೆ ಪೂರೈಸುವುದು ಕಷ್ಟವಾಗುತ್ತದೆ ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಉಮಾ ಶಂಕರ್ ಮಿರ್ಜಿ ಅವರು ಅಭಿಪ್ರಾಯಪಟ್ಟರು.

**ಹುಬ್ಬಳ್ಳಿಯಲ್ಲಿ 'ಹಲಸು ಹಬ್ಬ'**

ಹಲಸು ಮೇಳವನ್ನು ಕೇಂದ್ರವಾಗಿಟ್ಟುಕೊಂಡು, ಹುಬ್ಬಳ್ಳಿಯ ಜಗದ್ಗುರು ಮೂರು ಸಾವಿರ ಮಠದ ಮೂಜಗಂ ಸಭಾಭವನದಲ್ಲಿ ಮೇ 27 ಮತ್ತು 28 ರಂದು 'ಸಾವಯವ ಮೇಳ ಮತ್ತು ಹಲಸಿನ ಹಬ್ಬ'ವನ್ನು ನಡೆಸಲಾಯಿತು. ಹಲಸಿನ ವಿಶೇಷ ತಳಿಗಳ ಮಾರಾಟ, ಮಹಿಳಾ ಸ್ವಸಹಾಯ ಸಂಘಗಳು ತಯಾರಿಸಿದ ಹಲಸಿನ ವಿವಿಧ ಖಾದ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ ಮತ್ತು ಪ್ರದರ್ಶನ, ಕೆಂಪು ಹಲಸು, ಸಿದ್ದು ಹಲಸಿನ ಗಿಡ ಮತ್ತು ಹಣ್ಣಿನ ಮಾರಾಟ ನಡೆಯಿತು.

ತುಮಕೂರಿನ ಮೇಳದಲ್ಲಿ ಕೆಂಪು ಹಲಸು ಗಮನ ಸೆಳೆಯಿತು. ರಾಷ್ಟ್ರೀಯ ಮನ್ನಣೆ ಗಳಿಸಿರುವ ಗಾಢ ಕೆಂಪು ವರ್ಣದ ಸಿದ್ದು ಹಲಸು ಗಿಡಗಳನ್ನು ಬೆಳೆಸುವ ಆಸಕ್ತಿ ಇರುವವರಿಗೆ ನೀಡಲಾಯಿತು. ಕೆಂಪು, ಹಳದಿ, ಬಿಳಿ, ಹಲಸಿನ ತಳಿ ಹಣ್ಣುಗಳು ಹಾಗೂ ಹಲಸಿನ ಚಿಪ್ಸ್, ಚಾಕೊಲೇಟ್, ಹಪ್ಪಳ, ಹಲ್ವ, ಹಲಸಿನ ಬೀಜದ ಪುಡಿ, ಹಣ್ಣಿನ ಪುಡಿ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿತ್ತು. ನಿಗದಿತ ಅವಧಿಯಲ್ಲಿ ಹಲಸಿನ ತೊಳೆ ತಿನ್ನುವ ಸ್ಪರ್ಧೆ ಏರ್ಪಡಿಸಲಾಗಿತ್ತು. ಪುರುಷರು ಮತ್ತು ಮಹಿಳೆಯರಿಗೆ ನಡೆದ ಪ್ರತ್ಯೇಕ ಸ್ಪರ್ಧೆಯಲ್ಲಿ ಬಹಳಷ್ಟು ಮಂದಿ ಉತ್ಸಾಹದಲ್ಲಿ ಪಾಲ್ಗೊಂಡಿದ್ದರು.

**ಆನ್‌ಲೈನ್‌ನಲ್ಲಿಯೂ ಮಾರಾಟ**

ಮಾವು ಖರೀದಿಗೆ ಆನ್‌ಲೈನ್‌ನಲ್ಲಿಯೂ ಅವಕಾಶವನ್ನು ಕಲ್ಪಿಸಲಾಗಿತ್ತು. ತೋಟಗಾರಿಕೆ ಇಲಾಖೆ ವತಿಯಿಂದ ಮಾವು ಬೆಳೆಗಾರರು, ವರ್ತಕರು ಹಾಗೂ ವಿವಿಧ ಇಲಾಖೆ ಅಧಿಕಾರಿಗಳಿಗೆ ಮಾವು ಮಾಗಿಸುವ ಸಂಬಂಧ ತರಬೇತಿ ಕಾರ್ಯಕ್ರಮ ನಡೆಸಲಾಗಿದ್ದರಿಂದ ಇಲ್ಲಿ ಮಾರಾಟವಾದ ಹಣ್ಣುಗಳು ರಾಸಾಯನಿಕ ಮುಕ್ತವಾಗಿತ್ತು.

ಈ ಮೇಳಗಳಲ್ಲಿ ಸಹಜವಾಗಿ ಮಾಗಿಸಿದ ಹಣ್ಣುಗಳ ಮಾರಾಟಕ್ಕೆ ಮಾತ್ರ ಅವಕಾಶ. ಈ ಬಗ್ಗೆ ಪರೀಕ್ಷಿಸಿ ಖಾತರಿಪಡಿಸಿಕೊಳ್ಳಲಾಗುವುದು. ವಂಚಿಸಿ ಮಾರಾಟಕ್ಕೆ ಮುಂದಾದರೆ ಅಂತಹವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಆಹಾರ ಸುರಕ್ಷತಾ ಇಲಾಖೆ ಹಣ್ಣುಗಳನ್ನು ಪರೀಕ್ಷಿಸುತ್ತದೆ. ಕೆಲವು ರೈತರು ಮಾವು ಹಣ್ಣಾಗಲು ಹಾನಿಕಾರಕ ರಾಸಾಯನಿಕಗಳನ್ನು ಬಳಸುತ್ತಿರುವ ಬಗ್ಗೆ ದೂರುಗಳಿವೆ. ಇದು ಗ್ರಾಹಕರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಹೀಗಾಗಿ ರಾಸಾಯನಿಕ ಬಳಸಿ ಮಾಗಿದ ಮಾವಿನ ಹಣ್ಣು ಮಾರಾಟವನ್ನು ನಿಷೇಧಿಸಲಾಗಿದೆ. ■


Downloaded From:www.kpscvaani.com











# ಜಮಖಂಡಿಯಲ್ಲೊಂದು ರೈತನ ತರಕಾರಿ ಪಾರ್ಕ್

**ಅತ್ಯಂತ ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ಪಡೆಯುತ್ತಿರುವ ಜಮಖಂಡಿ ರೈತನ ಕೃಷಿ ವಿಧಾನ ಇಲ್ಲಿದೆ.**

ಕಿಶನರಾವ್ ಕುಲಕರ್ಣಿ

ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಚಿಮ್ಮಡ ಗ್ರಾಮದ ಯುವ ರೈತ ಮಹಾಂತೇಶ ಪಾಂಡಪ್ಪ ಜಾಲಿಕಟ್ಟಿ ಸರ್ಕಾರ ರೈತರಿಗೆ ನೀಡುವ ವಿವಿಧ ಸೌಲಭ್ಯಗಳನ್ನು ಬಳಸಿಕೊಂಡು, ಹತ್ತಾರು ವರ್ಷಗಳಿಂದ ಪ್ರಯೊಗಶೀಲರಾಗಿ ಕಡಿಮೆ ಭೂಮಿಯಲ್ಲಿ ಗರಿಷ್ಟಮಟ್ಟದಲ್ಲಿ ಗುಣಮಟ್ಟದ ತರಕಾರಿ ಬೆಳೆದು, ಸುತ್ತಲಿನ ಹತ್ತಾರು ಜನರಿಗೆ ನಿತ್ಯ ಉದ್ಯೋಗ ನೀಡಿ ತೋಟಗಾರಿಕೆ ಕ್ಷೇತ್ರದಲ್ಲಿ ಸೈ ಎನಿಸಿಕೊಂಡಿದ್ದಾರೆ.

ಈ ಯುವ ರೈತನ ತೋಟಕ್ಕೆ ನಿತ್ಯ ಸುತ್ತಲಿನ ರೈತರು ಭೇಟಿ ನೀಡಿ ತೋಟಗಾರಿಕೆಯಲ್ಲಿ ತರಕಾರಿ ಬೆಳೆಯುವ ಅವರ ಅನುಭವವನ್ನು ಕೇಳುತ್ತಾರೆ. ಹಾಗೆ ಬಂದವರಿಗೆ ಈ ಯುವ ರೈತ ಉಚಿತವಾಗಿ ಪಾಠ ಮಾಡಿ ತನ್ನ ತೋಟ, ಬೆಳೆ ತೋರಿಸುತ್ತಾ ಪ್ರಾತ್ಯಕ್ಷಿಕೆ ಪಾಠ ಮಾಡುತ್ತಿದ್ದಾರೆ. ಹಾಗಾದರೆ ಆ ರೈತ ಮಾಡುತ್ತಿರುವ ಕೃಷಿ ವಿಧಾನ ಎಂತಹದ್ದು, ಮಾರುಕಟ್ಟೆ ವ್ಯವಸ್ಥೆ ಹೇಗಿದೆ, ಇಂತಹ ಸ್ಪರ್ಧಾತ್ಮಕ ದಿನಗಳಲ್ಲೂ ಅವರು ಹೇಗೆ ತರಕಾರಿ ಕೃಷಿ ನಿರ್ವಹಿಸುತ್ತಿದ್ದಾರೆ ಎಂಬುದನ್ನು ನಾವು ನೋಡಿ ಬರೋಣ ಬನ್ನಿ.

**ಮೈತುಂಬ ಕೆಲಸ ಕೈತುಂಬ ಕಾಸು:**

ಹೂಕೋಸು, ಎಲೆಕೋಸು, ಕ್ಯಾರೆಟ್, ಟೊಮ್ಯಾಟೊ, ದಪ್ಪ ಮೆಣಸಿನಕಾಯಿ, ಉದ್ದ ಮೆಣಸಿನಕಾಯಿ, ಈರುಳ್ಳಿ, ಕೋತಂಬರಿ, ಸೋಯಾ, ಮೆಂತೆ... ಹೀಗೆ



Downloaded From:www.kpscvaani.com

ಹತ್ತಾರು ತರಕಾರಿ ಮತ್ತು ಸೊಪ್ಪು ಬೆಳೆಗಳನ್ನು ಕಡಿಮೆ ಭೂಮಿಯಲ್ಲಿ ಬೆವರು ಹರಿಸಿ ಲಕ್ಷ ಲಕ್ಷ ಸಂಪಾದನೆ ಮಾಡುತ್ತಿದ್ದಾರೆ. ಹತ್ತನೆ ತರಗತಿವರೆಗೆ ಓದಿದ ನಂತರ ಬಡತನ ಕಾರಣವಾಗಿ ಶಾಲೆ ಬಿಟ್ಟು ಸ್ವಂತ ವಾಹನ ಚಾಲಕರಾಗಿ ದುಡಿಯುತ್ತಿದ್ದರು. ಅಪ್ಪ ಪಾಂಡಪ್ಪ ಅವರ ತಿಳುವಳಿಕೆಯ ಮಾತಿಗೆ ತಲೆಬಾಗಿ ಅಷ್ಟೊಂದು ಫಲವತ್ತಲ್ಲದ ತಮ್ಮ 11 ಎಕರೆ ಒಣ ಜಮೀನಿನ ನೊಗ ಹೊತ್ತುಕೊಂಡರು.

ಅವರಿವರ ಬೇಸಾಯ ಕ್ರಮ ನೋಡಿದ್ದ ಮಹಾಂತೇಶ ಅವರಿಗೆ ತಾನೂ ಆ ರೀತಿ ಅನುಸರಿಸಬೇಕು ಎಂಬ ಉತ್ಕಟ ಆಸೆ ಇದ್ದರೂ ಆ ಸಮಯದಲ್ಲಿ ಅವರ ಕೈಯಲ್ಲಿ ನಯಾಪೈಸೆ ಹಣ ಇದ್ದಿಲ್ಲ. ಸಾಲ ಕೊಟ್ಟರೂ ಮರಳಿ ಬರುವ ವಿಶ್ವಾಸ ಇಲ್ಲವೆಂದರಿತ ಎಷ್ಟೋ ಹಣವಂತರು ಇವರಿಗೆ ಸಾಲ ನೀಡಲು ಹಿಂದೆ ಮುಂದೆ ನೋಡಿದ್ದರು. ಬಳಿಕ ಬ್ಯಾಂಕಿನಲ್ಲಿ ಕಡಿಮೆ ಮೊತ್ತದ ಸಾಲ ಪಡೆದುಕೊಂಡರು. ಕೊಳವೆ ಬಾವಿ ಕೊರೆಯಿಸಿದರು.

ಹಣ್ಣಿನ ಬೆಳೆ, ಅರಣ್ಯ ಕೃಷಿ, ವಾಣಿಜ್ಯ ಬೆಳೆಗಳನ್ನು ಬೆಳೆಯುವ ಗುರಿ ಹಾಕಿಕೊಂಡಿದ್ದರೂ ಅವರಿಗೆ ಆಗಿನ್ನು ಅಷ್ಟೊಂದು ಬಂಡವಾಳ ತೊಡಗಿಸಲು ಆರ್ಥಿಕ ಶಕ್ತಿ ಇಲ್ಲದ ಕಾರಣ ಅರಂಭದಲ್ಲಿ ಸ್ವಲ್ಪಮಟ್ಟಿಗೆ ತರಕಾರಿ ಬೆಳೆ ಹಾಕಿಕೊಂಡರು. ಸ್ಥಳೀಯ ಮಾರುಕಟ್ಟೆಯಲ್ಲಿ ತಾವೆ ಹೊತ್ತು ಮಾರಿದರು. ಕ್ರಮೇಣ ತರಕಾರಿ ಬೆಳೆಯುವಲ್ಲಿ ಇವರು ಎಲ್ಲ ಬಗೆಯ ನೆಲಮಟ್ಟದ ಜ್ಞಾನ ಒದಗಿಸಿಕೊಂಡ ಕಾರಣವಾಗಿ ಅದರಲ್ಲಿಯೇ ಹೆಚ್ಚು ಲಾಭ ಪಡೆದುಕೊಳ್ಳುವಂತಾಯಿತು. ಅಲ್ಲಿಯವರೆಗಿದ್ದ ಅವರ ವಾಣಿಜ್ಯ ಕೃಷಿಯ ದೊಡ್ಡ ಗುರಿ ತಪ್ಪಿ ತರಕಾರಿ ಬೆಳೆದರೆ ಸಾಕು ನಾವು ಬದುಕುವುದರ ಜೊತೆಗೆ ನಮ್ಮ ಅಕ್ಕಪಕ್ಕದ ಹತ್ತಾರು ಜನರನ್ನು ಬದುಕಿಸಬಹುದು ಎಂದು ಹತ್ತಾರು ಎಕರೆ ಜಮೀನಿನಲ್ಲಿ ವಿವಿಧ ಬಗೆಯ ತರಕಾರಿಗಳನ್ನು ಬೆಳೆಯಲು ಆರಂಭಿಸಿದರು.

ಸದ್ಯ ಮಹಾಂತೇಶ ಅವರ ತೋಟಕ್ಕೆ ಬಂದರೆ ಕಣ್ಣಾಯಿಸಿದೆಡೆ ವೈವಿಧ್ಯಮಯ ತರಕಾರಿ ಬೆಳೆಗಳು ಕಂಡು ಬರುತ್ತಿವೆ. ಜೊತೆಗೆ ಆಧುನಿಕ ಕೃಷಿ ಪದ್ಧತಿಯ ಕುರುಹುಗಳು ಕಂಡು ಬರುತ್ತವೆ. ತಮ್ಮ ಕುಟುಂಬದವರಷ್ಟೆ ಅಲ್ಲ ನಿತ್ಯ ಹತ್ತಾರು ಜನರಿಗೆ ಬಿಡುವಿಲ್ಲದೆ ಉದ್ಯೋಗ ನೀಡಿದ್ದಾರೆ. ಆಗ ಕೈಯಲ್ಲಿ ಇನಿತು ಕಾಸಿಲ್ಲದ ಅಲೆದ ಇವರು ಈಗ ತಿಂಗಳಿಗೆ ಸುಮಾರು 60 ಸಾವಿರ ರೂಪಾಯಿ ತಮ್ಮ ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವೇತನ ನೀಡುತ್ತಾರೆಂದರೆ ಉಳಿದ ರೈತರು ಹುಬ್ಬೇರಿಸಲೇಬೇಕು. ಅಷ್ಟೇ ಏಕೆ ಪ್ರತಿ ವರ್ಷ ಏನಿಲ್ಲವೆಂದರೂ 15 ರಿಂದ 20 ಲಕ್ಷ ಸಂಪಾದನೆಯಾಗುತ್ತದೆ ಎಂದು ಹೆಮ್ಮೆಯಿಂದ ಹೇಳುತ್ತಾರೆ.

**ಹೀಗಿದೆ ಕೃಷಿ ವಿಧಾನ:**

ಆರಂಭದಲ್ಲಿ ಬೆಳೆ ಬೆಳೆಯುವ ಪ್ರದೇಶವನ್ನು ಉಳುಮೆ ಮಾಡಿ ಸಸಿ ನೆಟ್ಟಿದ್ದಾರೆ. ನಂತರ ಸಸಿ ನೆಡುವ ಜಾಗದಲ್ಲಿ ನೀರು ಹಾಯಿಸಲು ಹನಿ ನೀರಾವರಿ ಪದ್ಧತಿಯ ಸಣ್ಣ ಕೊಳವೆ ಅಳವಡಿಸಿ ಕಾಂಪೋಸ್ಟ್ ಗೊಬ್ಬರ ಹಾಕುತ್ತಾರೆ. ಇದರ ಮೇಲೆ ಕಳೆ ಬೆಳೆಯದಂತೆ ತಡೆಯುವ ಪ್ಲಾಸ್ಟಿಕ್ ಹಾಳೆಯಂಥ ಮಲ್ಚಿಂಗ್ ಪೇಪರ್ ಹಾಸಲಾಗುತ್ತದೆ. ಅದರ ಮಧ್ಯೆ ಮಾಡಿರುವ ರಂಧ್ರಗಳಲ್ಲಿ ಬೆಳೆಯಬೇಕಿರುವ ಸಸಿಗಳನ್ನು ನೆಡಲಾಗುತ್ತದೆ. ಇದೆಲ್ಲ ಪ್ರಕ್ರಿಯೆಗೂ ಹೆಚ್ಚಿನ ಕೂಲಿಕಾರರ ಅಗತ್ಯ ಬರುವುದಿಲ್ಲ. ಸಸಿಗಳನ್ನು ನೆಟ್ಟ ನಂತರ ಹನಿ ನೀರಾವರಿ ಮೂಲಕ ನೀರನ್ನು ಬಿಡಲಾಗುತ್ತದೆ.

ರಾಸಾಯನಿಕ ಗೊಬ್ಬರವನ್ನು ಕೂಡ ಹನಿ ನೀರಾವರಿಯಲ್ಲೇ ಮಿಶ್ರಣ ಮಾಡಿ ಹಾಯಿಸಲಾಗುತ್ತದೆ ಎಂದು ಮಹಾಂತೇಶ ವಿವರಣೆ ನೀಡುತ್ತಾರೆ. ಈ ರೀತಿ ಮಲ್ಚಿಂಗ್ ಮಾಡುವುದರಿಂದ ಸಸಿಗಳಿಗೆಲ್ಲ ಸಮಾನವಾಗಿ ನೀರು ಗೊಬ್ಬರ ದೊರಕುತ್ತದೆ. ಬೆಳವಣಿಗೆಯೂ ಸರಾಗವಾಗುತ್ತದೆ. ಮಧ್ಯೆ ಕಳೆಗಿಡ ಬೆಳೆಯಲು ಅಸಾಧ್ಯವಾಗುವುದರಿಂದ ಕೊಟ್ಟ ಗೊಬ್ಬರವೆಲ್ಲ ಸಸಿಗಳ ಪಾಲಾಗುತ್ತದೆ. ವಾರಕ್ಕೊಮ್ಮೆ ನೀರು ಹಾಯಿಸಿದರೆ ಸಾಕು. ಪೇಪರ್ ಒಳಗಡೆ ತೇವಾಂಶವೂ ತಗ್ಗುವುದಿಲ್ಲ. ಇದರಿಂದ ಹಣ, ಸಮಯ, ನೀರು ಎಲ್ಲವೂ ಉಳಿತಾಯವಾಗುತ್ತದೆ ನೋಡಿ ಎಂದು ತೇವಾಂಶ ಭರಿತ ನೆಲ ತೋರಿಸುತ್ತಾರೆ.

**ಎಲೆಕೋಸಿಗೆ ಹೆಚ್ಚಿದ ಬೇಡಿಕೆ:**

ಮಹಾಂತೇಶ ಅವರು ಬೆಳೆಯುವ ಎಲೆಕೋಸಿಗೆ ಕರ್ನಾಟಕ ಅಷ್ಟೆ ಅಲ್ಲ ಹೊರ ರಾಜ್ಯಗಳಾದ ಗೋವಾ, ಮಹಾರಾಷ್ಟ್ರಗಳಿಂದಲೂ ಸಾಕಷ್ಟು ಬೇಡಿಕೆ ಬರುತ್ತದೆ. ಲೋಡ್‌ಗಟ್ಟಲೆ ತರಕಾರಿ ಇವರಲ್ಲಿ ಸಿಗುವುದು, ಎಲ್ಲ ಬಗೆಯ ತರಕಾರಿ ಒಂದೆ ಕಡೆ ದೊರೆಯುವುದು ಹಾಗೂ ರೋಗ ರಹಿತ ತರಕಾರಿಗಳನ್ನು ಬೆಳೆಯುವುದರಿಂದ ವಿವಿಧ ಭಾಗಗಳಲ್ಲಿನ ತರಕಾರಿ ದಲ್ಲಾಳಿಗರು ಮಹಾಂತೇಶ ಅವರಿಗೆ ದೂರವಾಣಿಯ ಮೂಲಕ ಬೇಡಿಕೆ ಹಾಗೂ ಬೆಲೆ ನಿಗದಿಪಡಿಸಿಕೊಂಡು ವಾಹನ ಸಮೇತ ಇವರ ತೋಟಕ್ಕೆ ಬಂದು ತರಕಾರಿ ಖರೀದಿಸುತ್ತಾರೆ. ವಾರಕ್ಕೆ ಮೂರು ಬಾರಿ ಒಂದೊಂದು ತರಕಾರಿ ಲೋಡ್‌ಗಟ್ಟಲೆ ಸಾಗಿಸಿದರೆ ಪ್ರತಿದಿನ ಯಾವುದಾದರೊಂದು ತರಕಾರಿ ಇವರ ತೋಟದಿಂದ ಹೋಗುವುದಂತೂ ಪಕ್ಕಾ.

"ಕೋಸನ್ನು ಜೂನ್ ಜುಲೈನಲ್ಲಿ ಮತ್ತು ಅಕ್ಟೋಬರ್-ನವೆಂಬರ್ ಅವಧಿಯಲ್ಲಿ ಬೆಳೆಯಬಹುದು. 65 ದಿನಗಳಿಂದ 80ದಿನಗಳ ಅಂತರದಲ್ಲಿ ಕೊಯ್ಲಿಗೆ

**ಇಸ್ರೇಲ್ ಮಾದರಿಯ ಕೃಷಿ:**

ಕೃಷಿ ಇಲಾಖೆಯ ಹಲವಾರು ತರಬೇತಿಗಳು ಹಾಗೂ ಕೃಷಿ ಅಧಿಕಾರಿಗಳ ವಿವಿಧ ಸಲಹೆಗಳಂತೆ ಮಹಾಂತೇಶ ತಮ್ಮ ಜಮೀನಿನಲ್ಲಿ ಇಸ್ರೇಲ್ ಮಾದರಿಯ ಆಧುನಿಕ ಕೃಷಿ ಅಳವಡಿಸಿಕೊಂಡಿದ್ದಾರೆ. ಟೊಮ್ಯಾಟೊ, ದಪ್ಪ ಮೆಣಸಿನಕಾಯಿ, ಕೋಸು ಹಾಗೂ ಹೂವುಗಳನ್ನು ಈ ಪದ್ಧತಿಯಲ್ಲಿ ಬೆಳೆಯುತ್ತಿದ್ದಾರೆ. ಇದು ಅಧಿಕ ಲಾಭದಾಯಕವಾಗುವುದರ ಜೊತೆಗೆ ಕೂಲಿ ಕಾರ್ಮಿಕರ ಬಳಕೆಯನ್ನು ಗಣನೀಯವಾಗಿ ಕಡಿತಗೊಳಿಸಿದೆ. ಇವರು ಸುಲಭ, ಸರಳ ಬೇಸಾಯ ಪದ್ಧತಿಯನ್ನೂ ಅನುಸರಿಸುತ್ತಿರುವುದರಿಂದ ಪ್ರತಿ ಸಸಿಗೂ ಗೊಬ್ಬರ ಹಾಕುವ ಪ್ರಮೇಯವಿಲ್ಲ ಎನ್ನುವುದು ಅವರ ಅನುಭವದ ಮಾತು.





Downloaded From:www.kpscvaani.com




ಬರುತ್ತದೆ. ಕಡಿಮೆ ಒಳಸುರಿ ಬೇಡುವ ಬೀಜಗಳನ್ನು ಬಿತ್ತನೆ ಮಾಡಬಹುದು" ಎನ್ನುತ್ತಾರೆ. 1 ಎಕರೆ ಎಲೆಕೋಸು ಕೃಷಿಗೆ ರೂ.50 ಸಾವಿರ ಖರ್ಚು ತಗುಲುತ್ತದೆ. ಧಾರಣೆ ಕೆ.ಜಿಗೆ ರೂ.10 ದೊರಕಿದರೂ ಒಂದುವರೆ ಲಕ್ಷದವರೆಗೂ ನಾವು ಆದಾಯ ಪಡೆಯಬಹುದು ಎಂದು ಹೇಳುತ್ತಾರೆ. ಹಂತ ಹಂತವಾಗಿ ಹೂಗಳು ಕೊಯ್ಲಿಗೆ ಬರುವುದರಿಂದ ಹಾಗೂ ಮಾರುಕಟ್ಟೆಗೆ ತಾಜಾ ಸ್ಥಿತಿಯಲ್ಲಿಯೇ ಹೂಕೋಸು ಕಳಿಸಬೇಕಾಗಿರುವುದರಿಂದಲೇ ಪತಿ ದಿನ ಸಾಯಂಕಾಲವೇ ಬಲಿತ ಹೂಗಳನ್ನು ಕೊಯ್ಲು ಮಾಡುತ್ತಾರೆ.

**ಅರಿಷಿಣ ಬೆಳೆಯಲ್ಲಿ ಎತ್ತಿದ ಕೈ:**

ಮಹಾಂತೇಶ ಪ್ರತಿ ವರ್ಷ ಗುಣಮಟ್ಟದ ಅರಿಷಿಣ ಬೆಳೆ ಬೆಳೆದು ಇತರರಿಗೆ ಮಾದರಿಯಾಗಿದ್ದಾರೆ. ಕೆಂಪು ಹಾಗೂ ಕಪ್ಪು ಮಣ್ಣಿನ ಭೂಮಿ ಇರುವುದರಿಂದ ಅರಿಷಿಣ ಬೆಳೆಗೆ ಇದು ಹೆಚ್ಚು ಸೂಕ್ತವಾಗಿದೆ. ಈಗಾಗಲೆ ಒಂದು ಅವಧಿಯ ಫಸಲು ಮಾರುಕಟ್ಟೆಗೆ ಹೋಗಿದ್ದು, ಸದ್ಯ ಮತ್ತೊಂದು ಅವಧಿಯ ಐದು ತಿಂಗಳ ಬೆಳೆ ನಳನಳಿಸುತ್ತಿದೆ. ಬೆಳೆಗೆ ರಸಗೊಬ್ಬರ ಸೇರಿದಂತೆ ಇತರೇ ಖರ್ಚು ವ್ಯಯಿಸಲು ತೋಟಗಾರಿಕೆ ಇಲಾಖೆಯಿಂದ ನೆರವು ಪಡೆದಿದ್ದಾರೆ. ಇದಕ್ಕೂ ತುಂತುರು ಹನಿ ನೀರಾವರಿ ಅಳವಡಿಸಿಕೊಂಡಿದ್ದಾರೆ.

ಹೀಗೆ ಸಂಸ್ಕರಿಸಿದ ಅರಿಷಿಣವನ್ನು ಅವರು ತಮಿಳುನಾಡು, ಮಧ್ಯಪ್ರದೇಶ ಮತ್ತು ತೆಲಂಗಾಣ ರಾಜ್ಯದ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ. ಈ ಹಿಂದಿನ ಬೆಳೆ ಒಂದು ಗಿಡದಿಂದ ಅರ್ಧ ಕೆಜಿ ಅರಿಷಿಣ ಇಳುವರಿ ಬಂದಿದ್ದು ಎಕರೆಗೆ ಸರಸಾರಿ 45 ಕ್ವಿಂಟಾಲ್ ಇಳುವರಿ ಪಡೆದಿದ್ದಾರೆ. ಕ್ವಿಂಟಾಲ್‌ಗೆ 7500 ರೂ. ದರ ಅವರಿಗೆ ಸಿಕ್ಕಿದೆ. ಹೆಚ್ಚು ಕಡಿಮೆ 1 ಎಕರೆಗೆ ಅಂದಾಜು 2 ಲಕ್ಷ ರೂ. ಆದಾಯ ದೊರಕುತ್ತದೆ. ಈ ಬಾರಿ ಪ್ರತಿ ಗಿಡಕ್ಕೆ 1 ಕೆಜಿ ಅರಿಷಿಣ ಇಳುವರಿ ತೆಗೆಯುವ ಉದ್ದೇಶ ಅವರದ್ದಾಗಿದೆ.

**ದೊಡ್ಡಬೆಳೆಗಿಂತ ಸಣ್ಣ ಬೆಳೆ ಲೇಸು:**

"ದೊಡ್ಡ ಬೆಳೆ ಹಾಕಿದ್ರೆ ಬೀಜ ಗೊಬ್ಬರಕ್ಕಾಗಿ ಸಾವಿರಾರು ರೂಪಾಯಿ ವ್ಯಯಿಸಬೇಕು, ಬೆಳೆಗಳಿಗೆ ಕಾಡುವ ಹತ್ತಾರು ರೋಗಗಳ ನಿಯಂತ್ರಣಕ್ಕೆ ನೂರಾರು ರೂಪಾಯಿ ಖರ್ಚು ಮಾಡಿ ಕ್ರಿಮಿನಾಶಕ ಸಿಂಪಡಿಸಬೇಕು. ಹೀಗೆ ಏನೇ ಖರ್ಚು ಮಾಡಿ ಕೊನೆಗೆ ಕೈಗೆ ಫಸಲು ದಕ್ಕುತ್ತೈತಿ ಅನ್ನೊಹೊತ್ನಾಗ ಕೃಷಿ ಮಾರುಕಟ್ಟೆಯಲ್ಲಿ ಬೆಲೆ ಇಳಿಮುಖವಾಗಿರತ್ತೈತಿ, ಅಲ್ಲ ಅದರಾಗ ದಲ್ಲಾಳಿಗಳ ಮೋಸ ಬ್ಯಾರೆ ನಡೀತೈತಿ, ಈ ಎಲ್ಲ ಕಾರಣಗಳಿಂದ ವಾರಕ್ಕೊಮ್ಮೆ ಆದಾಯ ತರುವ ಲಾಭದ ತರಕಾರಿಗಿಂತ ಅದ್ಯಾವ ಬೆಳಿ ಹೆಚ್ಚು ಲಾಭರ್ರಿ' ಎಂದು ಕೇಳುತ್ತಾರೆ. ಕೆಲವೊಂದು ಸಮಯದಲ್ಲಿ ಉಳ್ಳಾಗಡ್ಡಿ ಕೆಜಿಗೆ ನಾಲ್ಕು ರೂಪಾಯಿಗೆ ಇಳಿದಿದ್ದರೆ ಟೊಮ್ಯಾಟೊ ನಲ್ವತ್ತು ರೂಪಾಯಿಗೆ ಏರಿರುತ್ತೆ. ಸೌತಿಕಾಯಿ ನಾಲ್ಕು ರೂಪಾಯಿಗೆ ಕೆಜಿ ಆಗಿದ್ದರೆ ಚವಳಿಕಾಯಿ ಇಪ್ಪತ್ತು ರೂಪಾಯಿ ಆಗಿರುತ್ತೆ. ಒಂದರ ಬೆಲೆ ಕಡಿಮೆ ಆದಾಗ ಇನ್ನೊಂದರ ಬೆಲೆ ಗಗನಕ್ಕೆ ಹೋಗಿರತ್ತೆ. ಈ ಕಾರಣದಿಂದ ರೈತರು ನಾಲ್ಕಾರು ನಮೂನೆಯ ತರಕಾರಿ ಬೆಳೆದರೆ ಒಂದಕ್ಕೆ ಬೆಲೆ ದಕ್ಕದಿದ್ರೂ ಮತ್ತೊಂದಕ್ಕೆ ಬೆಲೆ ಗ್ಯಾರಂಟಿ ಎಂಬುದು ಇವರ ಅನುಭವದ ಮಾತು.

**ಹೊಸ ವಿಧಾನದಲ್ಲಿ ಕಬ್ಬು ಬೆಳೆಗೆ ಮುಂದಾದರು:**

ಈ ಬಾರಿ ಜಮೀನಿನ ಸತ್ವ ಸಮತೋಲನಕ್ಕಾಗಿ ತರಕಾರಿ ಬೆಳೆಯ ಅರ್ಧ ಪ್ರದೇಶದಲ್ಲಿ ಕಬ್ಬು ನಾಟಿ ಮಾಡಿದ್ದಾರೆ. ಆರೋಗ್ಯಯುತ ಕಬ್ಬಿನ ಕಣ್ಣುಗಳನ್ನು ಬಳಸಿ ನಾಟಿ ಮಾಡಿ ಸುಸ್ಥಿರ ಬೇಸಾಯ ಅನುಸರಿಸಿದ್ದಾರೆ. 2-3 ಎಕರೆಯಲ್ಲಿ ನಾಟಿ ಪೂರ್ವ ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ ಕಾಂಪೋಸ್ಟ್ ಹಾಗೂ ಕೊಟ್ಟಿಗೆ ಗೊಬ್ಬರ ಸೇರಿಸಿದ್ದಾರೆ. ಸಾಲಿನಿಂದ ಸಾಲಿಗೆ ನಾಲ್ಕು ಅಡಿ ಹಾಗೂ ಸಸಿಯಿಂದ ಸಸಿಗೆ ಒಂದುವರೆ ಅಡಿ ಅಂತರದಲ್ಲಿ ಕಬ್ಬಿನ ಸಸಿಗಳನ್ನು ನಾಟಿ ಮಾಡಿದ್ದಾರೆ. ನಂತರ ಕಬ್ಬಿಗೆ ಸುಳಿ ಬೀಳದಂತೆ ಬೆಳೆಗೆ ಕ್ರಿಮಿನಾಶಕದ ಜೊತೆಗೆ ಪೋಷಕಾಂಶ ಸಿಂಪಡಣೆ ಮಾಡಿದ್ದರಿಂದ ಕಾಂಡ ದಪ್ಪಗಾಗಲು ಕಾರಣವಾಗಿದೆ. ಬರೀ ಮಣ್ಣಾದರೆ ನೀರನ್ನು ಹಿಡಿದಿಟ್ಟುಕೊಳ್ಳದೇ ಆರಿಹೋಗಬಹುದು ಎಂಬ ಕಾರಣದಿಂದ ಕೃಷಿತ್ಯಾಜ್ಯಗಳಿಂದ ಮುಚ್ಚಿಗೆಯನ್ನು ಮಾಡಿದೆವು, ಇದರಿಂದ ನೀರಿನ ಧಾರಣಶಕ್ತಿಯು ಹೆಚ್ಚಿ ಸದಾ ತೇವಾಂಶ ಉಳಿದು ಕಬ್ಬಿನ ಬೆಳವಣಿಗೆಯ ವೇಗವೂ ಹೆಚ್ಚಿತು ಎಂದು ಮಹಾಂತೇಶ ಹೇಳುತ್ತಾರೆ.

ಸಾಮಾನ್ಯ ಕಬ್ಬಿನ ಕೃಷಿಯಲ್ಲಾದರೆ ಪ್ರತಿ ಬುಡದಲ್ಲಿ 10-15 ಕಂದುಗಳು ಬೆಳೆಯುತ್ತಿದ್ದವು. ಈ ಮಾದರಿಯಲ್ಲಿ ಪ್ರತಿ ಬುಡದಲ್ಲಿ 20-25 ಕಂದುಗಳು ಬೆಳೆದಿವೆ ಹಾಗೂ ಸುಮಾರು 14ರಿಂದ16 ಅಡಿವರೆಗೂ ಕಬ್ಬಿನ ಬೆಳವಣಿಗೆಯಾಗಿದೆ ಎಂದು ಹೇಳಿದರು. ಕಬ್ಬಿನ ಸಾಲಿನ ನಡುವೆ ನಾಲ್ಕು ಅಡಿ ಅಂತರವಿರುವ ಸ್ಥಳದಲ್ಲೂ ತರಕಾರಿ ಕೃಷಿ ಮಾಡಿದ್ದಾರೆ. ಸುಸ್ಥಿರ ಮಾದರಿಯಲ್ಲಿ ಬೆಳೆದ ಈ ಕಬ್ಬಿನ ಕಂದುಗಳ ಸಂಖ್ಯೆ ಜಾಸ್ತಿ ಬಂದಿವೆ. ಪ್ರತಿ ಒಂದು ಎಕರೆಗೆ 60 ಟನ್ ಇಳುವರಿಯ ನಿರೀಕ್ಷೆ ಇದೆ. ಟನ್‌ಗೆ 2,750 ರಂತೆ ಸಕ್ಕರೆ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಮಹಾಂತೇಶ್ ಅವರ ಸಂಪರ್ಕಕ್ಕಾಗಿ - 9164941877


Downloaded From:www.kpscvaani.com



# ಕೆಂಪು ಭೂಮಿಯಲ್ಲಿ ಕೊನರಿದ ಸೇಬು

**ಸಮಶೀತೋಷ್ಣ ವಲಯದಲ್ಲಿ ಬೆಳೆಯಲಾಗುವ ಕಾಶ್ಮೀರಿ ಸೇಬನ್ನು ಬೀದರ್‌ನ ಕೆಂಪು ಭೂಮಿಯಲ್ಲೂ ಬೆಳೆಯಬಹುದು ಎಂಬುದನ್ನು ತೋರಿಸಿಕೊಟ್ಟ ರೈತ.**

ಜಿ. ಚಂದ್ರಕಾಂತ

ಗುಲಾಬಿ ಕುಟುಂಬದಲ್ಲಿನ (ರೋಸೇಸೀ) ಮೇಲಸ್ ಡೊಮೆಸ್ಟಿಕಾಕ್ಕೆ ಸೇರಿದ ಮತ್ತು ಸಮಶೀತೋಷ್ಣ ವಲಯದ ಕಾಶ್ಮೀರಿ ಕೆಂಪು ಚೆಲುವೆಯ ಸೇಬು ಹಣ್ಣು ಬೀದರ ಜಿಲ್ಲೆಯಲ್ಲಿಯೂ ಕೊನರಬಹುದೆಂದು ಯಾರೂ ಊಹಿಸಿರಲಿಲ್ಲ. ಇಲ್ಲಿನ ಹವಾಗುಣಕ್ಕೆ ಈ ಬೆಳೆ ಹೊಂದಿಕೊಳ್ಳುವುದಿಲ್ಲವೆಂದೇ ಬಹಳಷ್ಟು ಜನ ಭಾವಿಸಿದ್ದರು. ಆದರೆ ಸೇಬು ಹಣ್ಣನ್ನು ನಮ್ಮ ನೆಲದಲ್ಲಿಯೂ ಬೆಳೆಯಬಹುದೆಂದು ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಘಾಟಬೋರಳ ಗ್ರಾಮದ ಅಪ್ಪಾರಾವ ದಿಗಂಬರರಾವ ಭೋಸಲೆ ಅವರು ತೋರಿಸಿಕೊಟ್ಟು ಜಿಲ್ಲೆಯ ಇತರ ರೈತರಿಗೆ ಮಾದರಿಯಾಗಿದ್ದಾರೆ.

ಬಡ ಕೃಷಿಕ ಕುಟುಂಬದಲ್ಲಿ ಹುಟ್ಟಿದ 51 ವರ್ಷ ವಯಸ್ಸಿನ ಅಪ್ಪಾರಾವ ಓದಿದ್ದು ಕೇವಲ ಏಳನೆಯ ತರಗತಿ. ಕಡು ಬಡತನದಿಂದಾಗಿ ಶಿಕ್ಷಣವನ್ನು ಮೊಟಕುಗೊಳಿಸಿ ಕೃಷಿಕಾರ್ಯದಲ್ಲಿ ತೊಡಗಿಸಿಕೊಂಡರು. ಇವರಿಗಿರುವ ಏಳು ಎಕರೆ ಭೂಮಿಯಲ್ಲಿ ಮೊದಲು ಹೀರೇಕಾಯಿ, ಕುಂಬಳಕಾಯಿ, ಜೋಳ, ತೊಗರಿ ಮುಂತಾದ ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಯುತ್ತಿದ್ದರು.

ಭೋಸಲೆ 1992ರಲ್ಲಿ ಪಂಜಾಬ್, ಹರಿಯಾಣಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ಬೆಂಗಳೂರು, ಮೈಸೂರು ಮುಂತಾದೆಡೆ ಪ್ರಯಾಣ ಮಾಡಿ ಸೇಬು ಮತ್ತಿತರ



Downloaded From:www.kpscvaani.com

ತೋಟಗಾರಿಕೆ ಬೆಳೆಗಳ ಮಾಹಿತಿ ಸಂಗ್ರಹಿಸಿದರು. ಸದಾ ಕೃಷಿಯಲ್ಲಿ ಪ್ರಯೋಗಶೀಲತೆ ಮತ್ತು ಹೊಸತನ ಕಂಡುಕೊಳ್ಳುವ ಛಲ, ಬದ್ಧತೆ, ದೃಢವಿಶ್ವಾಸದೊಂದಿಗೆ ಒಂದು ಎಕರೆ ಕೆಂಪು ಮತ್ತು ಬರಡು ಭೂಮಿಯಲ್ಲಿ ಹಿಮಾಚಲ ಪ್ರದೇಶದ ಸಿಮ್ಲಾ ಹೆಚ್‌ಆರ್‌ಎಂಎನ್–99(ಹರಿಮನ್) ತಳಿಯ ಸೇಬು ಹಣ್ಣನ್ನು ಬೆಳೆದು ಯಶಸ್ವಿಯಾಗಿದ್ದಾರೆ.

ಸೇಬಿನ ಸಸಿಗಳ ನಾಟಿಗಾಗಿ ಜೆಸಿಬಿಯಿಂದ 11 ದಿನ 4 x 5 ಅಡಿ ಆಳದ ನಾಲೆ ತೆಗೆದು 8 ಟ್ರ್ಯಾಕ್ಟರ್ ಕೊಟ್ಟಿಗೆ ಗೊಬ್ಬರ ಹಾಕಿ ಮಣ್ಣಿನಿಂದ ಮುಚ್ಚಿ, 100 ಚೀಲ ಕೋಕೋವಿಟ್ ಗೊಬ್ಬರ ಮತ್ತು ಕೋನಿಕಾ ಔಷಧ ಸಿಂಪಡಿಸಿದರು. ಎಂಟು ದಿನಗಳ ಬಳಿಕ ಹಿಮಾಚಲ ಪ್ರದೇಶದ ರೂಪೇಶ ಸುನವಾನೆಯವರಿಂದ ಪ್ರತಿ ಸಸಿಯನ್ನು 210ರೂ. ದಂತೆ ಖರೀದಿಸಿದ 222 ಸೇಬು ಸಸಿಗಳನ್ನು 2021ರ ನವೆಂಬರಿನಲ್ಲಿ ಗಿಡದಿಂದ ಗಿಡಕ್ಕೆ 14 x 14 ಅಡಿ ಮತ್ತು ಸಾಲಿನಿಂದ ಸಾಲಿಗೆ 14 x 14 ಅಡಿ ಅಂತರದಲ್ಲಿ ನಾಟಿ ಮಾಡಿದ್ದಾರೆ. ಸಸಿಗಳ ಸಾಗಾಣಿಕೆಗಾಗಿ 9000 ರೂ. ನೀಡಿದ್ದಾರೆ.

ಎರಡು ತೆರೆದ ಬಾವಿಗಳಿಂದ ಹನಿ ನೀರಾವರಿ ಅಳವಡಿಸಿಕೊಂಡಿದ್ದು, ಈ ಹಿಂದೆ ಹೂವಿನ ಬೇಸಾಯಕ್ಕೆ ತೋಟಗಾರಿಕೆ ಇಲಾಖೆಯಿಂದ ಹನಿ ನೀರಾವರಿಗಾಗಿ ಸಹಾಯಧನ ಪಡೆದಿದ್ದರು. ಸೇಬಿನ ಸಸಿಗಳಿಗೆ ತಂಪು ವಾತಾವರಣ ಕಲ್ಪಿಸಲು ಅನುವಾಗುವಂತೆ ಮಿಶ್ರಬೆಳೆಯಾಗಿ ಗಂಗಾ ತಳಿಯ ತೆಂಗನ್ನೂ ಬೆಳೆದಿದ್ದಾರೆ. ಇಪ್ಪತ್ತು ದಿನಕ್ಕೊಮ್ಮೆ ಕಾಲುವೆಯ ಮೂಲಕ ಮತ್ತು ಪ್ರತಿದಿನ ಒಂದು ಗಂಟೆ ಹನಿ ನೀರಾವರಿ ಮೂಲಕ ನೀರುಣಿಸುವರು. ಪತ್ನಿ ಕಸ್ತೂರಬಾಯಿ, ಐದಾರು ಆಳುಗಳ ಸಹಾಯದಿಂದ ಕೃಷಿಕಾರ್ಯದಲ್ಲಿ ತೊಡಗಿದ್ದು, ಐದು ಹೈನು ದನಗಳ ಸಾಕಣೆಯಿಂದ ಹಾಲನ್ನು ಪಡೆಯುತ್ತಿದ್ದಾರಲ್ಲದೆ ಇವುಗಳ ತ್ಯಾಜ್ಯದಿಂದ ಜೀವಾಮೃತವನ್ನು ತಯಾರಿಸಿ ಸೇಬಿಗೆ 20 ದಿನಕ್ಕೊಮ್ಮೆ ಸಿಂಪಡಿಸುತ್ತಿರುವುದರಿಂದ ಸೇಬಿಗೆ ರೋಗಗಳ ಬಾಧೆ ಕಡಿಮೆ.

ನಾಟಿ ಮಾಡಿದ 11 ತಿಂಗಳಿಗೇ ಸಸಿಗಳ ಟ್ರಿಮ್ ಮಾಡಿದ್ದು, ಡಿಸೆಂಬರಿನಲ್ಲಿ ಹೂಬಿಟ್ಟು ಈಗ ಪ್ರತಿ ಗಿಡದಲ್ಲಿ 20–25 ಹಣ್ಣುಗಳು ಬಿಟ್ಟು ಪಕ್ವವಾಗುತ್ತಿವೆ. ಇಲ್ಲಿನ ಹವಾಗುಣಕ್ಕನುಗುಣವಾಗಿ 15 ತಿಂಗಳ ಸೇಬಿನ ಗಿಡಗಳು ಪೂರಕವಾಗಿ ಮತ್ತು ಸಮೃದ್ಧವಾಗಿ ಏಳೆಂಟು ಅಡಿ ಎತ್ತರ ಬೆಳೆದು ನಳನಳಿಸುತ್ತಿವೆ. ಈವರೆಗೆ ಸೇಬಿನ ಬೇಸಾಯಕ್ಕಾಗಿ ಒಟ್ಟು 5.50 ಲಕ್ಷ ರೂ. ವೆಚ್ಚವಾಗಿದ್ದು, 7–8 ಲಕ್ಷ ರೂ. ಆದಾಯ ನಿರೀಕ್ಷಿಸಿದ್ದಾರೆ.



"ಈಗ ನೆಮ್ಮದಿಯ ಬದುಕು ರೂಪುಗೊಂಡಿದ್ದು, ಕುಟುಂಬದಲ್ಲಿ ಸಂತೋಷ ಹರಿದಾಡುತ್ತಿದೆ. ಹಿಮಾಲಯ ಪರ್ವತದ ತಪ್ಪಲು ಪ್ರದೇಶದಲ್ಲಿ ಸೇಬು ವರ್ಷಕ್ಕೊಮ್ಮೆ ಬಂದರೆ ನಾವು ಬೆಳೆದ ಸೇಬು ಇಲ್ಲಿನ ವಾತಾವರಣದಲ್ಲಿ ವರ್ಷಕ್ಕೆರಡು ಸಲ ಅಂದರೆ ಡಿಸೆಂಬರ್ ಮತ್ತು ಮೇ ತಿಂಗಳಲ್ಲಿ ಇಳುವರಿ ಕೊಡುವುದು ವಿಶೇಷ. ಹಿತಮಿತ ನೀರು, ಸಾವಯವ ಗೊಬ್ಬರ, ಜೀವಾಮೃತದಿಂದ ಸೇಬು ಗಿಡಗಳನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ಗಿಡಗಳ ಜೀವಿತಾವಧಿ ಸುಮಾರು 25 ವರ್ಷವಿರುತ್ತದೆ. ಸೇಬು ಕೃಷಿಯನ್ನು ಸವಾಲಾಗಿ ಸ್ವೀಕರಿಸಿ ಕೇವಲ 15 ತಿಂಗಳಲ್ಲೇ ಇಳುವರಿ ಪಡೆಯಲಾದ ಸೇಬು ಹೆಚ್ಚು ರುಚಿಕರವಾಗಿದ್ದು, ಹಣ್ಣಿನ ಗಾತ್ರ, ಆಕಾರ, ಬಣ್ಣ ಅತ್ಯಾಕರ್ಷಕವಾಗಿದೆ. ಈ ಸಲ ಹಣ್ಣು ಮಾರಾಟದ ಬಗ್ಗೆ ಯೋಚಿಸಿಲ್ಲ. ಮುಂದಿನ ಬೆಳೆ ಬಂದಾಗ ಹಣ್ಣು ಮಾರಾಟಕ್ಕೆ ಯೋಚಿಸುವೆ. ಸೇಬು ಬೆಳೆಯನ್ನು ಗಾಳಿಮಳೆಯಿಂದ ಮತ್ತು ಜಾನುವಾರುಗಳಿಂದ ಸಂರಕ್ಷಿಸಲು ಪಾಲಿಹೌಸ್ ನಿರ್ಮಿಸಲು ಮತ್ತು ಹೊಲದ ಸುತ್ತ ತಂತಿಬೇಲಿ ಅಳವಡಿಸಲು ಯೋಜಿಸಲಾಗಿದೆ" ಎನ್ನುತ್ತಾರೆ ಅಪ್ಪಾರಾವ ಭೋಸಲೆ.



### ಹನ್ನೆರಡು ಲಕ್ಷಕ್ಕೂ ಹೆಚ್ಚು ಆದಾಯ

ಅಪ್ಪಾರಾವ 2018ರಿಂದ ಗುಜರಾತಿನ 500 ವಿಶೇಷ ಸಪೋಟಾ ಗಿಡಗಳಿಂದ ವರ್ಷಕ್ಕೆ ಮೂರು ಬಾರಿಯಂತೆ ಇಳುವರಿ ಪಡೆದು ವಾರ್ಷಿಕವಾಗಿ ಸುಮಾರು 12 ಲಕ್ಷ ರೂ. ಆದಾಯವನ್ನು ಮತ್ತು ಗಂಗಾ ತಳಿಯ ತೆಂಗು ವಿವಿಧ ತಳಿಯ ಮಾವು, ನಾಗಪುರ ಕಿತ್ತಳೆ, ಅಂಜೂರ, ನೇರಳೆ, ಲಿಂಬೆ ಮತ್ತು ಗಜಲಿಂಬೆ, ಗೋಡಂಬಿ ಗಿಡಗಳನ್ನು ಸಹ ಬೆಳೆದು ಲಾಭ ಪಡೆಯುತ್ತಿದ್ದಾರೆ.

"ಸಾಂಪ್ರದಾಯಿಕವಾಗಿ ಸೇಬು ಬೆಳೆಯಲು ಬೇಸಿಗೆಯಲ್ಲಿ 21 ರಿಂದ 24 ಡಿಗ್ರಿ ಸೆಲ್ಸಿಯಸ್ ತಾಪಮಾನವಿರಬೇಕು. ಬೀದರ ಜಿಲ್ಲೆಯ ಬೇಸಿಗೆ ತಾಪಮಾನ 35 ರಿಂದ 40 ಡಿಗ್ರಿ ಸೆಲ್ಸಿಯಸ್ ಇರುವುದರಿಂದ ಸೇಬು ಬೆಳೆಯಲು ಜಿಲ್ಲೆಯ ಹವಾಗುಣ ಸೂಕ್ತವಲ್ಲ. ಆದರೂ ಕೆಲವು ರೈತರು ಸ್ವ–ಇಚ್ಛೆಯಿಂದ ಹೆಚ್‌ಆರ್‌ಎಂಎನ್–99 ತಳಿಯ ಸೇಬು ಬೆಳೆಯಲು ಪ್ರಯತ್ನಿಸುತ್ತಿದ್ದಾರೆ. ಇವರಲ್ಲಿ ಸೇಬು ಕೃಷಿಯ ವಿಧಾನಗಳನ್ನು ಸರಿಯಾಗಿ ಅಳವಡಿಸಿಕೊಂಡ ಅಪ್ಪಾರಾವ ಭೋಸಲೆ ಸೇಬನ್ನು ಯಶಸ್ವಿಯಾಗಿ ಬೆಳೆದಿದ್ದಾರೆ" ಎಂಬುದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ವಿಶ್ವನಾಥ ಝಿಳ್ಳೆ ಮತ್ತು ಹಿರಿಯ ಸಹಾಯಕ ನಿರ್ದೇಶಕರಾದ ಮಾರುತಿ ಅವರ ಅಭಿಪ್ರಾಯ.

ಅಪ್ಪಾರಾವ ಭೋಸಲೆ ಅವರನ್ನು ಸಂಪರ್ಕಿಸಲು ಬಯಸುವವರು ಅವರ ಮೊಬೈಲ್ ನಂಬರ್ 9535812365 ಮೂಲಕ ಸಂಪರ್ಕಿಸಬಹುದು.



Downloaded From:www.kpscvaani.com





# ಹ್ಯಾಂಡಲೂಮ್ ಪ್ರವಾಸೋದ್ಯಮದತ್ತ ಬಾಗಲಕೋಟೆ

**ನೇಕಾರಿಕೆಯ ಉತ್ಪನ್ನಗಳ ಪ್ರಚಾರಕ್ಕಾಗಿ ಬಾಗಲಕೋಟೆ ಜಿಲ್ಲಾಡಳಿತವು ವಿನೂತನ ಮಾದರಿಯನ್ನು ಹಮ್ಮಿಕೊಂಡಿದೆ.**

ಮುತ್ತು ಹಳ್ಳದ

ಬಾಗಲಕೋಟೆ ಜಿಲ್ಲೆಯಲ್ಲಿರುವ ತಾಲೂಕಾ ಕೇಂದ್ರಗಳು ಐತಿಹಾಸಿಕ ಕೇಂದ್ರಗಳಾಗಿದ್ದರಿಂದ ದೇಶ ವಿದೇಶದಿಂದ ಪ್ರವಾಸಿಗರು ಬರುತ್ತಿದ್ದು, ಜಿಲ್ಲೆಯ ಪ್ರವಾಸೋದ್ಯಮವನ್ನು ವಿನೂತನ ಮಾದರಿಯಲ್ಲಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಬಾಗಲಕೋಟೆ ಜಿಲ್ಲಾಡಳಿತ ಹ್ಯಾಂಡಲೂಮ್ ಪ್ರವಾಸೋದ್ಯಮ ಚಟುವಟಿಕೆಗಳನ್ನು ಆರಂಭಿಸಿದೆ.

ಬಾಗಲಕೋಟೆ ಜಿಲ್ಲೆಯು ವಿಶ್ವವಿಖ್ಯಾತ ಬಾದಾಮಿಯ ಗುಹಾಂತರ ದೇವಾಲಯಗಳು, ವಿಶ್ವಪರಂಪರೆ ತಾಣ ಪಟ್ಟದಕಲ್ಲು, ದೇವಾಲಯಗಳ ತೊಟ್ಟಿಲು ಎಂದೇ ಹೆಸರಾದ ಐಹೊಳೆಯಂತಹ ಐತಿಹಾಸಿಕ ಪ್ರವಾಸಿತಾಣಗಳಿಗೆ, ಜಗಜ್ಯೋತಿ ಅಣ್ಣ ಬಸವಣ್ಣನವರ ಐಕ್ಯಮಂಟಪ ಹೊಂದಿರುವ ಕೂಡಲಸಂಗಮ, ಶಕ್ತಿ ಪೀಠವಾಗಿರುವ ಬನಶಂಕರಿಯ ದೇವಾಲಯಗಳಂತಹ ಧಾರ್ಮಿಕ ಪ್ರವಾಸಿ ತಾಣಗಳಿಗೆ ಚಿರಪರಿಚಿತವಾಗಿದೆ. ಈ ತಾಣಗಳಿಂದಾಗಿ ಜಿಲ್ಲೆಯಲ್ಲಿ ಐತಿಹಾಸಿಕ ಪ್ರವಾಸೋದ್ಯಮ, ಧಾರ್ಮಿಕ ಪ್ರವಾಸೋದ್ಯಮ ಮಾದರಿಯ ಚಟುವಟಿಕೆಗಳು ಪ್ರಸಿದ್ಧವಾಗಿವೆ.

ಭೌಗೋಳಿಕ ಸೂಚ್ಯಂಕ ಮಾನ್ಯತೆ ಪಡೆದ ಜಿಲ್ಲೆಯ ಇಲಕಲ್ ಸೀರೆ ಮತ್ತು ಗುಳೇದಗುಡ್ಡ ಖಣ ಉತ್ಪನ್ನಗಳ ಕೈಮಗ್ಗ ನೇಕಾರಿಕೆಯ ಪ್ರೋತ್ಸಾಹ ಹಾಗೂ ಪ್ರಚಾರ ಕಾರ್ಯದಿಂದಾಗಿ ಪ್ರಸ್ತುತ ಜಿಲ್ಲೆಯಲ್ಲಿ ನೂತನವಾಗಿ ಹ್ಯಾಂಡಲೂಮ್ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶವನ್ನು ಒದಗಿಸಿದೆ. ಇದರ ಪರಿಣಾಮ ಆಯೋಜನೆಗೊಂಡ ಕಾರ್ಯಕ್ರಮವೇ ಹ್ಯಾಂಡಲೂಮ್ ಟೂರಿಜಂ. ಇದರಿಂದ ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರು ವಿವಿಧ ಮಾದರಿಯ ಪ್ರವಾಸದ ಅನುಭವಗಳನ್ನು ಪಡೆಯಬಹುದಾಗಿದೆ. ಹೀಗಾಗಿ ಕರ್ನಾಟಕ ಸರ್ಕಾರ ಪ್ರವಾಸೋದ್ಯಮ ಇಲಾಖೆಯ **'ಒಂದು ರಾಜ್ಯ, ಹಲವು ಜಗತ್ತುಗಳು'** ಎಂಬ ಧ್ಯೇಯವಾಕ್ಯಕ್ಕೆ ಜಿಲ್ಲೆಯ ಪ್ರವಾಸೋದ್ಯಮವು ಅನುಗುಣವಾಗಿದೆ.

ಜಿ.ಐ ಮಾನ್ಯತೆ ಪಡೆದ ಜಿಲ್ಲೆಯ



Downloaded From:www.kpscvaani.com



ನೇಕಾರಿಕೆ ಉತ್ಪನ್ನಗಳನ್ನು ದೇಶಿಯ ಮತ್ತು ವಿದೇಶೀಯ ಪ್ರವಾಸಿಗರಿಗೆ ಮಾಹಿತಿ ನೀಡಲು ಕೈಮಗ್ಗ ನೇಕಾರರ ಮತ್ತು ಪ್ರವಾಸಿಮಾರ್ಗದರ್ಶಿಗಳ ಪಾತ್ರ ಅತಿ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಪರವಾನಿಗೆ ಪಡೆದು ಪ್ರವಾಸಿ ಸ್ಥಳಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಪ್ರವಾಸಿ ಮಾರ್ಗದರ್ಶಿಗಳಿಗೆ ನಬಾರ್ಡ್‌ನ ಹಣಕಾಸಿನ ನೆರವಿನಿಂದ ಇಲಕಲ್ ಸೀರೆ ಮತ್ತು ಗುಳೇದಗುಡ್ಡ ಖಣ ಕೈಮಗ್ಗ ನೇಕಾರಿಕೆಯ ವಿವಿಧ ಹಂತಗಳ ಬಗ್ಗೆ ಪ್ರವಾಸಿಗರಿಗೆ ವಿವರಿಸಲು ಅನುಕೂಲವಾಗುವಂತೆ ತರಬೇತಿಯನ್ನು ನೀಡಲಾಗಿದೆ.

ಈಗಾಗಲೇ ಆಯೋಜಿಸಿದ ಹ್ಯಾಂಡಲೂಮ್ ಪ್ರವಾಸ ಕಾರ್ಯಕ್ರಮದಲ್ಲಿ ಪ್ರವಾಸಿಗರು ನೇರವಾಗಿ ಕೈಮಗ್ಗ ನೇಕಾರಿಕೆ ಮಾಡುವ ಮನೆಗಳಿಗೆ ಭೇಟಿ ನೀಡಿ, ಕೈಮಗ್ಗದ ಮೂಲಕ ಸೀರೆ ಮತ್ತು ಖಣ ತಯಾರಿಕೆ ಹಂತಗಳನ್ನು ತಿಳಿಯಲು ಅವಕಾಶವನ್ನು ಮಾಡಿಕೊಡಲಾಗಿದೆ. ಕೈಮಗ್ಗ ಸೀರೆ ಮತ್ತು ಖಣ ನೇಕಾರಿಕೆಯ ಮಾಹಿತಿಯನ್ನು ಪಡೆದ ಪ್ರವಾಸಿಗರು ತಮ್ಮ ಅನುಭವದಲ್ಲಿ, ಇದೊಂದು ವಿನೂತನ ಪ್ರವಾಸ ಕಾರ್ಯಕ್ರಮವಾಗಿದ್ದು, ಇದರಿಂದ ಸೀರೆ ಮತ್ತು ಖಣ ನೇಕಾರಿಕೆಯ ಸಂಪೂರ್ಣ ಮಾಹಿತಿಯನ್ನು ಪಡೆಯುವ ಜೊತೆಗೆ ಸೀರೆ ಉತ್ಪಾದನೆಯ ಹಿಂದಿರುವ ಪರಿಶ್ರಮ, ಸಿದ್ಧವಾಗಲು ತಗುಲುವ ಕಾಲಾವಧಿಯ ಹಾಗೂ ವಿವಿಧ ವಿನ್ಯಾಸಗಳ ಚಿತ್ರಣವನ್ನು ಪಡೆಯಲು ಸಾಧ್ಯವಾಗಿದೆ ಎನ್ನುತ್ತಾರೆ.



**ಗ್ರಾಮೀಣ ಸೊಗಡಿನ ಅನುಭವ:**

ಜಿಲ್ಲೆಗೆ ಆಗಮಿಸುವ ಪ್ರವಾಸಿಗರಿಗೆ ಗ್ರಾಮೀಣ ಸೊಗಡಿನ ಅನುಭವ ಮೂಡಿಸಲು ಮೊದಲಿಗೆ ಪ್ರವಾಸಿಗರಿಗೆ ದೀಪದಾರತಿ ಮಾಡಿ, ಹೂವಿನಹಾರ ಹಾಕಿ, ಹಲಗಿ ಮಜಲುಗಳೊಂದಿಗೆ ಸಾಂಪ್ರದಾಯಿಕ ಶೈಲಿಯಲ್ಲಿ ಸ್ವಾಗತಿಸಲಾಗುತ್ತಿದೆ. ಪ್ರವಾಸಿಗರಿಗೆ ವಿನೂತನ ಅನುಭವವನ್ನು ನೀಡುವ ಸಲುವಾಗಿ ನೇಕಾರಿಕೆ ಮಾಡುವ ಮನೆಗಳಿಗೆ ಎತ್ತಿನ ಬಂಡಿಯಲ್ಲಿ ಕರೆದುಕೊಂಡು ಹೋಗಿ ಭೇಟಿ ಮಾಡಿಸಲಾಗುತ್ತಿದೆ. ಇದು ಕೈಮಗ್ಗ ನೇಕಾರಿಕೆಯ ವಿವಿಧ ಹಂತಗಳನ್ನು ವೀಕ್ಷಿಸಿದ ನಂತರ ಕೊನೆಯಲ್ಲಿ ಕೈಮಗ್ಗ ಸೀರೆ ಮತ್ತು ಖಣಗಳನ್ನು ನೇರವಾಗಿ ವಹಿವಾಟು ಮಾಡುವ ಕೈಮಗ್ಗ ನೇಕಾರಿಕೆ ಸೊಸೈಟಿಗಳಿಗೆ ಕರೆದುಕೊಂಡು ಹೋಗಲಾಗುತ್ತದೆ. ಇಲ್ಲಿ ಪ್ರವಾಸಿಗರು ತಮಗೆ ಇಷ್ಟವಾದ ಕೈಮಗ್ಗ ಸೀರೆ, ಖಣಗಳನ್ನು ಖರೀದಿಸಲು ಅವಕಾಶವನ್ನು ಕಲ್ಪಿಸುವ ಮೂಲಕ ಪ್ರವಾಸಿಗರನ್ನು ಆಕರ್ಷಿಸುವ ಹೊಸ ಪ್ರಯತ್ನಕ್ಕೆ ಜಿಲ್ಲಾಡಳಿತ ಮುಂದಾಗಿದೆ.

ಜಿಲ್ಲೆಯ ಹ್ಯಾಂಡಲೂಮ್ ತಯಾರಿಕಾ ಕೇಂದ್ರಗಳಾದ ಇಲಕಲ್ ಸೀರೆ ಮತ್ತು ಗುಳೇದಗುಡ್ಡ, ಖಣ ಉತ್ಪನ್ನಗಳು ಭೌಗೋಳಿಕ ಸೂಚ್ಯಂಕ ಮಾನ್ಯತೆ ಪಡೆದಿವೆ. ಸದರಿ ಉತ್ಪನ್ನಗಳ ಪ್ರಚಾರಕ್ಕಾಗಿ ಜಿಲ್ಲಾಧಿಕಾರಿಗಳು ನಬಾರ್ಡ್, ಕೈಮಗ್ಗ ಮತ್ತು ಜವಳಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಕೈಮಗ್ಗ ನೇಕಾರಿಕೆ ಸಂಘಗಳು, ಪ್ರವಾಸಿ ಮಾರ್ಗದರ್ಶಿಗಳ ಸಹಯೋಗದಲ್ಲಿ ಜಿಲ್ಲೆಯಲ್ಲಿ ಹ್ಯಾಂಡಲೂಮ್ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗಿದ್ದಾರೆ. ಇದರ ಚಟುವಟಿಕೆಯ ಭಾಗವಾಗಿ ಜಿಲ್ಲೆಯ ಇಲಕಲ್, ಗುಳೇದಗುಡ್ಡ, ಕಮತಗಿ, ಸೂಳೇಭಾವಿ ಊರುಗಳಲ್ಲಿರುವ ಕೈಮಗ್ಗ ನೇಕಾರಿಕೆ ಕೇಂದ್ರಗಳಿಗೆ ಈಗಾಗಲೇ ಹ್ಯಾಂಡಲೂಮ್ ಪ್ರವಾಸದಡಿ ಪ್ರಾಯೋಗಿಕವಾಗಿ ಐದಾರು ಪ್ರವಾಸ ಪ್ಯಾಕೇಜ್ ಆಯೋಜಿತವಾಗಿದೆ. ಸದ್ಯಕ್ಕೆ ಪ್ರಾಯೋಗಿಕವಾಗಿ ಯೋಜನೆ ಜಾರಿ ಮಾಡಲಾಗಿದೆ. ಇದಕ್ಕೆ ದೊರಕುವ ಪ್ರತಿಕ್ರಿಯೆ ಗಮನಿಸಿ ಮುಂದಿನ ಹಂತದಲ್ಲಿ ಪ್ರವಾಸಿ ಪ್ಯಾಕೇಜ್ ಜತೆಗೆ ಹ್ಯಾಂಡಲೂಮ್ ಟೂರಿಸಂ ಸೇರಿಸಿ ದರ ನಿಗದಿ ಮಾಡಲಾಗುತ್ತದೆ.

**ದೇಸಿ ಉತ್ಪನ್ನಗಳ ಮೇಲೆ ವ್ಯಾಮೋಹ ಹೆಚ್ಚಿಸಿರುವ ಹ್ಯಾಂಡಲೂಮ್ ಪ್ರವಾಸೋದ್ಯಮ**

ಈ ಹ್ಯಾಂಡಲೂಮ್ ಪ್ರವಾಸೋದ್ಯಮದಡಿಯಲ್ಲಿ ಪ್ರವಾಸಿಗರಿಗೆ ಜಿಲ್ಲೆಯಲ್ಲಿರುವ ಐತಿಹಾಸಿಕ ಸ್ಥಳಗಳನ್ನು ತೋರಿಸುವ ಜೊತೆಗೆ ಜಿಲ್ಲೆಯಲ್ಲಿಯೇ ಸಿದ್ಧವಾಗುವ ದೇಸಿ ಕೈಮಗ್ಗದ ಉತ್ಪನ್ನಗಳ ತಯಾರಿಯ ಹಿಂದಿರುವ ಪರಿಶ್ರಮ, ಸಿದ್ಧವಾಗಲು ತಗುಲುವ ಕಾಲಾವಧಿ ಹಾಗೂ ವಿವಿಧ ವಿನ್ಯಾಸಗಳ ಚಿತ್ರಣದ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ. ಇದರಿಂದ ಪ್ರವಾಸಿಗರಿಗೆ ದೇಸಿ ವಸ್ತುಗಳ ಮೇಲೆ ವ್ಯಾಮೋಹ ಹೆಚ್ಚಿ, ಅವರು ದೇಸಿ ವಸ್ತುಗಳನ್ನು ಖರೀದಿಸುತ್ತಿರುವುದರಿಂದ ಕೈಮಗ್ಗ ನೇಕಾರರ ವ್ಯಾಪಾರ ಕೂಡ ಕುದುರಿದೆ.



Downloaded From:www.kpscvaani.com

# ಇಟಗಿ ಮಹಾದೇವ ದೇವಾಲಯ

**ಆರನೆಯ ವಿಕ್ರಮಾದಿತ್ಯನ ದಂಡನಾಯಕ ಮಹಾದೇವನು ನಿರ್ಮಿಸಿರುವ ಕಲ್ಯಾಣ ಚಾಲುಕ್ಯ ಶೈಲಿಯ ಭವ್ಯ ಶಿವಾಲಯ ಈ ಮಹಾದೇವ ದೇವಾಲಯ.**

ಪ್ರಹ್ಲಾದ ಪರ್ವತಿ

**ಕೊ**ಪ್ಪಳ ಜಿಲ್ಲೆ ಕುಕನೂರು ತಾಲೂಕಿನ ಇಟಗಿ ಗ್ರಾಮದ ಮಹಾದೇವ ದೇವಾಲಯವು "ದೇವಾಲಯಗಳ ಚಕ್ರವರ್ತಿ"ಎಂದು ಪ್ರಸಿದ್ಧವಾಗಿದೆ. ಇಂದಿನ ಇಟಗಿ ಈ ಹಿಂದೆ ನರೆಯಂಗಲ್ಲ 12 ಆಡಳಿತ ವಿಭಾಗದ ಪ್ರಾಚೀನ ಅಗ್ರಹಾರವಾಗಿತ್ತು. ಕಲ್ಯಾಣ ಚಾಲುಕ್ಯ ಶೈಲಿಯ ಈ ಭವ್ಯ ಶಿವಾಲಯವು ವಾಸ್ತು ಶಿಲ್ಪ ನಿಯಮಗಳ ಅನ್ವಯ ಪರಿಪೂರ್ಣ ದೇವಾಲಯವೆಂಬ ಹೆಗ್ಗಳಿಕೆ ಪಡೆದಿದೆ.

ಪ್ರಸಿದ್ಧ ಪಾಶ್ಚಾತ್ಯ ವಾಸ್ತು ಕಲಾ ತಜ್ಞ ಕಸಿನ್ಸ್ ರವರು "ಹಳೇಬೀಡಿನ ದೇವಾಲಯಗಳನ್ನು ಬಿಟ್ಟರೆ ಇದು ಕೆತ್ತನೆಯ ಸೊಬಗಿನ ದೃಷ್ಟಿಯಿಂದ ಕರ್ನಾಟಕದಲ್ಲಿ ಅತ್ಯಂತ ಸುಂದರ ದೇವಾಲಯವಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಗ್ರಾಮದ ಕೆರೆ ದಂಡೆಯ ಮೇಲಿರುವ ಈ ಗುಡಿಯನ್ನು ಶಕಪುರಷ ಆರನೆಯ ವಿಕ್ರಮಾದಿತ್ಯನ ದಂಡನಾಯಕ ಮಹಾದೇವನು ತನ್ನ ಹುಟ್ಟೂರಾದ ಇಟ್ಟಿಗೆಯಲ್ಲಿ ನಿರ್ಮಿಸಿದ್ದಾಗಿ ಇಲ್ಲಿಯ ಶಾಸನ ತಿಳಿಸುತ್ತದೆ. ಹೀಗಾಗಿ ಆತನ ಹೆಸರಿನಿಂದ ಈ ದೇವಾಲಯವನ್ನು ಗುರುತಿಸಲಾಗುತ್ತಿದೆ.

**ಕುಸರಿ ಕಲೆ:**

ಪೂರ್ವಾಭಿಮುಖವಾಗಿರುವ ನಕ್ಷತ್ರಾಕಾರದ ಜಗುಲಿಯ ಗುಡಿಯು ದೊಡ್ಡದಾಗಿದ್ದು, ನೀಲಿಮಿಶ್ರಿತ ಕರಿ ಕಲ್ಲಿನಲ್ಲಿ ಕಟ್ಟಲಾಗಿದೆ. ಈ ದೇವಾಲಯದ ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪ, ದ್ವಾರಮಂಟಪ, ಮಕರ ತೋರಣ, ಭುವನೇಶ್ವರಿ, ಶಿಖರ, ಕೀರ್ತಿಮುಖಗಳು ಕುಸುರಿ ಕೆತ್ತನೆಯಿಂದ ಅಲಂಕೃವಾಗಿವೆ. ಗರ್ಭಗುಡಿ ಮತ್ತು ಸುಕನಾಶಿ ಸರಳ ಸೌಂದರ್ಯ ಹೊಂದಿವೆ. ಗರ್ಭಗೃಹದಲ್ಲಿ ಭವ್ಯತೆಗೆ ತಕ್ಕ ಶಿವಲಿಂಗವಿದ್ದು, ಎದುರಿನ ಮಹಾಮಂಟಪದಲ್ಲಿ ನಂದಿ





Downloaded From:www.kpscvaani.com

ಇದೆ. ಚೌಕಾಕಾರವಾಗಿರುವ ನವರಂಗ ಮಂಟಪಕ್ಕೆ ಮೂರು ಪ್ರವೇಶ ದ್ವಾರಗಳಿದ್ದು, ಎಲ್ಲ ದ್ವಾರಗಳೂ ಹಲವು ಸೂಕ್ಷ್ಮ ಕೆತ್ತನೆಯ ಬಹು ಸುಂದರಕೃತಿಗಳಾಗಿವೆ.

ಮುಂದಿನ ತೆರೆದ ಮಂಟಪದ ಸುತ್ತಲೂ ಕಕ್ಷಾಸನವಿದೆ. ಈ ಕಕ್ಷಾಸನದ ಮೇಲಿರುವ 42 ಕುಬ್ಜ ಸ್ತಂಭಗಳು ಮತ್ತು ಮಧ್ಯಾಂಗಣದಲ್ಲಿರುವ 26 ದೊಡ್ಡ ಸ್ತಂಭಗಳು ಮಂಟಪದ ಛಾವಣಿ ಹೊತ್ತಿವೆ. ಈ ವಿವಿಧ ಸ್ಥಂಬಗಳ ಸಮೂಹವನ್ನು ವ್ಯವಸ್ಥಿತವಾಗಿ ಅಳವಡಿಸಲಾಗಿದ್ದು, ಇವುಗಳು ದೇವಾಲಯದ ಮೆರಗು ಹೆಚ್ಚಿಸಿವೆ. ಮಧ್ಯದಲ್ಲಿರುವ ಕನ್ನಡಿಯಂತೆ ಹೊಳೆಯುವ ನಕ್ಷತ್ರಾಕಾರದ ಕಂಬಗಳಲ್ಲಿ ಬಹು ಕ್ಲಿಷ್ಟ ವಿನ್ಯಾಸದ ಸುಂದರ ಶಿಲ್ಪಾಲಂಕರಣವಿದೆ.

ಗಂಟೆಯಾಕಾರದ ಕಂಬಗಳ ಕೆಳಭಾಗದಲ್ಲಿ ಮಕರ ತೋರಣಗಳ ನಡುವೆ ಬಿಡಿಸಲಾದ ದೇವತಾ ಮೂರ್ತಿಗಳು ಗಮನ ಸೆಳೆಯುತ್ತವೆ. ಈ ಮಂಟಪದ ಮಧ್ಯ ಆಳವಾದ ಭಾಗದಲ್ಲಿ ಭುವನೇಶ್ವರಿ ಅಷ್ಟಕೋನಾಕೃತಿಯಲ್ಲಿದ್ದು, ತುತ್ತ ತುದಿಯಲಿ ನಟರಾಜನ ಶಿಲ್ಪವಿದೆ. ಇತರ ಭಾಗಗಳಲ್ಲಿ ದೇವತಾ ವಿಗ್ರಹಗಳನ್ನು ಸುಂದರವಾಗಿ ಕೆತ್ತಿದ್ದಾರೆ. ಪ್ರತಿ ಮೂಲೆ ಕಲ್ಲುಗಳಲ್ಲಿ ಮಕರ, ಕೀರ್ತಿಮುಖ ಹಾಗೂ ಬಳಕುತ್ತ ಒಳತೂರುವ ಲತಾವಲ್ಲರಿಗಳ ಉಚ್ಛತಮ ಶಿಲ್ಪಬಂಧಗಳಿವೆ. ಮುಖಮಂಟಪ, ನವರಂಗಗಳ ಮಧ್ಯದಲ್ಲಿರುವ ದ್ವಾರಮಂಟಪದ ಛತ್ತಿನಲ್ಲೂ ಗುಮ್ಮಟಾಕಾರದ ಭುವನೇಶ್ವರಿಯಲ್ಲಿ ಕಮಲದ ಹೂ ಕೆತ್ತಿದ್ದಾರೆ.

ದೇವಾಲಯದ ಮುಖ್ಯ ಪ್ರವೇಶದ್ವಾರವು ಸೂಕ್ಷ್ಮ ಕೆತ್ತನೆಗಳಿಂದ ಶಿಲ್ಪಿಗಳ ನೈಪುಣ್ಯತೆ ಪರಿಚಯಿಸುತ್ತದೆ. ನವಿರಾದ ಬಳ್ಳಿ, ಸುರಳಿ, ಮೂರ್ತಿಗಳ ಶಿಲ್ಪಗಳು ನೋಡುಗರನ್ನು ವಿಸ್ಮಯಗೊಳಿಸುತ್ತವೆ. ಅರ್ಧಮಂಟಪದಲ್ಲಿರುವ ಮಕರ ತೋರಣ ವಿಶಿಷ್ಟವಾಗಿದೆ. ತೆಳುವಾದ ಕಂಬಗಳ ಮೇಲಿರುವ ಈ ತೋರಣದಲ್ಲಿ ಕಾಣುವ ಮಕರಗಳು ಚಿನ್ನದ ಕುಸುರಿನ ಕಲೆ ನೆನಪಿಸುತ್ತವೆ. ಇಲ್ಲಿ ಬ್ರಹ್ಮ, ನಟರಾಜ, ವಿಷ್ಣುವಿನ ಶಿಲ್ಪಗಳನ್ನು ಅಳವಡಿಸಿದ್ದಾರೆ.

**ಕಲ್ಲರಳಿ ಹೂವಾಗಿ:**

ದೇವಾಲಯದ ಹೊರಗೋಡೆಗಳ ಅಲಂಕರಣೆ ಆಕರ್ಷವಾಗಿದೆ. ಅರೆಗಂಬಗಳು, ದೇವಕೋಷ್ಟಗಳು, ನಾಗರ ರೀತಿಯ ಶಿಖರ, ಕಪೋತ, ಮಕರತೋರಣ, ಮೇಲಿನ ಹಾರದಲ್ಲಿ ಕೂಟ, ಪಿಂಜರ ಭಾಗಗಳನ್ನು ಉಬ್ಬು ಶಿಲ್ಪದಲ್ಲಿ ಸೂಕ್ಷ್ಮ ಕೆತ್ತನೆಗಳೊಂದಿಗೆ ಬಿಡಿಸಲಾಗಿದೆ.





ಗುಡಿಯ ಶಿಖರದ ಮೇಲ್ಭಾಗ ಇತ್ತೀಚಿನದು. ಕೆಳಭಾಗ ಮಾತ್ರ ಮೂಲದ್ದು. ಮೆಟ್ಟಿಲು ಮೆಟ್ಟಿಲಾಗಿ ಮೇಲೇರಿ ಸ್ತೂಪದಲ್ಲಿ ಒಂದಾಗುವ ಶಿಖರದಲ್ಲಿ ಮೂರು ಅಂತಸ್ತುಗಳು ಗೋಚರಿಸುತ್ತವೆ. ಈ ಶಿಖರವು ದ್ರಾವಿಡ ಮತ್ತು ನಾಗರ ಶಿಖರಾಂಶಗಳನ್ನು ಒಗ್ಗೂಡಿಸಿರುವ ಉತ್ತಮ ವೇಸರ ಕೃತಿಯಾಗಿದೆ. ದೇವಾಲಯದ ಮುಂಭಾಗದಲ್ಲಿ ಸುಂದರ ಪುಷ್ಕರಣಿ ಇದ್ದು, ಇದರ ಕೆಳಭಾಗದವರೆಗೂ ಮೆಟ್ಟಿಲುಗಳಿರುವುದು ವಿಶೇಷವಾಗಿದೆ. ದೇವಾಲಯದ ಸುತ್ತಲೂ ಅನೇಕ ಚಿಕ್ಕ ದೇವಾಲಯಗಳಿದ್ದು ಅವು ಶಿಥಿಲಗೊಂಡಿವೆ.

ಭಾರತ ಪುರಾತತ್ವ ಇಲಾಖೆಯ ಸಂರಕ್ಷಣೆಯಲ್ಲಿರುವ ಈ ದೇವಾಲಯ ತಾಲ್ಲೂಕ ಕೇಂದ್ರವಾದ ಕೂಕನೂರಿನಿಂದ 7 ಕಿಮೀ ದೂರದಲ್ಲಿದೆ. ಕೊಪ್ಪಳ ಜಿಲ್ಲಾ ಕೇಂದ್ರದಿಂದ 26 ಕಿಮೀ ದೂರದಲ್ಲಿದೆ. ಸಾಕಷ್ಟು  ಸಾರಿಗೆ ವ್ಯವಸ್ಥೆ ಇರುವ ಜೊತೆಗೆ ಕೊಪ್ಪಳ, ಹೊಸಪೇಟೆಗೆ ರೈಲು ಸಂಪರ್ಕ ಕೂಡ ಇದೆ.

ತಿರುಳ್ಗನ್ನಡ ನಾಡಿನಲ್ಲಿ ಹೂ ಅರಳಿದಂತೆ ಕಲ್ಲರಳಿ ಕಲೆಯಾಗಿರುವ ಮಹಾದೇವ ದೇವಾಲಯದಲ್ಲಿಯ ಶಿಲ್ಪಿಗಳ ಜಾಣ್ಮೆ, ನಯಗಾರಿಕೆ ಮತ್ತು ಕುಸುರಿ ಕೆಲಸ ನೋಡಲು ತಪ್ಪದೆ ನೀವೊಮ್ಮೆ ಇಟಗಿಗೆ ಭೇಟಿ ನೀಡಬಹುದು. ■



Downloaded From:www.kpscvaani.com



# ಆಗಬೇಕಿದೆ ಮನೆ ಮನೆಗಳಲ್ಲಿ ಮಳೆಕೊಯ್ಲು

**ಮುಂದಿನ ದಿನಗಳಲ್ಲಿ ಪ್ರತಿ ಮನೆ ಮನೆಗಳಲ್ಲೂ ಜಲ ಮರುಪೂರಣ ಘಟಕ ಅಳವಡಿಸುವುದು ಅನಿವಾರ್ಯವಾಗಲಿದೆ.**


ಪ್ರವೀಣ್ ಚೆನ್ನಾವರ

ಕಳೆದ ಬೇಸಿಗೆಯ ಬಿಸಿಲಿನ ತಾಪ, ನೀರಿನ ಬವಣೆ ನಮ್ಮ ಕಣ್ ಮುಂದೆ ಇರುವುದರಿಂದ ಮುಂದಿನ ದಿನಗಳಲ್ಲಿ ನೀರಿನ ಅಭಾವ ದೂರಮಾಡಲು ಈಗೀಂದಲೇ ಮನೆ ಮನೆಗಳಲ್ಲಿ ಮಳೆಕೊಯ್ಲು ಘಟಕ ಅಥವಾ ಜಲ ಮರುಪೂರಣ ಘಟಕ ನಿರ್ಮಾಣಕ್ಕೆ ಜನರು ಮುಂದಾಗಬೇಕಿದೆ.

ಕಳೆದ ಹಲವು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ಕುಂತೂರು ಗ್ರಾಮದ ಶಿಕ್ಷಕರಾದ ಸುಬ್ರಹ್ಮಣ್ಯ ಅವರು ತಮ್ಮ ಮನೆಯಲ್ಲಿ ಮಳೆಕೊಯ್ಲು ಘಟಕವನ್ನು ನಿರ್ಮಿಸಿ ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ತಮ್ಮ ಮನೆಯ ಬಾವಿಗೆ ಇಂಗಿಸುತ್ತಿದ್ದಾರೆ. ಈ ಮೂಲಕ ತಮ್ಮ ಸುತ್ತಮುತ್ತಲಿನ ಜನರಿಗೆ ಮಾದರಿಯಾಗಿದ್ದಾರೆ.

ಮಳೆ ಕೊಯ್ಲು, ಜಲ ಮರುಪೂರಣ ಘಟಕಗಳಿಂದ ಭೂಮಿಯೊಳಗೆ ಇಂಗಿದ ನೀರು ಬ್ಯಾಂಕಿನಲ್ಲಿಟ್ಟ ಫಿಕ್ಸೆಡ್ ಡಿಫಾಸಿಟ್‌ನಂತೆ ಎನ್ನುತ್ತಾರೆ ಹಿರಿಯರು. ಈ ಹಿಂದಿನ ಕಾಲದಲ್ಲಿ ಎಂತಹ ಬೇಸಿಗೆಯಲ್ಲೂ ಕುಡಿಯುವ ನೀರಿಗೆ, ಕೃಷಿ ನೀರಿಗೆ ಅಷ್ಟೊಂದು ತಾಪತ್ರಾಯ ಇರಲಿಲ್ಲ. ಹೆಚ್ಚಿನ


Downloaded From:www.kpscvaani.com




ಪ್ರಮಾಣದಲ್ಲಿ ಮಳೆಗಾಲದಲ್ಲಿ ಸುರಿಯುವ ಮಳೆ ನೀರು ಕೆರೆ, ಬಾವಿ, ಮಣ್ಣಿನ ಕಟ್ಟಗಳಲ್ಲಿ ಶೇಖರಣೆಯಾಗುತ್ತಿತ್ತು.

ಆದರೆ ಈಗ ಹೆಚ್ಚಿನ ಕಡೆಗಳಲ್ಲಿ ಕೆರೆ, ಬಾವಿ, ಮಣ್ಣಿನ ಕಟ್ಟಗಳು ಕಾಣಸಿಗುವುದೇ ಅಪರೂಪ. ಮಳೆ ಕೊಯ್ಲು, ಜಲ ಮರುಪೂರಣ ಘಟಕಗಳಿಂದ ನಮ್ಮ ಅಂತರ್ಜಲ ಮಟ್ಟ ಹೆಚ್ಚಳಗೊಂಡು ಭವಿಷ್ಯದ ದಿನಗಳಿಗೆ ಪ್ರಯೋಜನವಾಗಲಿದೆ. ಕಡಿಮೆ ಖರ್ಚಿನಲ್ಲಿ ಮಳೆ ಕೊಯ್ಲು ಮಾಡುವ ಸರಳ ವಿಧಾನಗಳು ಬಹಳಷ್ಟಿವೆ. ಮನೆಯ ಮಾಲೀಕರು ಮನಸ್ಸು ಮಾಡಿದಲ್ಲಿ ವರ್ಷ ಪೂರ್ತಿ ಮಳೆಯ ನೀರನ್ನೇ ಬಳಸಬಹುದು. ಆದರೆ ಮಳೆ ನೀರು ಕೊಯ್ಲು ಅಳವಡಿಸಿಕೊಳ್ಳುವ ಮನೆಗೆ ದೊಡ್ಡ ಸಂಗ್ರಹಣಾ ಸಂಪ್ ಬಹುಮುಖ್ಯವಾಗಿ ಇರಬೇಕು.

ಜಲ ಮರುಪೂರಣಕ್ಕೆ ಭಗೀರಥ ಪ್ರಯತ್ನವೇನೂ ಬೇಡ, ಮನಸು ಬೇಕಷ್ಟೇ.

## ಜಲ ಮರುಪೂರಣದಿಂದ ಶುದ್ಧ ನೀರು

**ಕೊಳವೆಬಾವಿಗೆ ಜಲ ಮರುಪೂರಣ ಮಾಡುವುದರಿಂದ ಅದರೊಳಗಿನ ನೀರಿನ ಮಟ್ಟ ಹೆಚ್ಚಾಗುತ್ತದೆ. ಜತೆಗೆ ಕೊಳವೆಬಾವಿ ನೀರು ಫ್ಲೋರೈಡ್ ಯುಕ್ತವಾಗಿದ್ದು, ಗಡಸು ಅಂಶವಿದ್ದರೂ ಹಂತ ಹಂತವಾಗಿ ಕಡಿಮೆಯಾಗುತ್ತದೆ. ಮಳೆ ನೀರು ಇಂಗಿಸುವುದು ನಿರಂತರವಾದರೆ, ಕೆಲವೇ ವರ್ಷಗಳಲ್ಲಿ ಕೊಳವೆ ಬಾವಿಯಲ್ಲಿ ಶುದ್ಧ ನೀರು ಸಿಗುವಂತಾಗುತ್ತದೆ.**

## ಉದ್ಯೋಗ ಖಾತರಿಯಲ್ಲಿದೆ ಅವಕಾಶ

**ಕೇಂದ್ರ ಸರಕಾರದ ಉದ್ಯೋಗ ಖಾತರಿ ಯೋಜನೆಯ ಮೂಲಕ ಕೊಳವೆ ಬಾವಿಗಳಿಗೆ ಜಲ ಮರುಪೂರಣ ಘಟಕ ನಿರ್ಮಾಣಕ್ಕೆ ಅವಕಾಶವಿದೆ. ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಚೀಟಿ ಮಾಡಿಸಿಕೊಂಡು ಯೋಜನೆಯ ಕುರಿತಾದ ಕೆಲ ದಾಖಲೆಗಳನ್ನು ನೀಡಿ ತಮ್ಮ ಮನೆಗಳಲ್ಲೂ ಈ ಘಟಕವನ್ನು ಆರಂಭಿಸಬಹುದು.**

ನೀರು ಸಂರಕ್ಷಣೆ ಮಾಡುವ ಮನಸ್ಸು ಇದ್ದರೆ ಸಾಕು. ಪೈಪು ಅಳವಡಿಸಿ ಸುಲಭ ವಿಧಾನದ ಮೂಲಕ ಛಾವಣಿ ನೀರನ್ನು ನೇರವಾಗಿ ಬಾವಿಗಿಳಿಸಬಹುದು. ನನ್ನ ಮನೆಯಲ್ಲಿ ಹಲವು ವರ್ಷಗಳಿಂದ ಮಳೆ ಕೊಯ್ಲು ಮಾಡುತ್ತಿದ್ದೇನೆ. ಇದರಿಂದ ಸಾಕಷ್ಟು ಪ್ರಯೋಜನವಾಗಿದೆ ಎನ್ನುವುದು ಸುಬ್ರಹ್ಮಣ್ಯ ಅವರ ಅಭಿಮತ.

ಮನೆಯ ಮಳೆ ಕೊಯ್ಲು ಘಟಕದಿಂದ ಕೊಳವೆ ಬಾವಿಯಲ್ಲಿ ಬೇಸಿಗೆಯಲ್ಲೂ ನೀರಿನ ಮಟ್ಟ ಕುಸಿತವಾಗಿಲ್ಲ. ಮಳೆಕೊಯ್ಲಿನ ಮೂಲಕ ಮಳೆ ನೀರನ್ನು ಬಾವಿಗೆ ಇಂಗಿಸುವುದರಿಂದ ನೀರು ಬಿರು ಬೇಸಿಗೆಯಲ್ಲೂ ಸಿಗುತ್ತದೆ. ಸ್ವಯಂ ಪ್ರೇರಣೆಯಿಂದ ಈ ಕಾರ್ಯ ಮಾಡಿದ್ದು, ಮುಂದಿನ ದಿನಗಳಲ್ಲಿ ನೀರಿಂಗಿಸುವಿಕೆ ಅನಿವಾರ್ಯತೆಯಾಗಲಿದೆ ಎನ್ನುತ್ತಾರೆ.

ಪ್ರತಿ ಮನೆ ಮನೆಗಳಲ್ಲಿ ನೀರಿಂಗಿಸುವಿಕೆಯನ್ನು ಸ್ಥಳೀಯ ಆಡಳಿತವು ಕಡ್ಡಾಯ ಮಾಡಬೇಕಿದೆ. ಮಳೆ ಕೊಯ್ಲು ಅಳವಡಿಸುವವರಿಗೆ ಪ್ರೋತ್ಸಾಹ ನೀಡುವುದು ಅವಶ್ಯ. ಮನೆಗಳಲ್ಲಿ ಮಳೆ ಕೊಯ್ಲು ಘಟಕ ನಿರ್ಮಾಣಕ್ಕೆ 5 ರಿಂದ 10 ಸಾವಿರವದರೆಗೆ ವೆಚ್ಚವಾಗಬಹುದು. ಕೊಳವೆ ಬಾವಿಗಳಿಗೆ ಜಲ ಮರು ಪೂರಣ ಘಟಕ ನಿರ್ಮಾಣಕ್ಕೆ ಕನಿಷ್ಠ 20 ಸಾವಿರ ವೆಚ್ಚವಾಗಬಹುದು. ಒಟ್ಟಿನಲ್ಲಿ ಮನೆ ಮನೆಯಲ್ಲಿ ಇಂತಹ ಯೋಜನೆಯನ್ನು ಅನುಷ್ಠಾನಕ್ಕೆ ತಂದರೆ ಗ್ರಾಮದಲ್ಲಿ ಜಲಸಮೃದ್ಧಿಯಾಗಲಿದೆ.

ಈ ನೀರು ನೆಲಕ್ಕೆ ಹರಿಯುವ ಮೊದಲೇ ಹಿಡಿದಿಟ್ಟುಕೊಂಡಲ್ಲಿ ಬಳಕೆಗೆ ಯೋಗ್ಯವಾಗುತ್ತದೆ. ಹಿಡಿಯುವ ನೀರು ಹೆಚ್ಚಾದರೆ, ಅದನ್ನು ಇಂಗಿಸಲು ನಿಮ್ಮ ಮನೆಯ ಅಂಗಳದಲ್ಲೇ ಇಂಗು ಗುಂಡಿ ಮಾಡಿಸಿಕೊಳ್ಳಬಹುದು. ಕೊಳವೆಬಾವಿ ಇದ್ದರೆ, ಹೀಗೆ ಹೆಚ್ಚಾಗಿ ಹರಿದು ಚರಂಡಿ ಸೇರುವ ನೀರನ್ನು ಕೊಳವೆಬಾವಿಗೆ ಇಂಗಿಸಬಹುದು.

ಭವಿಷ್ಯದ ದೃಷ್ಟಿಯಿಂದ ನೀರಿಂಗಿಸುವಿಕೆ ಅನಿವಾರ್ಯವಾಗಿದೆ. ಆದ್ದರಿಂದ ಭವಿಷ್ಯದ ಹಿತದೃಷ್ಟಿಯಿಂದ ಮನೆ ಮನೆಯಲ್ಲಿ ನೀರಿಂಗಿಸುವಿಕೆಯನ್ನು ಗ್ರಾ.ಪಂ. ಕಡ್ಡಾಯಗೊಳಿಸದಿದ್ದರೂ ನಾಗರಿಕರು ಸ್ವಯಂ ಪ್ರೇರಣೆಯಿಂದ ಮಳೆ ಕೊಯ್ಲು, ಜಲ ಮರುಪೂರಣ ಘಟಕಗಳನ್ನು ನಿರ್ಮಿಸಬೇಕು. ಇದರಿಂದ ಸಾಕಷ್ಟು ಪ್ರಯೋಜನವಾಗುತ್ತದೆ. ಹಾಗೆಯೇ ಯುವಜನತೆಯು ಸಸ್ಯ ಸಂರಕ್ಷಣೆ ಹಾಗೂ ನೀರಿಂಗಿಸುವಿಕೆ ಕಾರ್ಯವನ್ನು ಮುಂಚೂಣಿಯಲ್ಲಿ ನಿಂತು ಮಾಡಬೇಕು.

ಈಗಷ್ಟೇ ಮಳೆಗಾಲ ಆರಂಭವಾಗಿದೆ, ಉಚಿತವಾಗಿ ಸಿಗುವ ಮಳೆನೀರನ್ನು ಕೈಚೆಲ್ಲಿ ಕುಳಿತರೆ, ಶುದ್ಧ ನೀರನ್ನು ಮತ್ತೆ ಪಡೆಯಲು ಸಾಧ್ಯವಾಗದು. ಹಾಗಾಗಿ ಹೊಸದಾಗಿ ಮನೆ ಕಟ್ಟುವವರು ಮುಂದಾಲೋಚನೆಯಿಂದ ಮಳೆ ನೀರು ಕೊಯ್ಲು ತಜ್ಞರ ಸಲಹೆಯನ್ನು ಪಡೆದು ಮಳೆ ನೀರು ಶೇಖರಣೆಗೆ ವ್ಯವಸ್ಥೆ ಮಾಡಿಕೊಳ್ಳುವುದು ಒಳಿತು.

ಸಾಧಾರಣ ಮಳೆಗೆ ಕನಿಷ್ಠವೆಂದರೂ ಹತ್ತು ಸಾವಿರ ಲೀಟರ್‌ನಷ್ಟು ನೀರು ನಮ್ಮ ಮನೆಯ ಛಾವಣಿಯಿಂದ ಹರಿದು ಚರಂಡಿ ಸೇರುತ್ತದೆ. ಆದ್ದರಿಂದ ಉಚಿತವಾಗಿ ಸಿಗುವ ಈ ಮಳೆ ನೀರನ್ನು ಶೇಖರಿಸುವ ಮತ್ತು ಜಲ ಮರುಪೂರಣ ಮಾಡುವ ಮೂಲಕ ಮುಂದಿನ ನಮ್ಮ ಪೀಳಿಗೆಗೆ ಆಗಬಹುದಾದ ನೀರಿನ ಕೊರತೆ ನೀಗಿಸುವ ಕೆಲಸವನ್ನು ಕೈಗೊಳ್ಳೋಣ.


Downloaded From:www.kpscvaani.com



# ಕೆರೆಮನೆ ಮೇಳಕ್ಕೆ

## ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರ

**ರಾಮಾಯಣ ರಾಷ್ಟ್ರೀಯ ಮಹೋತ್ಸವದಲ್ಲಿ ಪ್ರಥಮ ಬಹುಮಾನ ಗಳಿಸಿದ ಕೆರೆಮನೆ ಮೇಳ.**

ಮಂಜುನಾಥ ಭಟ್

ಛತ್ತೀಸಘಡದ ರಾಯಘಡದಲ್ಲಿ ಈಚೆಗೆ ನಡೆದ ರಾಮಾಯಣ ರಾಷ್ಟ್ರೀಯ ಮಹೋತ್ಸವದಲ್ಲಿ ಕರೆಮನೆ ಮೇಳ ಪ್ರಥಮ ಬಹುಮಾನದೊಂದಿಗೆ ಐದು ಲಕ್ಷ ರೂಪಾಯಿ ನಗದು ಬಹುಮಾನವನ್ನು ತನ್ನದಾಗಿಸಿಕೊಂಡಿದೆ. ಆ ಮೂಲಕ ಕೆರೆಮನ ಮೇಳವು ಯಕ್ಷಗಾನದ ಮೆರುಗನ್ನು ಹೆಚ್ಚಿಸಿದೆ.

ಈ ಉತ್ಸವದಲ್ಲಿ ಕೇರಳ, ಮಹಾರಾಷ್ಟ್ರ, ಗೋವಾ, ಜಾರ್ಖಂಡ್, ಛತ್ತೀಸಘಡ, ಮಧ್ಯಪ್ರದೇಶ, ಅಸ್ಸಾಂ, ಹಿಮಾಚಲ ಪ್ರದೇಶ, ಓಡಿಸ್ಸಾ, ಪಶ್ಚಿಮ ಬಂಗಾಳ ಹಾಗೂ ಇಂಡೋನೇಷಿಯಾ, ಕಾಂಬೋಡಿಯಾದ ಕಲಾ ತಂಡಗಳು ಭಾಗವಹಿಸಿದ್ದವು. ಇದರಲ್ಲಿ ಕೆರೆಮನೆ ಮೇಳದ 13 ಜನರ ತಂಡ ಪ್ರಥಮ ಬಹುಮಾನವನ್ನು ತನ್ನದಾಗಿಸಿಕೊಂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆ ಎಂದಾಕ್ಷಣ ಕಣ್ಮುಂದೆ ಬಂದು ಹೋಗುವ ಚಿತ್ರಣ ಒಂದೆರಡಲ್ಲ. ಒಂದಕ್ಕಿಂತ ಇನ್ನೊಂದು ಸುಂದರ. ಅಷ್ಟೇ ಅದ್ಭುತವಾಗಿರುವ ಹತ್ತಾರು ಜಲಪಾತಗಳು. ದಟ್ಟವಾದ ಕಾಡು-ಮೇಡು, ಗುಡ್ಡ-ಗಿರಿಧಾಮಗಳು. ಆಕರ್ಷಕ ಕಡಲತೀರ. ಪುಣ್ಯ ಕ್ಷೇತ್ರಗಳು. ಗ್ರಾಮೀಣ ಪ್ರದೇಶದತ್ತ ಹೊರಟರೆ ಕಾಣುವ ಒಂಟಿ ಮನೆಗಳು. ಅಲ್ಲಿನವರ ಅತಿಥಿ ಸತ್ಕಾರ, ಬದುಕು, ಸಾಹಸ... ಒಂದೇ, ಎರಡೇ, ಕಣ್ತುಂಬಿಕೊಂಡಷ್ಟು ದೃಶ್ಯಗಳ ಪರದೆ ವಿಸ್ತರಿಸುತ್ತಲೇ ಹೋಗುತ್ತದೆ.

ಅಂತಹ ಜಿಲ್ಲೆಯ ಗಂಡುಮೆಟ್ಟಿನ ಕಲೆ ಎಂದೇ ಪ್ರಸಿದ್ಧವಾಗಿರುವ ಯಕ್ಷಗಾನ ರಾತ್ರಿಯಾಗುತ್ತಿದ್ದಂತೆ ಚಂಡೆ, ಮೃದಂಗದ ಸದ್ದು, ಹಾಡುಗಾರನ ವಿಶಿಷ್ಟ ಓಘ, ಆಕರ್ಷಕ ವೇಷ-ಭೂಷಣದಿಂದ ಅನಾವರಣಗೊಳ್ಳುತ್ತದೆ.

ಹಾಗೆ ಹೇಳುವುದಾದರೆ ಯಕ್ಷಗಾನ ಅಲ್ಲಿನ ಜನತೆಗೆ ರಕ್ತಗತ. ಕೆಲವರು ಯಕ್ಷಗಾನ ವೃತ್ತಿ ಕಲಾವಿದರಾಗಿ, ಹಲವರು ಹವ್ಯಾಸಿ ಕಲಾವಿದರಾಗಿ ಅದನ್ನು ಬೆಳೆಸುತ್ತಿದ್ದಾರೆ. ಹಾಗೆಯೇ ಬಹುತೇಕರು ಅಭಿಮಾನದಿಂದ ಕೂಡ ಪೋಷಿಸುತ್ತಿದ್ದಾರೆ. ಹೀಗೆ ಮೊದಲನೇ ಸಾಲಿನಲ್ಲಿ ಯಕ್ಷಗಾನವನ್ನು ಬೆಳೆಸುವ ಕಾರ್ಯದಲ್ಲಿ ತಲೆ ತಲಾಂತರಗಳಿಂದ ಮುಡಿಪಾಗಿಟ್ಟು



Downloaded From:www.kpscvaani.com

ಗಣ್ಯಾತಿಗಣ್ಯ ಕಲಾವಿದರನ್ನು ಕೊಟ್ಟಿರುವ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ (ಕೆರೆಮನೆ ಮೇಳ) ಮುಂಚೂಣಿಯಲ್ಲಿದೆ.

1934ರಲ್ಲಿ ಸ್ಥಾಪನೆಯಾದ ಈ ಮೇಳಕ್ಕೆ ಎಂಟು ದಶಕಗಳ ವರ್ಣರಂಜಿತ ಇತಿಹಾಸವಿದೆ. ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಯುಗಪುರುಷ ಎಂದೇ ಖ್ಯಾತರಾಗಿದ್ದ ದಿ. ಕೆರೆಮನೆ ಶಿವರಾಮ ಹೆಗಡೆ ಅವರು ಈ ಮಂಡಳಿಯ ಸಂಸ್ಥಾಪಕರು. ನಂತರ ಯಕ್ಷಗಾನ ದಿಗ್ಗಜ ಎಂದೇ ಪ್ರಸಿದ್ಧಿ ಪಡೆದಿದ್ದ ದಿ. ಕೆರೆಮನೆ ಶಂಭು ಹೆಗಡೆ ಅವರ ನೇತೃತ್ವದಲ್ಲಿ ಮಂಡಳಿ ಮತ್ತಷ್ಟು ಜನಜನಿತವಾಯಿತು. ಪ್ರಸ್ತುತ ಕೆರೆಮನೆ ಶಿವಾನಂದ ಹೆಗಡೆ ಅವರ ನಿರ್ದೇಶನದಲ್ಲಿ ಮಂಡಳಿ ದಾಖಲೆ ನಿರ್ಮಿಸುತ್ತಿದೆ.




ಯಕ್ಷಗಾನದ ಶಾಸ್ತ್ರೀಯ ಪರಂಪರೆಯ ರಕ್ಷಣೆ ಹಾಗೂ ಪ್ರಸರಣವನ್ನು ಉದ್ದೇಶವಾಗಿಟ್ಟುಕೊಂಡು ಇದು ಮುನ್ನೆಡೆದಿದೆ. ಶಿವಾನಂದ ಹೆಗಡೆಯವರ ಪುತ್ರ ಕೆರೆಮನೆ ಶ್ರೀಧರ ಹೆಗಡೆ ಅವರೂ ಸಹ ನೃತ್ಯ ಕ್ಷೇತ್ರದಲ್ಲಿ ಉನ್ನತ ವ್ಯಾಸಂಗ ಮುಗಿಸಿ, ಮೇಳದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಒಟ್ಟು 15 ಜನರಿರುವ ಈ ಯಕ್ಷಗಾನ ಮೇಳ, ದೇಶ–ವಿದೇಶಗಳಲ್ಲಿ ಯಶಸ್ವೀ ಯಕ್ಷಗಾನ ಪ್ರದರ್ಶನ ನೀಡುತ್ತಿದೆ.

ಯಕ್ಷಗಾನದಲ್ಲಿ ಹೊಸ, ಹೊಸ ಪ್ರಯೋಗಗಳು ನಡೆಯುತ್ತಿರುವ ಸಂದರ್ಭದಲ್ಲಿ ಸಾಂಪ್ರದಾಯಿಕ ಚೌಕಟ್ಟಿಗೆ ಬದ್ಧವಾಗಿ ಪುರಾಣ ಕಥೆಗಳನ್ನಷ್ಟೇ ಆಡುತ್ತ ಕಲೆಯ ಪಾವಿತ್ರ್ಯತೆಯನ್ನು ಉಳಿಸಿಕೊಂಡು ಮುನ್ನೆಡೆದಿದೆ. ಈವರೆಗೂ 9000 ಕ್ಕೂ ಹೆಚ್ಚು ಯಕ್ಷಗಾನ ಪ್ರದರ್ಶನ ನೀಡಿದ ಹೆಮ್ಮೆ ಈ ಮೇಳದ್ದು. ದೇಶದ ಬಹುತೇಕ ಪ್ರಮುಖ ಪಟ್ಟಣಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಿರುವ ಕೆರೆಮನೆ ತಂಡ, ಇಂಗ್ಲೆಂಡ್, ಫ್ರಾನ್ಸ್, ಚೀನಾ, ನೇಪಾಳ, ಬಹ್ರೇನ್, ಸ್ಪೇನ್, ಬಾಂಗ್ಲಾದೇಶ್, ಅಮೇರಿಕಾ, ಇಂಡೋನೇಷ್ಯಾ, ಫಿಲಿಫೀನ್ಸ್, ಸಿಂಗಾಪುರ, ದುಬೈ, ಲಾವೋಸ್, ಮಾಯ್ಮಾರ್ ಮೊದಲಾದ ಕಡೆಗಳಲ್ಲಿಯೂ ಜನಮನ ರಂಜಿಸಿದೆ.

ಜತೆಗೆ ಯಕ್ಷಗಾನ ಕಲೆಯನ್ನು ಬೆಳೆಸುವ ಉದ್ದೇಶದಿಂದ ಅನೇಕ ವಿಧಾಯಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಹಮ್ಮಿಕೊಳ್ಳುತ್ತ ಬಂದಿದೆ. 1986ರಲ್ಲೇ ಯಕ್ಷಗಾನ ರಂಗ ಶಿಕ್ಷಣ ಕೇಂದ್ರ ಆರಂಭಿಸಿ ಗುರುಕುಲ ಮಾದರಿಯಲ್ಲಿ ಆಸಕ್ತರಿಗೆ ತರಬೇತಿ ನೀಡುತ್ತಿದೆ. ಒಂದು ವರ್ಷ ಅವಧಿಯ ಈ ತರಬೇತಿ ಶಿಬಿರದಲ್ಲಿ ಯಕ್ಷಗಾನ ಕುಣಿತ, ಭಾಗವತಿಕೆ, ಮದ್ದಲೆ, ಚಂಡೆ ವಾದನ... ಹೀಗೆ ಎಲ್ಲ ಮಜಲುಗಳನ್ನು ಹೇಳಿಕೊಡಲಾಗುತ್ತಿದೆ. 35 ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬಂದಿರುವ ಈ ತರಬೇತಿಯಲ್ಲಿ ರಾಜ್ಯದ ವಿವಿಧ ಭಾಗದ ಸಾವಿರಾರು ಯಕ್ಷಗಾನ ಅಭಿಮಾನಿಗಳು ಸೇರಿದಂತೆ ದೇಶದ ನಾನಾಕಡೆಗಳಿಂದ ಆಸಕ್ತರು ಪಾಲ್ಗೊಂಡು ಯಕ್ಷಗಾನದ ಮೆರುಗು ಹೆಚ್ಚಿಸಿದ್ದಾರೆ.




ಮಂಡಳಿಯ ಸಂಸ್ಥಾಪಕ ದಿ. ಕೆರೆಮನೆ ಶಿವರಾಮ ಹೆಗಡೆಯವರ ಸ್ಮರಣಾರ್ಥ (2004ರಲ್ಲಿ) ಸುಸಜ್ಜಿತ ರಂಗಮಂದಿರವೊಂದನ್ನು ನಿರ್ಮಿಸಲಾಗಿದೆ. ಯಕ್ಷಗಾನ ಕಲಾವಿದರೊಬ್ಬರ ಹೆಸರಿನಲ್ಲಿ ಮಂಡಳಿಯೊಂದು ಸ್ಥಾಪಿಸಿದ ಪ್ರಪ್ರಥಮ ರಂಗ ಮಂದಿರ ಎಂಬ ಹೆಗ್ಗಳಿಕೆಯೂ ಇದಕ್ಕಿದೆ. ದಿ. ಶಿವರಾಮ ಹೆಗಡೆಯವರ ಹೆಸರಿನಲ್ಲಿ ಕಳೆದ 17 ವರ್ಷಗಳಿಂದ ರಾಷ್ಟ್ರೀಯ ಪ್ರಶಸ್ತಿ ನೀಡಲಾಗುತ್ತಿದೆ. 25 ಸಾವಿರ ರೂಪಾಯಿ ನಗದು ಹೊಂದಿರುವ ವಿಶೇಷ ಪ್ರಶಸ್ತಿ ಇದಾಗಿದ್ದು, ಯಕ್ಷಗಾನ ಹಾಗೂ ಯಕ್ಷಗಾನೇತರ ಕಲೆ, ಸಾಹಿತ್ಯ, ರಂಗಭೂಮಿಯ ಹಿರಿಯ ಸಾಧಕರಿಗೆ ಕೊಡಲಾಗುತ್ತಿದೆ.



Downloaded From:www.kpscvaani.com



2009ರಲ್ಲಿ ದಿ. ಕೆರೆಮನೆ ಶಂಭು ಹೆಗಡೆಯವರ ಹೆಸರಿನಲ್ಲಿ ಸ್ಮಾರಕ ಬಯಲು ರಂಗ ಮಂದಿರವೊಂದನ್ನು ನಿರ್ಮಿಸಲಾಗಿದೆ, ಜತೆಗೆ "ಶ್ರೀಮಯ ಕಲಾ ಪೋಷಕ" ಪ್ರಶಸ್ತಿ ಸ್ಥಾಪಿಸಲಾಗಿದೆ. ಕಳೆದ 11 ವರ್ಷಗಳಿಂದ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ ಹಮ್ಮಿಕೊಳ್ಳಲಾಗುತ್ತಿದೆ. 2010ರಿಂದ ಪ್ರತಿ ವರ್ಷ ನಡೆಯುತ್ತಿರುವ ಈ ಉತ್ಸವದಲ್ಲಿ ಐದು ದಿನಗಳ ಕಾಲ ವಿವಿಧ ಗೋಷ್ಠಿಗಳು, ಪ್ರಾತ್ಯಕ್ಷಿಕೆ, ಕಲಾಶಿಬಿರ, ಸಾಧಕರಿಗೆ ಸನ್ಮಾನ ಹಾಗೂ ದೇಶದ ವಿವಿಧ ಭಾಗಗಳ ಕಲಾಪ್ರಕಾರಗಳ ಪ್ರದರ್ಶನವಿರುತ್ತದೆ.

ಕೆರೆಮನೆ ಮೇಳದ ಖ್ಯಾತ ಸ್ತ್ರೀ ವೇಷಧಾರಿಯಾಗಿದ್ದ ದಿ. ಕೆರೆಮನೆ ಗಜಾನನ ಹೆಗಡೆ ನೆನಪಿಗಾಗಿ ಯಕ್ಷಗಾನ ಕ್ಷೇತ್ರಕ್ಕೇ ಮೀಸಲಾಗಿರಿಸಿ ಪ್ರಶಸ್ತಿಯೊಂದನ್ನು ಸ್ಥಾಪಿಸಲಾಗಿದೆ. ಈವರೆಗೆ ಒಟ್ಟು 8 ಜನ ಯಕ್ಷಗಾನ ಸಾಧಕರಿಗೆ ಪ್ರಶಸ್ತಿ ನೀಡಲಾಗಿದೆ. ಕಲಾ ಕ್ಷೇತ್ರದ ಗಣ್ಯರ ಕುರಿತಂತೆ ಪೂರ್ವಸ್ಮರಣೆ ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗುತ್ತಿದೆ. ಈವರೆಗೆ 25 ಮಂದಿ ಸಾಧಕರ ಕುರಿತಂತೆ ಗೋಷ್ಠಿಗಳು ನಡೆದಿವೆ. ಶಂಭು ಹೆಗಡೆ ಬಯಲು ರಂಗ ಮಂದಿರ ಬಳಿ ಯಕ್ಷಗಾನ ವೇಷಧಾರಿಗಳ ಸಿಮೆಂಟ್ ಶಿಲ್ಪಗಳನ್ನು ನಿರ್ಮಿಸಲಾಗಿದೆ. ಕೆರೆಮನೆ



ಶಿವರಾಮ ಹೆಗಡೆ ರಂಗಮಂದಿರದಲ್ಲಿ ಪ್ರತಿ ತಿಂಗಳು "ಮಾಸದ ಆಟ" ಯೋಜನೆಯ ಅಡಿಯಲ್ಲಿ ಯಕ್ಷಗಾನ ಪ್ರದರ್ಶನ ಏರ್ಪಡಿಸಲಾಗುತ್ತಿದೆ. ಯಕ್ಷಗಾನ ಕಲಾವಿದರಿಗೆ ಆರ್ಥಿಕವಾಗಿ ನೆರವಾಗುವ ಉದ್ದೇಶದಿಂದ ಪ್ರದರ್ಶನ ಏರ್ಪಡಿಸಿ ಸಂಗ್ರಹವಾದ ಹಣವನ್ನು ದೇಣಿಗೆಯಾಗಿ ನೀಡಲಾಗುತ್ತಿದೆ. ಹೀಗೆ ಹತ್ತು ಹಲವಾರು ವಿಧಾಯಕ ಕಾರ್ಯಕ್ರಮಗಳು ಮಂಡಳಿಯ ಮುಖ್ಯಸ್ಥ ಕೆರೆಮನೆ ಶಿವಾನಂದ ಹೆಗಡೆಯವರ ನೇತೃತ್ವದಲ್ಲಿ ಸಂಭ್ರಮದಿಂದ ನಡೆಯುತ್ತಿವೆ.

ಮುಂದಿನ ದಿನಗಳಲ್ಲಿ ಯಕ್ಷಗಾನ ತರಬೇತಿ ಆಕಾಂಕ್ಷಿಗಳಿಗೆ ಅನುಕೂಲವಾಗುವಂತಹ ವಸತಿ ನಿಲಯ, ನೃತ್ಯ ಕೊಠಡಿ, ಸಮಾವೇಶ ಪ್ರಾಂಗಣ, ಗ್ರಂಥಾಲಯ ನಿರ್ಮಾಣ, ಯಕ್ಷಗಾನಕ್ಕೆ ಮೀಸಲಾಗಿಟ್ಟ ನಿಯತಕಾಲಿಕೆ ಹೊರತರುವುದು, ಯಕ್ಷಗಾನ ವಸ್ತು ಸಂಗ್ರಹಾಲಯ, ಕಂಪ್ಯೂಟರೀಕರಣ ಮೊದಲಾದ ಯೋಜನೆಗಳನ್ನು ಜಾರಿಗೆ ತರುವ ಉದ್ದೇಶವಿದೆ.

ಹಾಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೊನ್ನಾವರ-ಭಟ್ಕಳದ ನಡುವೆ ಬರುವ ಗುಣವಂತೆ ಗ್ರಾಮದಲ್ಲಿ ಇಳಿದು ನಡೆದರೆ ಕೆರೆಮನೆ ಮೇಳದ ಸಾಧನೆ ಹೀಗೆಲ್ಲ ಅನಾವರಣಗೊಳ್ಳುತ್ತದೆ. ಉತ್ತರ ಕನ್ನಡ ಜಿಲ್ಲೆಯ ಪ್ರಕೃತಿ ಸೊಬಗಿನ ಜತೆಗೆ ಯಕ್ಷಗಾನದ ರಸದೌತಣ ಸವಿಯುವ ಭಾಗ್ಯ ನಿಮ್ಮದಾಗುತ್ತದೆ. ಇನ್ನೇಕೆ ತಡ?...ಬನ್ನಿ ಒಮ್ಮೆ ಕೆರೆಮನೆ ಮೇಳಕ್ಕೆ. ಕೆರೆಮನೆ ಮೇಳದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ https://www.yakshaganakeremane.come ಗೆ ಭೇಟಿ ನೀಡಬಹುದು. ಜತೆಗೆ ಮೊಬೈಲ್ 9480516300, 9480450458 ಅನ್ನು ಸಂಪರ್ಕಿಸಬಹುದು.



Downloaded From:www.kpscvaani.com



# ಶ್ರವಣ ಸಮಸ್ಯೆ ನಿವಾರಣೆಗೆ ಶ್ರಮಿಸಿದ ಕಾಯಕ ಯೋಗಿ

# ಡಾ॥ ಪ್ರಾಣೇಶ್ ರಾವ್

● ಬಿ.ಎಸ್. ಪಲ್ಲವಿ

**ಭಾ**ಷೆ ಮತ್ತು ಲಿಪಿ ಮನುಕುಲಕ್ಕೆ ಮಾತ್ರ ಸೀಮಿತ. ಪ್ರಾಣಿಗಳಿಗೆ ಭಾಷೆ ಇದ್ದರೂ ಲಿಪಿ ಇಲ್ಲ. ಹೀಗಾಗಿಯೇ ಮನುಷ್ಯ ಅಸಾಧಾರಣ ಮತ್ತು ಅದ್ಭುತ. ಇಂತಹ ಮಾನವನ ಶ್ರೇಯೋಭಿವೃದ್ಧಿಗಾಗಿ ತಂತ್ರಜ್ಞಾನ ಬೆಳೆಯುತ್ತಿದೆ. ಸವಾಲುಗಳು ಕೂಡ ಹೆಚ್ಚಾಗುತ್ತಿವೆ. ಹೀಗಾಗಿ ತಮ್ಮ ತಮ್ಮ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲೆಂದೇ ಹಲವಾರು ಮಹನೀಯರು ತಮ್ಮ ಜೀವನವನ್ನೇ ಸಮರ್ಪಿಸಿಕೊಂಡಿದ್ದಾರೆ. ಅಂತಹ ಶ್ರೇಷ್ಠರ ಸಾಲಿಗೆ, ಅತ್ಯುನ್ನತ ಪರಂಪರೆಗೆ ಮಾದರಿಯಾದವರು ಸ್ಪೀಚ್ ಅಂಡ್ ಹಿಯರಿಂಗ್ ಅಂದರೆ ವಾಕ್ ಶ್ರವಣ ಚಿಕಿತ್ಸಾ ವಲಯದಲ್ಲಿ ಇಡೀ ದೇಶಕ್ಕೆ ಮಾರ್ಗದರ್ಶಕರಾದ ಕಾಯಕಯೋಗಿ ಡಾ॥ ಪ್ರಾಣೇಶ್ ರಾವ್.




ಮೂಲತಃ ತುಮಕೂರಿನ ಬೆಳಗುಂದದ ಡಾ॥ ಪ್ರಾಣೇಶ್ ರಾವ್ ವಾಕ್ ಶ್ರವಣ ಸಮಸ್ಯೆಯುಳ್ಳವರಿಗೆ ಆಶಾಕಿರಣ. ಬದುಕಿನುದ್ದಕ್ಕೂ ಅಸಂಖ್ಯಾತ ವ್ಯಕ್ತಿಗಳಿಗೆ, ನಾನಾ ವಲಯಗಳಿಗೆ ಬೆಳಕಾದವರು. ತಂದೆ ಬಿ.ಎಸ್. ನಾರಾಯಣ ರಾವ್ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಬಳಿ ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದವರು. ಸರ್.ಎಂ.ವಿ ಉಡುಗೊರೆಯಾಗಿ ನೀಡಿದ ಟೇಬಲ್ ಲ್ಯಾಂಪ್, ಮಂಚ, ಖುರ್ಚಿ ಮತ್ತಿತರ ಪೀಠೋಪಕರಣಗಳನ್ನು ಪ್ರಾಣೇಶ್ ರಾವ್ ಈಗಲೂ ಬಳಸುತ್ತಿದ್ದಾರೆ. ವಿಶ್ವೇಶ್ವರಯ್ಯ ನವರಂತೆ ಹಿಡಿದ ಕೆಲಸವನ್ನು ಸಮರ್ಥವಾಗಿ ಪೂರ್ಣಗೊಳಿಸುವುದನ್ನು ಅವರು ಮೈಗೂಡಿಸಿಕೊಂಡಿದ್ದಾರೆ. 82 ರ ವಯಸ್ಸಿನಲ್ಲೂ ಯುವ ಸಮೂಹ ನಾಚಿಸುವಂತೆ ಸಂಶೋಧನೆ, ಸಂವಾದ, ಲೇಖನ, ಇತರೆ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹಲವಾರು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗಿಯಾಗಿ ವಾಕ್ ಶ್ರವಣಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಪ್ರೌಢ ಪ್ರಬಂಧಗಳು ಮತ್ತು ವಿಷಯ ಮಂಡಿಸಿದ್ದಾರೆ.

ಪ್ರಾಥಮಿಕ ಹಂತದಿಂದಲೂ ಸಂಶೋಧನೆ, ವೈಜ್ಞಾನಿಕ ಮನೋಧೋರಣೆ ಹೊಂದಿದ್ದ ಪ್ರಾಣೇಶ್ ರಾವ್ ತುಮಕೂರಿನಲ್ಲಿ ಬಿ.ಎಸ್.ಸಿ., ಬಿ.ಎಡ್., ಪದವಿ, ಮೈಸೂರಿನಲ್ಲಿ ಎಂ.ಎಸ್.ಸಿ (ಸ್ಪೀಚ್ ಅಂಡ್ ಹಿಯರಿಂಗ್) ಪದವಿ, ಅಮೇರಿಕಾದಲ್ಲಿ ಪಿ.ಹೆಚ್.ಡಿ. ಪೂರ್ಣಗೊಳಿಸಿದ್ದಾರೆ. ಇದು ಅವರಿಗೆ ವಾಕ್ ಶ್ರವಣ ಕ್ಷೇತ್ರದ ಬಹು ಆಯಾಮಗಳಲ್ಲಿ ಕೆಲಸ ಮಾಡಲು ಸ್ಫೂರ್ತಿ ನೀಡಿತು. ತೊರೆ ತೊರೆಯಾಗಿ ಹರಿದ ಅವರ ಪ್ರತಿಭೆ ಅಗಾಧ ಸ್ವರೂಪ ಪಡೆಯಿತು.

ಡಾ॥ ಪ್ರಾಣೇಶ್ ರಾವ್ ಬೆಂಗಳೂರಿನ ವಾಯುಪಡೆಯ ಮೆಡಿಸಿನ್ ಸಂಸ್ಥೆಯಲ್ಲಿ ಪ್ರೊಫೆಸರ್ ಹಾಗೂ ಹಿರಿಯ ವಾಕ್



Downloaded From:www.kpscvaani.com



## ಫಿಸಿಯೋ ಥೆರಪಿ ಮಾದರಿಯಲ್ಲಿ ತಲೆ ಸುತ್ತುವಿಕೆಗೆ ವರ್ಟಿಗೋ ಚೇರ್‌ನಿಂದ ಪರಿಹಾರ

'ಆವಿಷ್ಕಾರ' ಎಂಬುದು ನಿಜಕ್ಕೂ ಸಾಮಾನ್ಯ ವಿಚಾರವಲ್ಲ. ಅದು ತಪಸ್ವಿಗಳಿಗೆ ಮಾತ್ರ ಸಿದ್ಧಿಸುವಂತಹದ್ದು. ತಪಸ್ವಿಗಳೆಂದರೆ ಹಿಡಿದ ಛಲ ಸಾಧಿಸುವವರು. ತಮ್ಮ ಸೃಜನ ಶೀಲತೆ ಮುಖೇನ ಸಂಶೋಧಿಸಿದ ಅನೇಕ ವಸ್ತುಗಳು ಇಂದು ಅಗತ್ಯ ಮತ್ತು ಅನಿವಾರ್ಯವಾಗಿವೆ. ತಲೆ ಸುತ್ತಿನ ಸಮಸ್ಯೆಗೆ ನೂತನ ವರ್ಟಿಗೋ ಚೇರ್ ಅವಿಷ್ಕಾರ ಮಾಡಿದ್ದಾರೆ ಡಾ॥ ಪ್ರಾಣೇಶ್ ರಾವ್.

ಅನೇಕರಿಗೆ ತಲೆಸುತ್ತುವುದು ಸಾಮಾನ್ಯ. ಸ್ವಲ್ಪ ತಲೆ ಸುತ್ತಿದರೂ ಇಡೀ ಭೂಮಿಯೇ ಮೇಲೆ ಕೆಳಗೆ ಸಾಗಿದಂತೆ ಅನುಭವವಾಗುತ್ತದೆ. ದೇಹದ ಮೇಲೆ ಸ್ವಲ್ಪವೂ ನಿಯಂತ್ರಣ ಇಲ್ಲದೇ ಬೀಳುವವರು ಇದ್ದಾರೆ. ಇದಕ್ಕೆಲ್ಲ ನಮ್ಮ ಶ್ರವಣದಲ್ಲಿ ಅಂಗಾಂಗಗಳು ಕಾರಣ. ಎತ್ತರಕ್ಕೆ ಏರುತ್ತಿದ್ದಂತೆ, ಮೇಲಿನಿಂದ ಕೆಳಗೆ ನೋಡಿದರೆ ಬೀಳುತ್ತಿದ್ದೇವೆ ಎಂದು ಭಾಸವಾಗುತ್ತದೆ. ಇದಕ್ಕೆಲ್ಲ ಪರಿಹಾರವಾಗಿ ಡಾ. ಪ್ರಾಣೇಶ್ ರಾವ್ ಕಂಡು ಹಿಡಿದಿರುವ ನೂತನ ಆವಿಷ್ಕಾರವೇ ಈ ವರ್ಟಿಗೋ ಚೇರ್.

ವರ್ಟಿಗೋ ಚೇರ್ ಮಾಮೂಲಿ ಚೇರ್ ನಂತೆ ಕಂಡರೂ ಅದರ ಕಾರ್ಯವೈಖರಿ ಭಿನ್ನ. ಇದರಲ್ಲಿ 15 ದಿನ ಅಭ್ಯಾಸ ಮಾಡಿದರೆ ಸಂಪೂರ್ಣವಾಗಿ ತಲೆಸುತ್ತಿವಿಕೆ, ದೇಹದ ಅಸಮತೋಲನದ ಸಮಸ್ಯೆಗಳಿಂದ ಗುಣ ಮುಖರಾಗಬಹುದು. ಸಮಸ್ಯೆ ಹೊಂದಿರುವವರನ್ನು ಈ ಚೇರ್‌ನಲ್ಲಿ ಕೂರಿಸಿ ಹಲವು ರೀತಿಯ ಭಂಗಿಗಳಿಂದ ಭಯ, ಇಂಬ್ಯಾಲೆನ್ಸ್ ಅನ್ನು ಹೋಗಲಾಡಿಸಬಹುದು. ಆದರೆ ತಲೆಸುತ್ತುವಿಕೆ ಮತ್ತು ಶ್ರವಣದೋಷಗಳಿಗೆ ಮಾತ್ರ ಹಿಂದೆ ಇದ್ದ ಸಲಕರಣೆಗಳಲ್ಲೇ ಚಿಕಿತ್ಸೆ ನೀಡಲಾಗುತ್ತಿದ್ದು ಇದರಿಂದ ಖಾಯಿಲೆ ಗುಣವಾಗುವುದಿಲ್ಲ. ಸತತ 35 ವರ್ಷಗಳ ಕಾಲ ತಜ್ಞರಾಗಿ ಕಾರ್ಯನಿರ್ವಹಿಸಿದ ಅನುಭವದಿಂದ ಅದಕ್ಕೊಂದು ವೈಜ್ಞಾನಿಕ ಉಪಕರಣವಾಗಿ ವರ್ಟಿಗೋ ಚೇರ್ ಆವಿಷ್ಕರಿಸಿದ್ದಾರೆ. ಎತ್ತರಕ್ಕೆ ಹಾರುವ ಕೆಲಸಗಳನ್ನು ಮಾಡುವವರು, ಅಧಿಕ ರಕ್ತದೊತ್ತಡ, ಮಧುಮೇಹ, ಹೃದಯ ತೊಂದರೆ ಇರುವವರಿಗೆ ತಲೆಸುತ್ತಿನ ಸಮಸ್ಯೆ ಕಾಡಬಹುದು. ಅವೆಲ್ಲವನ್ನು ವರ್ಟಿಗೋ ಚೇರ್ ಮುಖೇನ ಅತಿ ಕಡಿಮೆ ದರದಲ್ಲಿ ರೋಗ ಗುಣಪಡಿಸಿಕೊಳ್ಳಬಹುದು. ವರ್ಟಿಗೋ ಚೇರ್ ಹಲವು ಆಸ್ಪತ್ರೆಗಳಲ್ಲಿ ಬಳಸುತ್ತಿದ್ದು, ರೋಗಿಗಳು ಇದರಿಂದ ಗುಣಮುಖರಾಗುತ್ತಿದ್ದಾರೆ. ಫಿಸಿಯೋ ಥೆರಪಿ ಮಾದರಿಯಲ್ಲಿ ವರ್ಟಿಗೋ ಥೆರಪಿ ಅಭಿವೃದ್ಧಿಪಡಿಸಿದ್ದು, ಇದು ಭವಿಷ್ಯದಲ್ಲಿ ಸಾಕಷ್ಟು ಜನರಿಗೆ ಅನುಕೂಲವಾಗುವುದರಲ್ಲಿ ಸಂಶಯವಿಲ್ಲ.

ಶ್ರವಣ ವಿಜ್ಞಾನಿಯಾಗಿ ಮೂವತ್ತು ವರ್ಷ ಸೇವೆ ಸಲ್ಲಿಸಿದರು. ಶಬ್ಧಮಾಲಿನ್ಯದ ನಾನಾ ವರದಿಗಳು ಮತ್ತು ಪರಿಹಾರೋಪಾಯಗಳನ್ನು ನೀಡಲು ಈ ಸಂಸ್ಥೆ ಅವರಿಗೆ ನೆರವಾಯಿತು. ಭಾರತೀಯ ವಾಯುಸೇನೆಗೆ ಸೇರ್ಪಡೆಗೊಳ್ಳುವ ಸೈನಿಕರಿಗೆ ಶ್ರವಣದೋಷ ಪರಿಷ್ಕರಣೆ ಮತ್ತು ಪರಿಹಾರದ ತರಬೇತಿ ನೀಡುವ ಕೆಲಸ ಮಾಡಿದರು.

ಹೆಲಿಕಾಪ್ಟರ್‌ಗಳು, ಯುದ್ಧ ವಿಮಾನಗಳನ್ನು ಚಲಾಯಿಸುವ ಪೈಲೆಟ್‌ಗಳಿಗೆ ಕಿವಿಗಡಚಿಕ್ಕುವ ಶಬ್ದವನ್ನು ತಾಳಿಕೊಳ್ಳುವ ಮತ್ತು ಅದಕ್ಕೆ ಬೇಕಾದ ಪರಿಹಾರೋಪಾಯಗಳನ್ನು ಅವರು ಸೂಚಿಸಿದ್ದಾರೆ. ಯುದ್ಧದಲ್ಲಿ ಬಂದೂಕಿನ ಸದ್ದು, ಗುಂಡಿನ ದಾಳಿಯಲ್ಲಿ ಉಂಟಾಗುವ ಶ್ರವಣ ದೋಷ ಅಳೆಯುವ ಮತ್ತು ಅವರಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಸೂಕ್ತ ಮಾರ್ಗಸೂಚಿ ರೂಪಿಸಿದ್ದು ಇವರ ಹೆಗ್ಗಳಿಕೆ. ಕಾಕ್ ಪಿಟ್‌ನಲ್ಲಿ ವಿಮಾನದ ಸದ್ದಿಗೆ ರಕ್ಷಣಾ ವ್ಯವಸ್ಥೆ ಕಲ್ಪಿಸಿದ್ದಾರೆ. ಬಾಹ್ಯಾಕಾಶದಲ್ಲೂ ಸಹ ಗಗನ ಯಾತ್ರಿಗಳ ಸಮಸ್ಯೆ ನಿವಾರಣೆಗೆ ಮಾಡಿದ ಶಿಫಾರಸ್ಸುಗಳು ಅನುಷ್ಠಾನಗೊಂಡಿವೆ.

ಭಾರತದ ಹೆಮ್ಮೆಯ ಗಗನ ಯಾತ್ರಿ ರಾಕೇಶ್ ಶರ್ಮಾ ಅವರನ್ನು ಮೌಲ್ಯ ಮಾಪನ ಮಾಡಿದ ಸಮಿತಿ ಸದಸ್ಯರಲ್ಲಿ ಇವರು ಸಹ ಒಬ್ಬರು. ತಲೆತಿರುಗುವಿಕೆ ಮತ್ತದರ ಚಿಕಿತ್ಸೆಗೆ ಅನೇಕ ಉಪಕರಣಗಳನ್ನು ಕಂಡು ಹಿಡಿದ ಕಾರಣ ಇವರ ಹೆಸರನ್ನು 'ನಾಸಾ' ಅಮೆರಿಕಾ ಗ್ರಂಥಾಲಯಗಳಲ್ಲಿ ಸೇರಿಸಿರುವುದು ಇವರ ಶ್ರೇಷ್ಠತೆಗೆ ಸಾಕ್ಷಿ. ತಲೆ ತಿರುಗುವಿಕೆಗೂ ಮಧುಮೇಹಕ್ಕೂ ಸಂಬಂಧವಿಲ್ಲ ಎಂಬುದನ್ನು 1973 ರಲ್ಲಿ ತಮ್ಮ ಅಧ್ಯಯನಗಳ ಮೂಲಕ ಪ್ರಾಣೇಶ್ ರಾವ್ ನಿರೂಪಿಸಿದ್ದಾರೆ. ಇದೀಗ ಭಾರತದ ಹೆಮ್ಮೆಯ ಭಾರತೀಯ ವಿಜ್ಞಾನ ಮಂದಿರದಲ್ಲಿ 82 ನೇ ವಯಸ್ಸಿನಲ್ಲೂ ವಾಕ್ – ಶ್ರವಣ ವಲಯದಲ್ಲಿ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಕೈಗಾರಿಕೆಗಳಲ್ಲಿ ಧ್ವನಿ ಮಾಲಿನ್ಯ ತಡೆಗಟ್ಟಲು ಸೂಕ್ತ ಮಾರ್ಗೋಪಾಯಗಳನ್ನು ಸೂಚಿಸಿದ್ದಾರೆ.

ವಾಕ್ ಶ್ರವಣ ಚಿಕಿತ್ಸಾ ವಲಯದಲ್ಲಿ ಭಾರತಕ್ಕೆ ಪ್ರಥಮ ಪದವೀಧರರಾದ ಇವರು ಮಹಾವೀರ್ ಜೈನ್ ಆಸ್ಪತ್ರೆ, ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ಕೆಲಸ ಮಾಡಿದ್ದಾರೆ. ಬೆಂಗಳೂರು, ಮೈಸೂರು, ಮುಂಬೈ, ಅಹಮದಬಾದ್, ದೆಹಲಿ ಏಮ್ಸ್, ವೆಲ್ಲೂರು, ಮುಂತಾದ ಕಡೆಗಳಲ್ಲಿ ವಾಕ್ ಶ್ರವಣ ಚಿಕಿತ್ಸೆ ಮೂಲಕಬುದ್ಧಿಮಾಂದ್ಯ ಶ್ರವಣ ದೋಷ, ಸ್ಪಾಸ್ಟಿಕ್ ಚಿಕಿತ್ಸೆಯ ಮೂಲಕ ಮಕ್ಕಳಿಗೆ ಮಾತನಾಡಲು ಕಲಿಸಬಹುದೆಂಬ ಪ್ರಯತ್ನದಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ದೇಶದ ಬಹುತೇಕ ಆಸ್ಪತ್ರೆಗಳಲ್ಲಿ ಸ್ಪೀಚ್ ಅಂಡ್ ಹಿಯರಿಂಗ್ ವಲಯದಲ್ಲಿ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು ನೆರವಾಗಿದ್ದಾರೆ. 1978 ಮತ್ತು 1996 ರಲ್ಲಿ ಎರಡು ಬಾರಿ ಇಂಡಿಯನ್ ಅಸೋಸಿಯೇಷನ್ ಆಫ್ ಆಕ್ಯುಪೇಷನಲ್ ಹೆಲ್ತ್ (ಐ.ಎ.ಒ.ಹೆಚ್) ನಿಂದ ಪ್ರಶಸ್ತಿ ಪಡೆದಿದ್ದಾರೆ. ಆಡಿಯೋಲಾಜಿಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಪಡೆದ ಮೊದಲಿಗರೆಂಬ ಖ್ಯಾತಿ ಇವರದು. ವೃತ್ತಿ ಬದುಕಿನ ಜೊತೆಗೆ ಪ್ರಾಣೇಶ್ ರಾವ್ ವಾಕ್ ಶ್ರವಣ ದೋಷವಿರುವವರಿಗೆ ಆರು ಸಾವಿರ ಮದುವೆ ಮಾಡಿಸಿದ್ದಾರೆ. ಬೆಂಗಳೂರಿನ ಇಂದಿರಾನಗರದಲ್ಲಿ ರಾಘವೇಂದ್ರ ಮಠ, ದಾನಿಗಳ ನೆರವಿನಿಂದ ಸ್ವಯಂವರಗಳನ್ನು ಏರ್ಪಡಿಸಿ ಸಮಸ್ಯೆ ಉಳ್ಳವರ ಬದುಕಿನಲ್ಲಿ ಸಂತಸದ ಹೊನಲು ಹರಿಯುವಂತೆ ಮಾಡಿದ್ದಾರೆ. ಕರ್ನಾಟಕ, ತಮಿಳುನಾಡು, ಕೇರಳ ಅಗತ್ಯವಿರುವ ಕಡೆಗಳಲ್ಲಿ ಹೊಮಿಗಾ ರಿಹ್ಯಾಬ್ಲಿಟೇಷನ್ ಸೆಂಟರ್ ಮೂಲಕ ಬಡವರಿಗೆ ಶ್ರವಣ ಸಾಧನಗಳನ್ನು ಸಹ ನೀಡುತ್ತಿದ್ದಾರೆ. ಪ್ರಾಣೇಶ್‌ರಾವ್ ಅವರ ಮೊಬೈಲ್ ನಂ. 96868 39272



Downloaded From:www.kpscvaani.com



# ಜನಸಂಖ್ಯಾ ಸ್ಫೋಟಕ್ಕೆ ಹಾಕಬೇಕಿದೆ ಕಡಿವಾಣ

**ಮಕ್ಕಳ ಹುಟ್ಟುವಿಕೆ ವಿಷಯದಲ್ಲಿ "ಹುಟ್ಟಿಸಿದ ದೇವರು ಹುಲ್ಲು ಮೇಯಿಸದಿರಲಾರ....." ಎಂಬ ಮಾತು ಪುರಾತನ ಕಾಲದಿಂದಲೂ ಚಾಲ್ತಿಯಲ್ಲಿದೆ. ಪ್ರಸ್ತುತ ಜಗತ್ತಿನ ಜನಸಂಖ್ಯೆ 700 ಕೋಟಿ, ಭಾರತದ ಜನಸಂಖ್ಯೆ 121 ಕೋಟಿ ಮೀರಿರುವುದರಿಂದ ನಾವಿಂದು ಇಂಥ ಮಾತುಗಳ ಬಗ್ಗೆ ಸಾವಿರ ಸಾರಿ ಯೋಚಿಸಬೇಕಾಗಿದೆ. ಜುಲೈ 11, 'ವಿಶ್ವ ಜನಸಂಖ್ಯಾದಿನ' ಈ ಹಿನ್ನೆಲೆಯಲ್ಲಿ ಜನಸಂಖ್ಯಾ ಸ್ಫೋಟದ ಬಗ್ಗೆ ಕ್ಷ–ಕಿರಣ ಬೀರುವ ಲೇಖನವಿದು.**

ಬನ್ನೂರು ಕೆ.ರಾಜು

ಕ್ರಿಸ್ತಶಕ ಆರಂಭದ ಕಾಲದಲ್ಲಿ ಜಗತ್ತಿನ ಜನಸಂಖ್ಯೆ ಇದ್ದದ್ದು ಕೇವಲ 30 ಕೋಟಿ. ಅದೇ 1804ರಲ್ಲಿ ಜಗತ್ತಿನ ಜನಸಂಖ್ಯೆ 1 ಬಿಲಿಯನ್. ಹಲವು ಸಾಂಕ್ರಾಮಿಕ ರೋಗ ರುಜಿನಗಳಿಂದ, ಸಾಮೂಹಿಕ ಸಾವುಗಳಿಂದಾಗಿ 20ನೇ ಶತಮಾನದವರೆಗೆ ಈ ಸಂಖ್ಯೆಯಲ್ಲೇನೂ ಹೆಚ್ಚು ಬದಲಾವಣೆಯಾಗಲಿಲ್ಲ. ಆದರೆ 1927ರಲ್ಲಿ ಜಗತ್ತಿನ ಜನಸಂಖ್ಯೆ 2 ಬಿಲಿಯನ್‌ಗೇರಿತು. ಇದು 1987ರಲ್ಲಿ 5 ಬಿಲಿಯನ್ ತಲುಪಿ 1999 ಅಕ್ಟೋಬರ್ 12ರಂದು 6 ಬಿಲಿಯನ್ ಆಗಿತ್ತು. ಆದರೀಗ ಜಗತ್ತಿನ ಜನಸಂಖ್ಯೆ ಎಷ್ಟು ಗೊತ್ತೆ? 2011 ಅಕ್ಟೋಬರ್ 26ರಂದು ವಿಶ್ವ ಜನಸಂಖ್ಯೆಯ ಜನಸಂಖ್ಯಾನಿಧಿ (UNFPA-United Nations Population) ಬಿಡುಗಡೆ ಮಾಡಿರುವ ವರದಿಯ ಪ್ರಕಾರ ವಿಶ್ವದ ಜನಸಂಖ್ಯೆ ಬರೋಬ್ಬರಿ 7 ಬಿಲಿಯನ್! ಒಂದು ಬಿಲಿಯನ್ ಎಂದರೆ ನೂರು ಕೋಟಿ. 1ರ ಮುಂದೆ ಒಂಬತ್ತು ಸೊನ್ನೆಗಳು 1000000000. ಏಳು ಬಿಲಿಯನ್ ಎಂದರೆ 7ರ ಮುಂದೆ ಒಂಬತ್ತು ಸೊನ್ನೆಗಳು 7000000000, ಏಳು ನೂರು ಕೋಟಿ! ಜಗತ್ತಿನ ಜನಸಂಖ್ಯೆ 2011 ವರದಿಯನ್ನು ಬರ್ಲಿನ್, ಕ್ಯಾನ್‌ಬೆರಾ, ಹೇಗ್, ಲಂಡನ್, ಮಾಸ್ಕೊ, ರೋಮ್, ಸ್ಟಾಕ್ ಹೋಮ್, ಟೋಕಿಯೋ, ವಾಷಿಂಗ್ಟನ್ ಸೇರಿದಂತೆ ಜಗತ್ತಿನ 120 ರಾಜಧಾನಿಗಳಲ್ಲಿ ಬಿಡುಗಡೆ ಮಾಡಲಾಗಿದ್ದು, ಈ ವರದಿಯು ಅರೆಬಿಕ್, ಚೀನಿ, ಇಂಗ್ಲೀಷ್, ಫ್ರೆಂಚ್, ರಷ್ಯನ್ ಮತ್ತು ಸ್ಪಾನಿಷ್ ಭಾಷೆಗಳಲ್ಲಿ ಲಭ್ಯವಿದೆ.

ವಿಶ್ವದ ಜನಸಂಖ್ಯೆ ಏಳುನೂರು ಕೋಟಿ ಎಂದರೇನು ಸಾಮಾನ್ಯವೆ? ಇದರಿಂದ ಮುಂದೆ ಬಂದೊದಗಬಹುದಾದ ಸಂಕಷ್ಟದ ದಿನಗಳನ್ನು ಊಹಿಸಲೂ ಆಗದಷ್ಟು ಆತಂಕ


Downloaded From:www.kpscvaani.com



ಜಗತ್ತಿಗಿದೆ. ಹಾಗಾಗಿ ಜಾಗತಿಕ ಮಟ್ಟದಲ್ಲಿ ಜನಸಂಖ್ಯೆ ಏರುವಿಕೆಯನ್ನು ನಿಯಂತ್ರಿಸಲು ಹಾಗೂ ಜಗತ್ತಿನ ಜನಭರಿತ ಸ್ವರೂಪದ ಬಗ್ಗೆ ಜನಜಾಗೃತಿ ಮೂಡಿಸಲು ವಿಶ್ವಸಂಸ್ಥೆಯ ಜನಸಂಖ್ಯಾನಿಧಿಯು (UNFPA) ಜಗತ್ತಿನಾದ್ಯಂತ ಜನಸಂಖ್ಯೆ ಸಮಸ್ಯೆ ಕುರಿತು ಪ್ರತಿ ವರ್ಷ ಮಾಹಿತಿ ನೀಡಲು ಬಹಳ ಹಿಂದಿನಿಂದಲೂ ಪ್ರಯತ್ನಿಸುತ್ತಿದೆ. ಈ ಹಿನ್ನೆಲೆಯಲ್ಲಿ 1974ನ್ನು 'ವಿಶ್ವ ಜನಸಂಖ್ಯಾ ವರ್ಷ' ಎಂದು ವಿಶ್ವಸಂಸ್ಥೆ ಘೋಷಿಸಿತ್ತು. ಹಾಗೆಯೇ 1987ರಲ್ಲಿ ಜಗತ್ತಿನ ಜನಸಂಖ್ಯೆ 500 ಕೋಟಿ ಮುಟ್ಟಿದ ದಿನದಂದು ವಿಶ್ವಸಂಸ್ಥೆ 'ವಿಶ್ವ ಜನಸಂಖ್ಯಾ ದಿನ' ಎಂದು ಘೋಷಿಸಿ ಪ್ರತಿವರ್ಷ ಆಚರಿಸಲಾಗುತ್ತಿದೆ.

ಅದರಂತೆ ಜುಲೈ ಹನ್ನೊಂದು ವಿಶ್ವ ಜನಸಂಖ್ಯಾ ದಿನ. ಕನಿಷ್ಟ ಈ ದಿನವಾದರೂ ಜನಸಂಖ್ಯಾ ಸ್ಫೋಟದ ಪರಿಣಾಮದ ಬಗ್ಗೆ ಪ್ರತಿಯೊಬ್ಬರೂ ಚಿಂತಿಸುವ ಅವಶ್ಯಕತೆ ಖಂಡಿತ ಇದೆ. ಅದಕ್ಕಾಗಿಯೇ ಈ ದಿನವನ್ನು ಗೊತ್ತು ಮಾಡಲಾಗಿದೆ. ಆದರೆ ಇದರ ಬಗ್ಗೆ ಆಳವಾಗಿ ಇಳಿದು ನೋಡಿದರೆ ಗಾಬರಿಯಾಗುತ್ತದೆ. ಮುಂದಿನ ದಿನಗಳಲ್ಲಿ ಮಾನವ ಕೋಟಿಗೆ ಜನಸಂಖ್ಯಾ ಸ್ಫೋಟದಿಂದ ಬಂದೊದಗಬಹುದಾದ ವಿಪತ್ತುಗಳ ಸರಮಾಲೆಗಳನ್ನು ಊಹಿಸಿಕೊಂಡರೆ ಸಾಕು ಒಂದು ಕ್ಷಣ ಎದೆಬಡಿತವೇ ನಿಂತಂತಾಗುತ್ತದೆ.

ಪ್ರಳಯ ಪ್ರಳಯವೆಂದು ಬೊಬ್ಬೆಯಿಡುತ್ತಿರುವ ಮಂದಿಗೆ ಇನ್ನೂ ಗೊತ್ತಿಲ್ಲ. ಎಲ್ಲ ಪ್ರಳಯಕ್ಕಿಂತಲೂ ಅಪಾಯಕಾರಿಯಾದ ಜನಸಂಖ್ಯಾ ಸ್ಫೋಟದ ಪ್ರಳಯವೊಂದಿದೆಯೆಂದು. ಇದು ಅಗತ್ಯ ಮೀರಿ ಸ್ಫೋಟಗೊಂಡರೆ ಜಗತ್ತು ಉಳಿದೀತೆ? ಭೂಮಿಯ ಮೇಲೆ ಜನ ಬದುಕಲಾದೀತೆ? ಅನ್ನವಿರಲಿ, ಗಾಳಿ, ನೀರು, ನೆರಳು ಯಾವುದೂ ಕೈಗೆಟುಕದಾಗುತ್ತದೆ. ಒಂದು ಪಕ್ಷ ಎಟುಕಿದರೂ ಅರೆಹೊಟ್ಟೆ, ಅರೆ ಉಸಿರು, ಅರೆ ಗುಟುಕು, ಅರೆವಾಸವಾಗಿ ಸೆರೆವಾಸಕ್ಕಿಂತಲೂ ಮಾನವಕುಲ ಕಷ್ಟಪಡಬೇಕಾಗುತ್ತದೆ. ಏಕೆಂದರೆ ಬಿಲ್ಲಿನಿಂದ ಬಿಟ್ಟ ಬಾಣದಂತೆ ಶರವೇಗದಲ್ಲಿ ಇಂದು ದಿನದಿಂದ ದಿನಕ್ಕೆ ಜಗತ್ತಿನ ಜನಸಂಖ್ಯೆ ಏರುತ್ತಿದೆ. ಬಹುಶಃ ಇದೇ ಪ್ರಳಯದ ಮುನ್ಸೂಚನೆ ಇರಬಹುದೇನೋ? ಮಿತಿ ಮೀರಿ ಜನಸಂಖ್ಯೆ ಸ್ಫೋಟಗೊಂಡರೆ ಮುಗಿಯಿತು, ಜಗತ್ತಿಗೆ ಯಾವ ಬಾಂಬನ್ನೂ ಹಾಕಲೇಬೇಕಾಗಿಲ್ಲ. ಯಾವ ಚಂಡಮಾರುತವೂ ಅಪ್ಪಳಿಸಬೇಕಾಗಿಲ್ಲ. ಜನಸಂಖ್ಯಾ ಸ್ಫೋಟವೊಂದೇ ಎಲ್ಲಾ ವಿನಾಶಕ್ಕೂ ನಾಂದಿಯಾಡಿಬಿಡುತ್ತದೆ. ಇದಕ್ಕಿಂತ ಪ್ರಳಯಬೇಕೆ?

ಜಗತ್ತಿನ ಜನಸಂಖ್ಯೆ ಎಷ್ಟು ವೇಗವಾಗಿ ಹೆಚ್ಚುತ್ತಿದೆಯೋ ಅಷ್ಟೇ ವೇಗದಲ್ಲಿ ಎಲ್ಲ ಸಮಸ್ಯೆಗಳೂ ಆಕ್ಟೋಪಸ್ ರೀತಿ ಜಗತ್ತನ್ನು ಆಕ್ರಮಿಸುತ್ತಿವೆ. ಅದರಲ್ಲೂ ನಮ್ಮ ಭಾರತ ದೇಶದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವರ್ಷ ವರ್ಷವೂ ಜನಸಂಖ್ಯೆ ಬೆಟ್ಟದಂತೆ ಬೆಳೆಯುತ್ತಿದ್ದು ಇದರಿಂದಾಗಿ ದೇಶದ ಅಭಿವೃದ್ಧಿಗೆ ಅಡ್ಡಲಾಗುವಂತಹ ಅನೇಕ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ. ಒಂದು ರೀತಿಯಲ್ಲಿ ಯಾವುದೇ ದೇಶಕ್ಕಾದರೂ ಜನಸಂಖ್ಯೆಯೇ ಸಂಪತ್ತು. ಆದರದು ಅತಿಯಾದರೆ ಅದೇ ದೇಶಕ್ಕೆ ಆಪತ್ತು. ಅತಿಯಾದರೆ ಅಮೃತ ಕೂಡ ವಿಷವಾಗುತ್ತದೆಂಬ ಮಾತು ಇಲ್ಲಿ ಹೆಚ್ಚು ಪ್ರಸ್ತುತವಾಗುತ್ತದೆ. ಜನಸಂಖ್ಯೆ ನಮ್ಮಲ್ಲಿ ಎಷ್ಟು ಬೇಗ ಹೆಚ್ಚುತ್ತಾ ಹೋಗುತ್ತಿದೆ ಅಂದರೆ ನಮ್ಮ ದೇಶದ ಜನಸಂಖ್ಯೆ 1901ರಲ್ಲಿ 23.84 ಕೋಟಿ ಇದ್ದದ್ದು, 1921ರಲ್ಲಿ 25.13 ಕೋಟಿ, 1931ರಲ್ಲಿ 27.89 ಕೋಟಿ, 1951ರಲ್ಲಿ 36.10 ಕೋಟಿ, 1961ರಲ್ಲಿ 43.92 ಕೋಟಿ, 1971ರಲ್ಲಿ 54.82 ಕೋಟಿ, 1981ರಲ್ಲಿ 58.38 ಕೋಟಿ, 1991ರಲ್ಲಿ 84.82 ಕೋಟಿಯಾಗಿದ್ದು 2001ರ ಜನಗಣತಿಯ ಪ್ರಕಾರ ನಮ್ಮ ದೇಶದ ಜನಸಂಖ್ಯೆ 102 ಕೋಟಿ. ಆದರೀಗ ಅದು 2011ರ ಜನಗಣತಿಯ ಪ್ರಕಾರ 121 ಕೋಟಿ. ಹತ್ತು ವರ್ಷದಲ್ಲಿಯೇ ತುಸು ಹೆಚ್ಚು ಕಡಿಮೆ ಇಪ್ಪತ್ತು ಕೋಟಿಯಷ್ಟು ಹೆಚ್ಚಿದರೆ ಬರಲಿರುವ ದಶಕಗಳಲ್ಲಿ ಜನಸಂಖ್ಯೆ ಯಾವ ಪ್ರಮಾಣದಲ್ಲಿ ಹೆಚ್ಚಬಹುದೆಂಬುದರ ಅರಿವು ಯಾರಿಗಾದರೂ ಅರ್ಥವಾಗುತ್ತದೆ. 2024 ರ ವೇಳೆಗೆ ವಿಶ್ವದಲ್ಲೇ ನಂಬರ್ ಒನ್ ಸ್ಥಾನಗಳಿಸಿರುವ ಚೀನಾ ದೇಶದ ಜನಸಂಖ್ಯೆಯನ್ನು ಮೀರಿ ನಮ್ಮ ದೇಶದ ಜನಸಂಖ್ಯೆ ಏರಿಕೆಯಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

2050ರ ಹೊತ್ತಿಗೆ ವಿಶ್ವಜನಸಂಖ್ಯೆಯೂ ಏರಿಕೆಯಾಗಿ ಈಗಿರುವ 700 ಕೋಟಿ ಜನಸಂಖ್ಯೆಗೆ 3.5 ಶತಕೋಟಿ ಜನ ಸೇರುತ್ತಾರೆಂದೂ ಅಂದಾಜಿಸಲಾಗಿದೆ. ಅಲ್ಲಿಗೆ ಪ್ರಪಂಚದ ಜನಸಂಖ್ಯೆ 1000 ಕೋಟಿ ಮೀರುತ್ತದೆ. ಇದರಿಂದಾಗಿ ಜನಜೀವನದ ಮೂಲಭೂತ ಸೌಲಭ್ಯಗಳು ಸೇರಿದಂತೆ ಎಲ್ಲದರ ಮೇಲೂ ಹೊಡೆತ ಬೀಳಲಿದ್ದು ಜೀವನಾಧಾರವೂ ಅತಿಮುಖ್ಯವೂ ಆದ ಜಲಮೂಲಕ್ಕೆ ಸ್ವಲ್ಪ ಹೆಚ್ಚಿನ ಹೊಡೆತವೇ ಬೀಳುತ್ತದೆ. ಏಕೆಂದರೆ ಜನಸಂಖ್ಯಾ ಪ್ರವಾಹ ಏರುತ್ತಿದೆ ಎಂದರೆ ನೀರಿನ ಬಳಕೆ ಹೆಚ್ಚುತ್ತಿದೆ ಎಂದೇ ಅರ್ಥ. ಇದು ಜಲಮೂಲದ ಮೇಲಿನಷ್ಟೇ ನೈಸರ್ಗಿಕ ವ್ಯವಸ್ಥೆಯ ಮೇಲೂ ತೀವ್ರ ಪರಿಣಾಮ ಬೀರುತ್ತದೆ. ನೀರನ್ನು ಮಾನವನು ನೇರವಾಗಿ ಬಳಕೆ ಮಾಡುತ್ತಿರುವುದರಿಂದ ಮತ್ತು ಬೇಸಾಯಕ್ಕಾಗಿ ಅಂತರ್ಜಲವನ್ನು ಬಳಸಿಕೊಳ್ಳುತ್ತಿರುವುದರಿಂದ ಜನಸಂಖ್ಯಾ ಸ್ಫೋಟದಿಂದ ವಿಶ್ವದ ಮುಖ್ಯ ಜಲಕುಹರ (ನೀರ್ಪೊಟರೆ) ಗಳು ಜನಸಂಖ್ಯಾ ಏರಿಕೆಯ ವೇಗದಲ್ಲೇ ಕ್ರಮೇಣ


Downloaded From:www.kpscvaani.com

ಬತ್ತಿಹೋಗುತ್ತವೆ. ಸದ್ಯಕ್ಕೆ ಜಗತ್ತಿನಾದ್ಯಂತ ಲಕ್ಷಾಂತರ ಪಂಪುಗಳು ಅಂತರ್ಜಲ ಎತ್ತುವ ಕಾರ್ಯದಲ್ಲಿ ತೊಡಗಿವೆ. ಜನಸಂಖ್ಯಾ ದೈತ್ಯ ದೇಶಗಳೆಂದೇ ಹೆಸರಾಗಿರುವ ಚೀನಾ ಮತ್ತು ಭಾರತದಂಥ ದೇಶಗಳಲ್ಲಿ ತಡೆಯಲಸಾಧ್ಯವಾದ ವೇಗದಲ್ಲಿ ಅಂತರ್ಜಲವನ್ನು ತೆಗೆದು ನೀರಾವರಿಗಾಗಿ ಬಳಸಲಾಗುತ್ತಿದೆ. ಮೆಕ್ಸಿಕೊ ನಗರ, ಬ್ಯಾಂಕಾಕ್, ಮನಿಲಾ, ಬೀಜಿಂಗ್, ಮದ್ರಾಸ್ ಮತ್ತು ಶಾಂಘೈ ಇವುಗಳೆಲ್ಲ 10 ರಿಂದ 50 ಮೀಟರ್ ಜಲಕುಹರ ಬತ್ತುವಿಕೆಯಿಂದ ಬಳಲುತ್ತಿರುವ ಪಟ್ಟಣಗಳು. ಇದಕ್ಕೆ ಕಾರಣವೇ ಜನಸಂಖ್ಯಾ ಸ್ಫೋಟ.

ನಮ್ಮ ಭಾರತ ದೇಶದಲ್ಲಿ ಜನಸಂಖ್ಯೆ ಹೆಚ್ಚಳಕ್ಕೆ ಅನಕ್ಷರತೆ, ಅಜ್ಞಾನ, ಮೂಢನಂಬಿಕೆ, ಬಹುಪತ್ನಿತ್ವ, ಅತಿ ಸಂತಾನಾಪೇಕ್ಷೆ, ಶಿಶು ಮರಣ, ವ್ಯಭಿಚಾರ, ಬಾಲ್ಯ ವಿವಾಹ, ಪುನರ್ವಿವಾಹಗಳು, ಧಾರ್ಮಿಕ ನಂಬಿಕೆಗಳು ಸೇರಿದಂತೆ ಅನೇಕ ಕಾರಣಗಳುಂಟು. ಇವುಗಳಲ್ಲಿ ಗಂಡು ಮಗುವೇ ಬೇಕೆಂಬ ಬಯಕೆಯೂ ಒಂದು ಮುಖ್ಯ ಕಾರಣ. ಹಳ್ಳಿಯ ಜನರಿರಲಿ, ನಗರದ ಜನರು ಕೂಡ ಇದೇ ಮನೋಭಾವದವರೇ ಹೆಚ್ಚು. ನೂರಾರು ವಿದ್ಯಾರ್ಥಿಗಳಿಗೆ ಪಾಠ ಹೇಳುವ ಶಿಕ್ಷಕರಿಂದ ಹಿಡಿದು ಡಾಕ್ಟರ್, ಇಂಜಿನಿಯರ್, ವಿಜ್ಞಾನಿ, ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಹಾಗೂ ಮಂತ್ರಿ ಮಹೋದಯರುಗಳ ತನಕ ಅತ್ಯುನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೇ ಗಂಡು ಸಂತಾನಕ್ಕಾಗಿ ಹಂಬಲಿಸುತ್ತಾರೆ. ಒಂದು ಗಂಡು ಮಗುವಿನ ನಿರೀಕ್ಷೆಯಲ್ಲಿ ಹತ್ತಾರು ಹೆಣ್ಣು ಮಕ್ಕಳಿಗೆ ಜನ್ಮ ನೀಡಿರುವವರು ನಮ್ಮಲ್ಲಿ ಬೇಕಾದಷ್ಟು ಮಂದಿ ಇದ್ದಾರೆ. ಹೆಂಡತಿ ಎಂದರೆ ಮಕ್ಕಳನ್ನು ಹೆರುವ ಯಂತ್ರವೆಂದೇ ಭಾವಿಸಿರುವ ಮಹಾನುಭಾವರು ನಮ್ಮಲ್ಲಿ ಹೇರಳವಾಗಿದ್ದಾರೆ. ಪುತ್ರ ಸಂತಾನ ಮೋಕ್ಷಕ್ಕೆ ಮಾರ್ಗವೆಂಬ ಮೂಢನಂಬಿಕೆಗೆ ದಾಸರಾಗಿರುವ ಇಂಥವರಿಂದ ಜನಸಂಖ್ಯೆ ಹೆಚ್ಚುತ್ತಲೇ ಇದೆ. ದುರಂತವೆಂದರೆ ಬಹಳ ಕಡೆ ಹೆಂಡತಿಯರೂ ಕೂಡ ತಾವೂ ಸಹ ಒಂದು ಹೆಣ್ಣೆಂಬುದನ್ನು ಮರೆತು ಗಂಡನ ಮೌಢ್ಯಕ್ಕೆ ನೀರೆರೆದು ಗಂಡು ಮಗುವಿಗಾಗಿ ಕನವರಿಸುತ್ತಾರೆ. ಇಷ್ಟೇ ಅಲ್ಲದೆ ಲಿಂಗ ಪರೀಕ್ಷೆ ಮಾಡಿಸಿ ಹೆಣ್ಣು ಮಗುವಿನ ಭ್ರೂಣ ಹತ್ಯೆಯನ್ನು ಮಾಡಿಸುತ್ತಾರೆಂದರೆ ಇದೆಂಥಾ ವಿಪರ್ಯಾಸ ಅಲ್ಲವೇ? ಇದಕ್ಕಿಂತ ಅಮಾನವೀಯ ಕೆಲಸ ಮತ್ತೊಂದುಂಟೆ?

ನಾವು ಯಾವ ಕಾಲದಲ್ಲಿದ್ದೇವೆಂಬುದರ ಪರಿವೆಯೇ ಇಲ್ಲದೆ ಇವತ್ತು ಬಹುತೇಕ ಮಂದಿ ಇನ್ನೂ ಪುರಾತನ ಕಾಲದ ಕಂದಾಚಾರದ ಕಕ್ಷೆಯಲ್ಲೇ ಸುತ್ತುತ್ತಾ ಅದೇ ರೀತಿ ನಡೆದುಕೊಳ್ಳುತ್ತಾರೆ. ಇಪ್ಪತ್ತೊಂದನೇ ಶತಮಾನದ ನವನಾಗರಿಕತೆಯ ಆಧುನಿಕ ಕಾಲಘಟ್ಟದಲ್ಲೂ ಹೆಣ್ಣು–ಗಂಡುಗಳೆಂಬ ಬೇಧ ಮಾಡುತ್ತಾ ಪುತ್ರ ಸಂತಾನಕ್ಕೆ ಪ್ರಥಮಾದ್ಯತೆ ನೀಡುತ್ತಾರೆ. ಹೀಗಾಗಿ ಹೆಣ್ಣು ಮಗುವಿನ ಬಗ್ಗೆ ತಾತ್ಸಾರ ಮನೋಭಾವ ಬೆಳೆಯುತ್ತಿದೆ. "ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವಿರಿ ಕಣ್ಣು ಕಾಣದ ಗಾವಿಲರೆ" ಎಂಬ ಸಂಚಿ ಹೊನ್ನಮ್ಮಳ ಸಾಂಗತ್ಯದ ಸಾಲುಗಳಂತೆ ಕಣ್ಣಿದ್ದೂ ಕುರುಡರಾಗಿ ವರ್ತಿಸುತ್ತಾರೆ. "ನಿಮ್ಮನ್ನು ಹಡೆದ ತಾಯಿ ಪೆಣ್ಣಲ್ಲವೇ?" ಎಂಬ ಸಂಚಿ ಹೊನ್ನಮ್ಮಳ ಅದೇ ಸಾಂಗತ್ಯದ ಮುಂದಿನ ಇದೊಂದು ಸಾಲವನ್ನು ಅರಿತುಕೊಂಡರೆ ಸಾಕು ಪುತ್ರ ವ್ಯಾಮೋಹದ ಹುಚ್ಚು ಬಿಟ್ಟು ಹೋದೀತು, ಜನಸಂಖ್ಯಾ ಹೆಚ್ಚಳಕ್ಕೂ ಕಡಿವಾಣ ಬಿದ್ದೀತು.

ಹೆಣ್ಣು ಅಬಲೆ ಎಂಬ ಮಾತು ಹಿಂದಿನ ಕಾಲಕ್ಕೇ ಮುಗಿದು ಹೋದ ಮಾತಾಯಿತು. ಇಂದು ಹೆಣ್ಣು ಎಲ್ಲಾ ಕ್ಷೇತ್ರಗಳಲ್ಲೂ ಪುರುಷನಿಗಿಂತಲೂ ಒಂದು ಹೆಜ್ಜೆ ಮುಂದಿದ್ದು ತಾನು ಅಬಲೆಯಲ್ಲ ಸಬಲೆ ಎಂದು ನಿರೂಪಿಸುತ್ತಿರುವ ನಿದರ್ಶನಗಳು ನಮ್ಮ ಕಣ್ಮುಂದೆಯೇ ಸಾವಿರ ಸಾವಿರ ಇವೆ. ಮಹಿಳೆಯರು ಹೆಜ್ಜೆ ಹಾಕದ ಯಾವುದಾದರೂ ಕ್ಷೇತ್ರ ಇಂದು ನಮ್ಮಲ್ಲಿದೆಯೇ? ಎಲ್ಲೆಲ್ಲೂ ಮಹಿಳೆ ಮಹೋನ್ನತಳಾಗಿಯೇ ಮೆರೆಯುತ್ತಿದ್ದಾಳೆ. ಆದರೂ ಹೆಣ್ಣೆಂದರೆ ಕೇವಲವಾಗಿ ಕಾಣುವ ಪರಿ ನಮ್ಮಲ್ಲಿನ್ನೂ ಬಿಟ್ಟಿಲ್ಲ. ಇತ್ತೀಚಿನ ವರ್ಷಗಳಲ್ಲಿ ಇದು ಸ್ವಲ್ಪ ಕಡಿಮೆಯಾಗಿದೆಯಷ್ಟೆ. ಅದೂ ನಗರ ಪ್ರದೇಶಗಳಲ್ಲಿ ಮಾತ್ರ. ವೇದಗಳ ಕಾಲದಿಂದಲೂ ಸ್ತ್ರೀಯರು ಉನ್ನತ ಸ್ಥಾನ ಅಲಂಕರಿಸಿರುವ ಮತ್ತು ಉನ್ನತ ಸಾಧನೆಗೈದಿರುವ ಅನೇಕ ಉದಾಹರಣೆಗಳಿವೆ. ಈಗಂತೂ ಸ್ತ್ರೀಯರು ಪಡೆಯದ ಶಿಕ್ಷಣವಿಲ್ಲ. ಅವರು ಮಾಡದ ಕೆಲಸಗಳಿಲ್ಲ, ಅವರಿಂದ ಸಾಧ್ಯವಾಗದ ಸಾಧನೆಗಳು ಇಲ್ಲವೇ ಇಲ್ಲ. ಪೆಪ್ಸಿ ಕಂಪನಿಯ ಇಂದ್ರಾ ನೂಯಿ, ಬಯೋ ಟೆಕ್‌ನ ಕಿರಣ್ ಮುಜೆಂದರ್ ಷಾ, ಪೊಲೀಸ್ ಅಧಿಕಾರಿ ಕಿರಣ್‌ಬೇಡಿ, ಗಗನಯಾನಿ ಸುನೀತಾ ವಿಲಿಯಮ್ಸ್, ಪರಿಸರವಾದಿ ವಂದನಾ ಶಿವ, ಖ್ಯಾತ ಲೇಖಕಿ, ಉದ್ಯಮಿ ಸುಧಾಮೂರ್ತಿ, ದೇಶದ ಮೊದಲ ರಾಷ್ಟ್ರಪತಿ ಪ್ರತಿಭಾ ಪಾಟೀಲ್...... ಹೀಗೆ ಹೇಳುತ್ತಾ ಹೋದರೆ ದೇಶದ ತುಂಬಾ, ವಿಶ್ವದ ತುಂಬಾ ಮಹಾನ್ ಸಾಧಕಿಯರ ದೊಡ್ಡ ಪಟ್ಟಿಯೇ ಆಗುತ್ತದೆ. ಇವರುಗಳೆಲ್ಲಾ ಯಾವ ಪುರುಷರಿಗಿಂತ ಕಮ್ಮಿ ಇದ್ದಾರೆ? ನಿಜ ಹೇಳಬೇಕೆಂದರೆ ಪುರುಷನಿಂದಾಗದ ಅದೆಷ್ಟೋ ಸಾಧನೆಗಳನ್ನು ಈ ಸ್ತ್ರೀ ಶಕ್ತಿಗಳು ಮಾಡಿ ತೋರಿಸಿದ್ದಾರೆ. ಹೀಗಿದ್ದೂ ಸಹ ಹೆಣ್ಣಿನ ಕುರಿತು ಕೀಳರಿಮೆ ಏಕೆ? ಗಂಡು ಮಗು ಬೇಕೇಬೇಕು ಎಂಬ ಧೋರಣೆ ಸಂಪೂರ್ಣ ಬದಲಾಗಿ ಗಂಡಿರಲಿ, ಹೆಣ್ಣಿರಲಿ ಬಾಳು ಬೆಳಗಲು ಮಗುವೊಂದಿರಲಿ ಎಂಬ ಮನೋಭಾವ ಎಲ್ಲರದ್ದೂ ಆಗಬೇಕು. ಆಗ ಒಂದಿಷ್ಟಾದರೂ ಜನಸಂಖ್ಯೆ ನಿಯಂತ್ರಣವಾದೀತು. ಇದರಿಂದ ಕುಟುಂಬಕ್ಕೂ ಕ್ಷೇಮ, ದೇಶಕ್ಕೂ ಕ್ಷೇಮ, ವಿಶ್ವಕ್ಕೂ ಕ್ಷೇಮ.

ಇಂದು ಜನಸಂಖ್ಯಾ ಹೆಚ್ಚಳದ ವೇಗ ವಿಶ್ವವನ್ನೇ ಕಾಡುತ್ತಿದ್ದು ಇದನ್ನು ಕಡಿಮೆಗೊಳಿಸುವಲ್ಲಿ ಎಲ್ಲ ದೇಶಗಳಲ್ಲೂ ಪ್ರಯತ್ನ ನಡೆಯುತ್ತಿದೆ. ಅದರಲ್ಲೂ ವಿಶೇಷವಾಗಿ ಚೀನಾ ಮತ್ತು ಭಾರತ ದೇಶಗಳಲ್ಲಿ ಜನಸಂಖ್ಯೆಯ ಬಳುವಳಿಯಾದ ಬಡತನ ತಗ್ಗಿಸುವ ಪ್ರಕ್ರಿಯೆ ಭರದಿಂದ ಸಾಗಿದ್ದು ಇದರೊಡನೆ ಜನಸಂಖ್ಯೆ ನಿಯಂತ್ರಿಸುವ ಕಾರ್ಯವೂ ಅಷ್ಟೇ ವೇಗವಾಗಿ ನಡೆಯುತ್ತಿದೆ. ಈ ಕಾರ್ಯಕ್ಕೆ ಪ್ರತಿಯೊಬ್ಬ ಪ್ರಜೆಯು ಸಹಕಾರ ನೀಡುತ್ತೇವೆಂಬ ಪ್ರತಿಜ್ಞೆಯನ್ನು ಇಂದೇ ಮಾಡಬೇಕಾಗಿದೆ.

ಜನಸಂಖ್ಯಾ ಸ್ಫೋಟವು ನೇರವಾಗಿ ದೇಶದ ಆರ್ಥಿಕತೆಯ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ಜನರಿಗೆ ಸರಿಯಾದ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗದ ಪರಿಸ್ಥಿತಿ ತಲೆದೋರಬಹುದು. ಆದ್ದರಿಂದ ಪ್ರಜ್ಞಾವಂತ ನಾಗರೀಕರೆಲ್ಲರೂ ಜನಸಂಖ್ಯೆ ಏರಿಕೆಗೆ ಕಡಿವಾಣ ಹಾಕಬೇಕಿದೆ. ■


Downloaded From:www.kpscvaani.com



# ದನದ ಸಗಣಿಯಿಂದ ಆಟದ ಬೊಂಬೆಗಳು

**ದನದ ಸಗಣಿಯಿಂದ ಪರಿಸರ ಪೂರಕ ಬೊಂಬೆಗಳನ್ನು ತಯಾರಿಸುವ ಅಪ್ಪಟ ಪ್ರಾಚೀನ ಕಲೆಯಲ್ಲಿ ತೊಡಗಿರುವ ಕೊಪ್ಪಳದ ರುಕ್ಮಿಣಿಬಾಯಿ ಚಿತ್ರಗಾರ.**

ಅನಿತಾ ಕುಲಕರ್ಣಿ

ಸೂರ್ಯ ನೆತ್ತಿಗೇರುವ ಸಮಯಕ್ಕೆ ಗೋಮಾಳದಲ್ಲಿ, ಇಲ್ಲವೆ ದನಗಳು ತಿರುಗಾಡುವ ಜಾಗೆಯಲ್ಲಿ ನಡು ಬಾಗಿದ ಅಜ್ಜಿ ತಲೆಯ ಮೇಲೆ ಬುಟ್ಟಿ ಹೊತ್ತುಕೊಂಡು ಸಗಣಿ ಹುಡುಕುತ್ತಾ ಬರುತ್ತಾಳೆ. ಆಗ ತಾನೆ ಅಲ್ಲಲ್ಲಿ ಬಿದ್ದಿದ್ದ ದನಗಳ ಸಗಣಿಯನ್ನು ಬಳೆದುಕೊಂಡು ಬುಟ್ಟಿಗೆ ಹಾಕಿಕೊಳ್ಳುತ್ತಾಳೆ, ನಿತ್ಯ ಅಜ್ಜಿಯ ಈ ಕಾರ್ಯ ಕಂಡಿರುವ ಜನರು ಅಲ್ಲಲ್ಲಿ ಬಿದ್ದಿರುವ ಸಗಣಿಯನ್ನು ಕೈ ಮಾಡಿ ತೋರುತ್ತಾರೆ. ಜನರು ಕೈ ತೋರದತ್ತ ಈ ಅಜ್ಜಿ ಬೊಚ್ಚು ಬಾಯಿಯಲ್ಲೇ ಹಲ್ಲು ಗಿಂಜುತ್ತಾ ಹೋಗಿ ಸಗಣಿ ಬಳಿದುಕೊಂಡು ಬುಟ್ಟಿಯಲ್ಲಿ ಹಾಕಿಕೊಳ್ಳುತ್ತಾಳೆ. ಇನ್ನೇನು ಬಹುತೇಕ ಜಾನುವಾರುಗಳು ಜಮೀನಿಗೆ ಹೋಗಿವೆ ಎಂಬ ಹೊತ್ತಿಗೆ ಅಜ್ಜಿಯ ಬುಟ್ಟಿಯೂ ತುಂಬಿರುತ್ತದೆ. ಸಗಣಿ ತುಂಬಿದ್ದ ಬುಟ್ಟಿ ಹೊತ್ತು ಬರುವ ಅಜ್ಜಿಯನ್ನು ಕಂಡ ಸೊಸೆ ಹಸನ್ಮುಖಿಯಾಗುತ್ತಾಳೆ. 'ಇವತ್ತು ಕೈತುಂಬ ಕೆಲಸ ಮಾಡಲೇನು ಬಡತನವಿಲ್ಲ' ಎನ್ನುತ್ತಾ ಭಾರವಾಗಿದ್ದ ಬುಟ್ಟಿಯನ್ನು ಹಗುರ ಮನಸ್ಸಿನಿಂದ ಕೆಳಗಿಳಿಸಿಕೊಳ್ಳುತ್ತಾಳೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿಯ 85ರ ವಯೋಮಾನದ ರುಕ್ಮಿಣಿಬಾಯಿ ಚಿತ್ರಗಾರ ಈ ರೀತಿ ಸಗಣಿ ಸಂಗ್ರಹ ಮಾಡಿಕೊಂಡು ಬರುತ್ತಿರುವುದು ಜಮೀನಿಗೆ



Downloaded From:www.kpscvaani.com

ಹಾಕುವುದಕ್ಕಾಗಿ ಅಲ್ಲ, ಸಂಗ್ರಹಿಸಲು ಇವರೇನೂ ಸಾವಯವ ಕೃಷಿಕರೂ ಅಲ್ಲ, ಇನ್ನು ಬೆರಣಿ ತಯಾರಿಸಿ ಉರುವಲು ಅಥವಾ ಮಾರಾಟ ಮಾಡುವುದಕ್ಕೂ ಅಲ್ಲ, ಅವರು ಹೀಗೆ ಸಗಣಿ ತರುತ್ತಿರುವುದು ಆಕರ್ಷಕ ಬೊಂಬೆ ತಯಾರಿಸಲು ಎಂದರೆ ಆಶ್ಚರ್ಯವಾಗುತ್ತದೆಯಲ್ಲ.



ಪ್ಲಾಸ್ಟಿಕ್‌ನಲ್ಲಿ, ಕಟ್ಟಿಗೆಯಲ್ಲಿ, ಕಲ್ಲಿನಲ್ಲಿ, ಮಣ್ಣಿನಲ್ಲಿ, ಸಾಬೂನಿನಲ್ಲಿ, ಮೇಣದಲ್ಲಿ... ಹೀಗೆ ತರಾವರಿ ವಸ್ತುಗಳಲ್ಲಿ ಬೊಂಬೆ ಮಾಡುವುದನ್ನು ನೋಡಿದ್ದೇವೆ. ಆದರೆ ಜಾನುವಾರುಗಳ ಸಗಣಿಯಲ್ಲೂ ಬೊಂಬೆ ಮಾಡುವುದೆಂದರೆ ಬಹುಶಃ ಎಲ್ಲೂ ನೋಡಿರಲಿಕ್ಕಿಲ್ಲ. ಕುಷ್ಟಗಿ ಹಳೆಬಜಾರ್‌ನಲ್ಲಿರುವ ಜ್ಯೋತಿ ಚಿತ್ರಗಾರವರ ಮನೆಯಲ್ಲಿ ಅಪ್ಪಟ ಪ್ರಾಚೀನ ಕಲೆ ಹಾಗೂ ಪರಿಸರ ಪೂರಕ ಎನಿಸುವ ಸಗಣಿಯಿಂದ ಮಾಡಿದ ತರಾವರಿ ಬೊಂಬೆಗಳು ಮೂಟೆಗಟ್ಟಲೇ ತುಂಬಿರುವುದು ಕಾಣುತ್ತದೆ.

ಜ್ಯೋತಿ ಚಿತ್ರಗಾರ ಹಾಗೂ ಅವರ ಅತ್ತೆ ರುಕ್ಮಿಣಿಬಾಯಿ ಕೇವಲ ಅಲಂಕಾರಕ್ಕೆಂದಾಗಲಿ, ಸಗಣಿಯಲ್ಲೂ ಬೊಂಬೆ ಮಾಡಿ ಸೈ ಎನಿಸಿಕೊಳ್ಳಬೇಕೆಂದಾಗಲಿ, ನಿನ್ನೆ ಮೊನ್ನೆಯಿಂದಾಗಲಿ ಸಗಣಿಯಲ್ಲಿ ಬೊಂಬೆ ಮಾಡುತ್ತಿಲ್ಲ. ಸಗಣಿಯೇ ಅವರಿಗೆ ಬದುಕು ನೀಡಿದೆ, ಅವರ ಖಾಲಿ ಕೈಗೆ ಕೆಲಸ ನೀಡಿ ದುಡಿಮೆಗೆ ಹಚ್ಚಿದೆ, ಪತಿಯನ್ನು ಕಳೆದುಕೊಂಡ ಎರಡು ಮಕ್ಕಳ ತಾಯಿ ಜ್ಯೋತಿ ಹಾಗೂ ವೃದ್ಧೆ ಅತ್ತೆ ಇರುವ ಈ ಕುಟುಂಬಕ್ಕೆ ಸಗಣಿ ಬೊಂಬೆಯೇ ಜೀವನಾಧಾರವೂ ಆಗಿದೆ.

**ಪುರಾತನ ಕಲೆ:** ಕಲಾವಿದ ಯಾವಾಗ ಗೊಂಬೆ ಮಾಡುವುದನ್ನು ಕಲಿತುಕೊಂಡನೋ ಆಗಿನಿಂದಲೂ ಅರಲು ಹಾಗೂ ಸಗಣಿಯಿಂದ ಬೊಂಬೆಗಳನ್ನು ಮಾಡುವುದು ಆರಂಭವಾಯಿತು. ಈ ಹಿಂದಿನ ದಿನಗಳಲ್ಲಿ ಸಾಮಾನ್ಯವಾಗಿ ವಿವಿಧ ಬೊಂಬೆಗಳನ್ನು ಸಗಣಿಯಲ್ಲಿ ಮಾಡಿಕೊಂಡು ಬರುತ್ತಿದ್ದ ಪುರಾತನ ಕಲೆ ಇದಾಗಿತ್ತು. ಆದರೆ ಕಾಲವೂ ಬದಲಾಯಿತು, ಬೊಂಬೆ ಕಲೆಗೆ ಆಧುನಿಕತೆಯ ಸ್ಪರ್ಶ ದೊರಕಿ ವಿವಿಧ ವಸ್ತುಗಳಲ್ಲಿ ವೈವಿಧ್ಯಮಯ ಬೊಂಬೆಗಳ ರಚನೆ ಆರಂಭವಾಯಿತು. ಅಲ್ಲಿಂದ ಈ ಸಗಣಿ ಬೊಂಬೆಗಳು ಜನಸಾಮಾನ್ಯರಿಗೆ ಬೇಡವಾದವು. ಕ್ರಮೇಣ ಹೀಗೆ ಬೊಂಬೆಗಳನ್ನು ತಯಾರಿಸುವುದ ಬಿಟ್ಟು ಬೇರೆ ಕಲೆಗೆ ಮೊರೆ ಹೋಗಿದ್ದರಿಂದ ಸಗಣಿ ಬೊಂಬೆಗಳು ಕ್ಷೀಣಿಸಿದವು.



ಈಗೇನಿದ್ದರೂ ಎಲ್ಲಿ ನೋಡಿದರಲ್ಲಿ ಪ್ಲಾಸ್ಟಿಕ್‌ನಿಂದ ತಯಾರಿಸಿದ ತರಾವರಿ ಬೊಂಬೆಗಳೇ ಎದ್ದು ಕಾಣುತ್ತವೆ. ಇನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್, ಬಟ್ಟೆಯಿಂದ ಮಾಡಿದ ಬೊಂಬೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಇಂತಹ ಹೈಟೆಕ್ ಬೊಂಬೆಗಳ ಮಧ್ಯೆ ಸಗಣಿ ಅಥವಾ ಕಟ್ಟಿಗೆಯಿಂದ ಮಾಡಿದ ಬೊಂಬೆಗಳನ್ನು ಕೊಳ್ಳುವವರು ವಿರಳ. ಆದಾಗ್ಯೂ ಇಂತಹ ಪೈಪೋಟಿ ದಿನಗಳಲ್ಲೂ ತಳ್ಳುಗಾಡಿಯಲ್ಲಿ ಇಟ್ಟುಕೊಂಡು ಹಳ್ಳಿ ಜಾತ್ರೆಗಳಲ್ಲಿ 'ಜೋರು ಧ್ವನಿಯಲ್ಲಿ ಸೆಗಣಿ ಬೊಂಬೆಗಳು ಬೇಕೇನ್ರಿ' ಎಂದು ಕೂಗುತ್ತಾ ಹೋಗುವುದನ್ನು ನೋಡಿದವರು 'ಅಬ್ಬಾ ಇಂತಹ ಕಂಪ್ಯೂಟರ್ ಯುಗದಲ್ಲೂ ಇನ್ನು ಸಗಣಿ ಬೊಂಬೆಗಳು ಉಳಿದುಕೊಂಡಿವೇಯೇ' ಎಂದು ಹುಬ್ಬೇರಿಸಬೇಕಾಗುತ್ತದೆ. ಅತ್ಯಂತ ಕಡಿಮೆ ಕಚ್ಚಾ ವಸ್ತುಗಳಿಂದ ತಯಾರಾಗುವ, ಕೈಯಲ್ಲಿ ಹಗುರವೆನಿಸುವ ಜೊತೆಗೆ ಬಡವರ ಕೈಗೆಟಕುವ ಬೆಲೆಯಲ್ಲಿ ಸಿಗುವ ಬೊಂಬೆಗಳೆಂದರೆ ಈ ಸಗಣಿ ಬೊಂಬೆಗಳೆ.



Downloaded From:www.kpscvaani.com

**ಬಂಡವಾಳ ಬಯಸದ ಕಚ್ಚಾವಸ್ತು:** ಈ ಬೊಂಬೆಗಳ ತಯಾರಿಕೆಗೆ ಬೇಕಾಗುವ ಮೂಲ ವಸ್ತು ಎಂದರೆ ದನಗಳ ಸಗಣಿ. ಜ್ಯೋತಿಯವರ ಮನೆಯಲ್ಲಿ ದನಕರುಗಳಿಲ್ಲ. ಹಾಗಂತ ಎಂದು ಸಗಣಿ ಬೊಂಬೆ ತಯಾರಿಕೆಗೆ ಅದು ಅಡ್ಡಿಯಾಗಿಲ್ಲ. ಅತ್ತೆ ನಿತ್ಯ ಬೆಳಗಿನ ಹಾಗೂ ಸಾಯಂಕಾಲದ ಸಮಯದಲ್ಲಿ ಬುಟ್ಟಿ ಹಿಡಿದುಕೊಂಡು ದನಕರುಗಳು ಅಲೆದಾಡುವ ಸ್ಥಳ, ಗೋಮಾಳಕ್ಕೆ ಹೋಗಿ ಅಲ್ಲಲ್ಲಿ ಬಿದ್ದಿರುವ ಸಗಣಿಯನ್ನು ಸಂಗ್ರಹಿಸಿಕೊಂಡು ಬರುತ್ತಾರೆ. ಅಲ್ಲದೇ ಪರಿಚಿತ ಕೃಷಿ ಕುಟುಂಬದವರಿಗೆ ಸಗಣಿ ನೀಡಲು ಕೇಳಿಕೊಂಡಿರುವುದರಿಂದ ಅಲ್ಲೂ ಸಹ ಸಂಗ್ರಹ ಮಾಡುತ್ತಾರೆ. ಸಗಣಿ ಜಿಗಟು ಬರುವಂತಾಗಲು ನೀರಿನಲ್ಲಿ ಕುದಿಸಿದ ಹುಣಸೆ ಬೀಜಗಳನ್ನು ಚಟ್ನಿಯಂತೆ ರುಬ್ಬಿ ಸಗಣಿಯಲ್ಲಿ ಮಿಶ್ರಣಮಾಡಿ ಕಿಚಡಿ ತರಹವೇ ಕಿವುಚಿ ಹದಕ್ಕೆ ತಂದುಕೊಳ್ಳುತ್ತಾರೆ.

ತಾವೇ ತಯಾರಿಸಿಕೊಂಡಿರುವ ವಿಧ-ವಿಧ ಆಕಾರದ ಕಟ್ಟಿಗೆಯ ಅಚ್ಚುಗಳಲ್ಲಿ ಸಗಣಿ ಮುದ್ದೆ ತುಂಬಿ ಅದರ ಮಧ್ಯದಲ್ಲಿ ಗೊಂಬೆಗೆ ಕೈ-ಕಾಲು, ಕತ್ತು, ಸೊಂಟ ಬರುವ ಜಾಗೆಯಲ್ಲಿ ಸಣ್ಣ ಸಣ್ಣ ಕಟ್ಟಿಗೆ ತುಂಡುಗಳನ್ನು ಒತ್ತುತ್ತಾರೆ. ಹೀಗೆ ವಿವಿಧ ಆಕಾರದಲ್ಲಿ ತಯಾರಾದ ಬೊಂಬೆಗಳನ್ನು ಹತ್ತಾರು ದಿವಸ ಬಿಸಿಲಿನಲ್ಲಿ ಒಣಗಿಸುತ್ತಾರೆ. ಈ ಕೆಲಸ ಸುಮಾರು ನಾಲ್ಕಾರು ವಾರ ನಿರಂತರವಾಗಿ ನಡೆಯುತ್ತದೆ. ಇದಾದ ನಂತರ ಹಳೆಯ ಬಟ್ಟೆಗಳನ್ನೋ... ಅಥವಾ ದರ್ಜಿಯ ಕಾಲಡಿಯಲ್ಲಿ ನಿರುಪಯುಕ್ತವಾಗಿ ಬಿದ್ದಿರುವ ತುಂಡು ಬಟ್ಟೆಗಳನ್ನೋ... ತಂದು ಉದ್ದುದ್ದವಾಗಿ ಕತ್ತರಿಸಿ ಅಂಟು ದ್ರವ್ಯದಲ್ಲಿ ಅದ್ದಿ ಸಗಣಿ ಬೊಂಬೆಯ ಸುತ್ತ ಸುತ್ತುತ್ತಾರೆ. ಹೀಗೆ ದಿನಕ್ಕೆ ಎಷ್ಟು ಬೊಂಬೆಗಳಿಗೆ ಸಾಧ್ಯವಾಗುತ್ತದೆಯೋ ಅಷ್ಟು ಬೊಂಬೆಗಳಿಗೆ ಬಟ್ಟೆ ಸುತ್ತಿ ಮತ್ತೆ ಒಂದು ದಿನ ಬಿಸಿಲಿನಲ್ಲಿ ಒಣಗಿಸುತ್ತಾರೆ. ಸಂಪೂರ್ಣ ಒಣಗಿದ ನಂತರ ಆಯಾ ಬೊಂಬೆಗಳಿಗೆ ಸೂಕ್ತವೆನಿಸುವಂತಹ ಬಣ್ಣ ನೀಡುತ್ತಾರೆ. ಈ ಎಲ್ಲ ಕೆಲಸ ಸಂಪೂರ್ಣಗೊಳ್ಳಲು ಸುಮಾರು ಒಂದು ತಿಂಗಳ ಕಾಲ ಬೇಕಾಗುತ್ತದೆ. ಈ ಅವಧಿಯಲ್ಲಿ ಏನಿಲ್ಲವೆಂದರೂ ಸಾವಿರಕ್ಕೂ ಹೆಚ್ಚು ಬೊಂಬೆಗಳು ಸಿದ್ಧವಾಗಿರುತ್ತವೆ.

ಇದರಲ್ಲಿ ಗೌರಿ-ಗಂಗೆ ಸೇರದಂತೆ ಹುಲಿ, ಮೇಕೆ, ಆಕಳು, ಸಿಂಹದಂತಹ ಕಾಡು ಪ್ರಾಣಿಗಳು, ಗಿಳಿ, ಗುಬ್ಬಿ, ಬೆಳ್ಳಕ್ಕಿಯಂತಹ ಬಾನಾಡಿ ಬೊಂಬೆಗಳು ರಚನೆಯಾಗಿ ಸಗಣಿಯಿಂದ ಮಾಡಿದ ಗೊಂಬೆಗಳು ಎಂದು ಗುರುತು ಹಿಡಿಯಲು ಸಾಧ್ಯವಾಗದಂತೆ ಫಿನಿಶಿಂಗ್ ಆಗಿರುತ್ತದೆ. ಕೈಯಲ್ಲಿ ಹಿಡಿದುಕೊಂಡಾಗಲೇ ಇವು ಸಗಣಿ ಬೊಂಬೆಗಳು ಎಂದು ಗುರುತು ಸಿಗುತ್ತದೆ ಅಷ್ಟೊಂದು ಅಚ್ಚುಕಟ್ಟಾಗಿರುತ್ತವೆ. ಆದರೆ ಈಗ ದನಗಳೂ ಕಡಿಮೆಯಾಗಿರುವುದರಿಂದ ಅವರಿಗೆ ಸಗಣಿ ದೊರಕುವುದು ಕಷ್ಟವಾಗಿದೆ ಎನ್ನುತ್ತಾರೆ.

**ಮಾರುಕಟ್ಟೆಯೇ ಇಲ್ಲ:** ಸದ್ಯ ದುಬಾರಿ ಹೈಟೆಕ್ ಬೊಂಬೆಗಳದೇ ದರ್ಬಾರು. ಇವರು ಕಷ್ಟಪಟ್ಟು ತಯಾರಿಸಿದ ಬೊಂಬೆಗಳನ್ನು ಸುತ್ತಮುತ್ತಲಿನ ಜಾತ್ರೆಗಳಲ್ಲಿ ಮಾರಾಟ ಮಾಡುತ್ತಾರೆ. ಪಟ್ಟಣದವಾಸಿಗರು ಸಗಣಿ ಬೊಂಬೆಗಳು ಎಂದು ಮೂಗು ಮುರಿಯುವುದೂ ಉಂಟು. ಆದರೆ ಗ್ರಾಮೀಣ ಪ್ರದೇಶದಿಂದ ಬಂದಂತಹ ರೈತಾಪಿ ಜನರು ಈಗಲೂ ಇಂತಹ ಬೊಂಬೆಗಳನ್ನು ಅಭಿಮಾನದಿಂದ ಖರೀದಿಸುತ್ತಾರೆ. ಅವರ ಈ ಅಭಿಮಾನವೇ ಇವರಿಗೆ ಒಂದು ಹೊತ್ತಿಗೆ ಅನ್ನ ಸಂಪಾದನೆಗೆ ಕಾರಣವಾಗಿದೆ ಎಂದು ಜ್ಯೋತಿ ಚಿತ್ರಗಾರ ಹೇಳುತ್ತಾರೆ.

ಉಳಿದೆಲ್ಲ ಬೊಂಬೆಗಳು ನೂರು, ಐವತ್ತು ರೂಪಾಯಿಗಳಿಗೆ ಮಾರಾಟವಾದರೆ ಈ ಸಗಣಿ ಬೊಂಬೆಗಳು ಮಾತ್ರ ಇಪ್ಪತ್ತೊ... ಮುವತ್ತು ರೂಪಾಯಿಗಳಿಗೆ ಜೋಡಿಯಂತೆ ಮಾರಾಟವಾಗುತ್ತವೆ. ಜಾತ್ರೆ ಮುಗಿಯುವ ದಿನಗಳು ಸಮೀಪವಾದಂತೆಲ್ಲಾ ಈ ಬೊಂಬೆಗಳ ಬೆಲೆಯೂ ಕಡಿಮೆಯಾಗುತ್ತದೆ. ಕಾರಣವೆಂದರೆ ಈ ಬೊಂಬೆಗಳನ್ನು ಹಾಗೇಯೇ ಇಟ್ಟರೆ ಪುಡಿಯಾಗಿ ಉದುರುವ ಇಲ್ಲವೆ ಬಿರುಕು ಬಿಡುವ ಸಾಧ್ಯತೆ ಇರುವುದರಿಂದ ಹೋದಷ್ಟು ಬೆಲೆಗೆ ಹೋಗಲಿ ಎಂದು ಬಿಕರಿ ಮಾಡಿ ಚಾಪೆ ಝಾಡಿಸಿಕೊಂಡು ಬರುತ್ತಾರೆ.

**ವಿವಿಧ ಹಬ್ಬದಲ್ಲಿ ವಿವಿಧ ಬೊಂಬೆಗಳು:** ಗಣೇಶ ಚೌತಿಯಲ್ಲಿ ಗಣೇಶನ ಮೂರ್ತಿ ಮಾಡುತ್ತಾರೆ. ಗಣೇಶ ಮೂರ್ತಿಗಳನ್ನು ಮಾಡಿ ಉಳಿದ ಮಣ್ಣಿನಲ್ಲಿಯೇ ಗೌರಿಯ ನೂರಾರು ಚಿಕ್ಕ ಮೂರ್ತಿಗಳು ತಯಾರಾಗುತ್ತವೆ. ಆ ಎಲ್ಲ ಹಸಿ ಮೂರ್ತಿಗಳು ಆರಿದ ನಂತರ ಗಣೇಶ ವಿಗ್ರಹಗಳಿಗೆ ಮೊದಲು ಬಣ್ಣವನ್ನು ಬಳಿದು ಉಳಿದ ಚೂರುಪಾರು ಬಣ್ಣದಿಂದಲೇ ಕಲಾತ್ಮಕವಾಗಿ ಬಣ್ಣ ನೀಡಿ ಗೌರಿಯರನ್ನು ಸಿದ್ಧಗೊಳಿಸುತ್ತಾರೆ.

ನಾಗರ ಚೌತಿಯಲ್ಲಿ ನಾಗ ಮೂರ್ತಿಗಳನ್ನು ಮಾಡಿ ಕೊಂಚ ಕಾಸು ಸಂಪಾದಿಸಿಕೊಳ್ಳುತ್ತಾರೆ. ಮಣ್ಣೆತ್ತಿನ ಅಮವಾಸ್ಯೆಯಲ್ಲಿ ಮಣ್ಣಿನ ಎತ್ತುಗಳನ್ನು ಮಾಡುತ್ತಾರೆ. ಒಟ್ಟಾರೆ ಒಂದೊಂದು ಹಬ್ಬಕ್ಕೂ ಒಂದೊಂದು ತರಹದ ಮೂರ್ತಿಗಳನ್ನು ಮಾಡುವುದರಿಂದ ಹೆಚ್ಚು ಕಡಿಮೆ ಹನ್ನೆರೆಡು ತಿಂಗಳ ಕಾಲ ಅವರ ಕೈಗಳು ಸಗಣಿಯನ್ನೇ ಹಿಡಿದಿರುತ್ತವೆ.

**ಪರಿಸರ ಪೂರಕ ಬೊಂಬೆಗಳು:** ಸುತ್ತ ಮುತ್ತ ಎಲ್ಲೆಲ್ಲಿ, ಯಾವಾಗ ಜಾತ್ರೆಗಳು ನಡೆಯುತ್ತವೆ ಎಂದು ಪಟ್ಟಿ ಮಾಡಿಕೊಳ್ಳುತ್ತಾರೆ. ಆ ಜಾತ್ರೆಗಳಿಗೆಂದೇ ಸಗಣಿಯಿಂದ ಮಾಡಿದ ಬೊಂಬೆಗಳು ಹಾಗೂ ಮಕ್ಕಳ ವಿವಿಧ ಆಟಿಕೆಗಳನ್ನು ತಯಾರಿಸಿಕೊಂಡು ಬುಟ್ಟಿ ಹೊತ್ತು ಜಾತ್ರೆಗೆ ತೆರಳುತ್ತಾರೆ.

ಕೆಲವು ದಿನಗಳವರೆಗೆ ಮಕ್ಕಳ ಕೈಯಲ್ಲಿ ಆಡಿ ನಂತರ ಮಣ್ಣಿನಲ್ಲಿ ಮಣ್ಣಾಗುವ ಈ ಬೊಂಬೆಗಳು ಹಿಂದೆ ಗ್ರಾಮೀಣ ಪ್ರದೇಶದ ಜಾತ್ರೆಗಳಲ್ಲಿ ಈ ಸಗಣಿ ಬೊಂಬೆಗಳೇ ಹೆಚ್ಚಿನ ಪ್ರಮಾಣದಲ್ಲಿ ಕಾಣುತ್ತಿದ್ದವು. ಇಂದಿನ ತಂತ್ರಜ್ಞಾನದ ಜಗತ್ತಿನಲ್ಲಿ ದೊರೆಯುವ ಮೊಬೈಲ್, ಕಂಪ್ಯೂಟರ್, ಕಿರಿ-ಕಿರಿ ಎನಿಸುವ ಕೀಲಿಬೊಂಬೆಗಳಂತಹ ಯಾಂತ್ರಿಕೃತ ಬೊಂಬೆಗಳೇ ಈಗ ಹಳ್ಳಿ ಜಾತ್ರೆಗಳಲ್ಲೂ ಲಗ್ಗೆ ಇಟ್ಟಿವೆ. ಆದರೆ ಕೆಲವು ದಿನಗಳವರೆಗೇನೂ ಮಕ್ಕಳಿಗೆ ರಂಜನೆ ಒದಗಿಸುತ್ತವೆಯೇನೂ ನಿಜ ಆದರೆ ಮಣ್ಣಿನಲ್ಲಿ ಲೀನವಾಗದೇ ಸುತ್ತಲಿನ ಪರಿಸರದಲ್ಲಿಯೇ ಉಳಿದು, ಮಣ್ಣಿನಲ್ಲೂ ಕೊಳೆಯದೇ, ಸುಟ್ಟರೂ ಸುಡದೇ ಪರಿಸರ ಮಾಲಿನ್ಯಗೊಳಿಸುತ್ತಿವೆ. ಆದರೆ ಪರಿಸರ ಪೂರಕ ಎನಿಸುವ ಇಂತಹ ಸಗಣಿ ಬೊಂಬೆಗಳನ್ನು ಖರೀದಿಸಿದರೆ ಪರಿಸರಕ್ಕೂ ಹಾನಿ ಇಲ್ಲ, ಹಳೆಯ ಕಲೆಗೆ ಜೀವ ತುಂಬಿದಂತಾಗುತ್ತದೆ, ಎಲ್ಲದಕ್ಕಿಂತ ಮಿಗಿಲಾಗಿ ಇಂತಹ ಕಲೆಯನ್ನೇ ಜೀವಾಳವಾಗಿಸಿಕೊಂಡಿರುವ ಬಡ ಕುಟುಂಬಗಳಿಗೆ ಆಸರೆ ನೀಡಿದಂತಾಗುತ್ತದೆ.

ಜಾತ್ರೆಗಳಲ್ಲಿ ಇಂತಹ ಬೊಂಬೆಗಳೇನಾದರು ಕಂಡರೆ ಖಂಡಿತಾ ನಿಮ್ಮ ಮಕ್ಕಳಿಗೆ ಕೊಡಿಸಿ, ಅವರಿಗೆ ಸಗಣಿ ಬೊಂಬೆಯ ಪರಿಚಯ ಮಾಡಿಸಿ. ಇದರಿಂದ ಪರಿಸರ ಸ್ನೇಹಿ ಬೊಂಬೆ ತಯಾರಿಸುವವರಿಗೂ ಪ್ರೋತ್ಸಾಹ ನೀಡಿದಂತಾಗುತ್ತದೆ ಎನ್ನುವುದು ನನ್ನ ವಿನಂತಿ. ■



Downloaded From:www.kpscvaani.com



# ಸೊಪ್ಪಿನ ಬೆಟ್ಟದಲ್ಲಿ ಔಷಧೀಯ ವನ

ಗಣಪತಿ ಹಾಸ್ಪುರ

**ಮಲೆನಾಡಿನ ಕೃಷಿಕರೊಬ್ಬರು ತಮ್ಮ ಕೃಷಿಯ ಜೊತೆಗೆ ತೋಟದ ಸುತ್ತಮುತ್ತಲಿನಲ್ಲಿ ವೈವಿಧ್ಯಮಯ ಔಷಧ ವನವನ್ನು ಬೆಳೆಸಿದ್ದಾರೆ.**

ಗಣಪತಿ ಹಾಸ್ಪುರ

ಸಾಮಾನ್ಯವಾಗಿ ಮಲೆನಾಡಿನ ಅಡಿಕೆ ಬೆಳೆಗಾರರಿಗೆ ತೋಟದ ಅಕ್ಕ-ಪಕ್ಕದಲ್ಲಿ ಸೊಪ್ಪಿನ ಬೆಟ್ಟ ಹೇರಳವಾಗಿ ಇರುತ್ತದೆ. ಈ ಬೆಟ್ಟದಲ್ಲಿರುವ ಗಿಡ-ಮರಗಳ ಸೊಪ್ಪು-ಸದೆ-ಸೌದೆಗಳನ್ನು ಸದ್ಬಳಕೆ ಮಾಡಿಕೊಳ್ಳುವ ಅಡಿಕೆ ಬೆಳೆಗಾರರು ಆ ಬೆಟ್ಟದಲ್ಲಿ ಇನ್ನಷ್ಟು ಸಸ್ಯಗಳನ್ನು ಬೆಳೆಸಲು ಆಸಕ್ತಿ ವಹಿಸುವುದಿಲ್ಲ. ಆದರೆ ಇಲ್ಲೊಬ್ಬ ಕೃಷಿಕರೊಬ್ಬರು ತಮ್ಮ ಸೊಪ್ಪಿನ ಬೆಟ್ಟದಲ್ಲಿ ವೈವಿಧ್ಯಮಯ ಔಷಧೀಯ ಸಸ್ಯಗಳನ್ನು ನೆಟ್ಟು ವ್ಯವಸ್ಥಿತವಾಗಿ ಸಂರಕ್ಷಿಸಿ, ಅದನ್ನೀಗ 'ಪಾರಂಪಾರಿಕ ಔಷಧ ವನ'ವಾಗಿ ಬೆಳೆಸುತ್ತಿರುವುದು ವಿಶೇಷವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಹೀಪನಳ್ಳಿ ಸಮೀಪದ (ಹುಣಸೆಕೊಪ್ಪ ಗ್ರಾಮ ಪಂಚಾಯಿತಿಯ) ಅಡೇಮನೆಯ ಕೃಷಿಕ ಪ್ರಕಾಶ ಭಟ್ಟ ಅವರೇ ಸೊಪ್ಪಿನ ಬೆಟ್ಟದಲ್ಲಿ ಔಷಧೀಯ ಸಸ್ಯ ಬೆಳೆಸಿದ್ದಾರೆ. ಆ ಬೆಟ್ಟದಲ್ಲಿ ನೈಸರ್ಗಿಕವಾಗಿ ಬಲಿತು ನಿಂತ ವೈವಿಧ್ಯಮಯ ಬಲಿಷ್ಠ ಗಿಡ -ಮರಗಳನ್ನು ಉಳಿಸಿಕೊಂಡು, ಇರುವಂಥ ಖಾಲಿ ಜಾಗದಲ್ಲಿ ಜನ ಸಾಮಾನ್ಯರಿಂದ ದೂರವಾಗುತ್ತಿರುವ ಔಷಧೀಯ ಸಸ್ಯ, ಹಣ್ಣು- ಹಂಪಲು ಗಿಡ, ಗಡ್ಡೆ-ಗೆಣಸಿನ ಸಸ್ಯಗಳನ್ನು ತಮ್ಮದೇ ಕಲ್ಪನೆ, ವೈಜ್ಞಾನಿಕ ಪದ್ಧತಿಯಲ್ಲಿ ನೆಟ್ಟು ಬೆಳೆಸುತ್ತಾ ಇರುವುದು ಶ್ಲಾಘನೀಯ ಕಾರ್ಯವೆಂದರೂ ತಪ್ಪಾಗಲಾರದು.

### ಪ್ರೇರಣೆ ಬಂದಿದ್ದು ಹೇಗೆ?

ಅಡೇಮನೆಯ ಪ್ರಕಾಶ ಭಟ್ ಅವರು ಬಿ.ಎಸ್.ಸಿ. ಪದವೀಧರರು. ಶಿಕ್ಷಣ ಪಡೆದ ಮೇಲೆ ನೌಕರಿಗಾಗಿ ಅಲೆಯದೇ,



Downloaded From:www.kpscvaani.com




ಕೃಷಿ ಕಾಯಕದಲ್ಲಿಯೇ ತೊಡಗಿಕೊಳ್ಳಲು ಇಚ್ಛಿಸಿದರು. ಮನೆಯ ಹಿರಿಯರು ವ್ಯವಸ್ಥಿತವಾಗಿ ಸಾಗುವಳಿ ಮಾಡಿಕೊಂಡು ಬಂದ ಅಡಿಕೆ ತೋಟ ಹಾಗೂ ಭತ್ತ ಬೆಳೆಯುವ ಭೂಮಿಯು ಸಾಕಷ್ಟು ಇತ್ತು. ಅವನ್ನು ಈ ಕಾಲಕ್ಕೆ ತಕ್ಕಂತೆ ಸಾಗುವಳಿ ಮಾಡಿಕೊಂಡರೆ ತಮ್ಮ ಜೀವನಕ್ಕೇನು ತೊಂದರೆ ಆಗಲಾರದು ಎಂದು ಅನಿಸಿದ್ದರಿಂದ ಪ್ರಕಾಶ ಭಟ್‌ರು ಪದವಿ ಶಿಕ್ಷಣದ ಬಳಿಕ ಕೃಷಿ ಕಾಯಕಕ್ಕೆ ಹೆಗಲೊಡ್ಡಿದರು.

ಇರುವ ಮೂರು ಎಕರೆ ಅಡಿಕೆ ತೋಟ ಹಾಗೂ ಭತ್ತದ ಕೃಷಿಯನ್ನು ಸಾಂಪ್ರದಾಯಿಕ ಪದ್ಧತಿಯಲ್ಲಿ ಅಭಿವೃದ್ಧಿ ಪಡಿಸುತ್ತಿರುವ ಪ್ರಕಾಶ ಭಟ್ ಅವರಿಗೆ ಏನಾದರೊಂದು ಭಿನ್ನವಾದ ಕೃಷಿಯನ್ನು ಮಾಡಬೇಕೆಂಬ ಆಸೆ ಚಿಸಿಲೊಡೆದಿತ್ತು. ಆದ್ರೆ, ಏನು ಮಾಡಬೇಕು ಎಂಬುದೇ ಹೊಳೆಯುತ್ತಿರಲಿಲ್ಲ. ಒಮ್ಮೆ ಹೀಗೆಯೇ ನಾಲ್ಕಾರು ಸಮಾನ ಮನಸ್ಸಿನ ಕೃಷಿಕರೊಂದಿಗೆ ಮಾತನಾಡುವ ಸಮಯದಲ್ಲಿ ಸೊಪ್ಪಿನ ಬೆಟ್ಟದಲ್ಲಿ ಔಷಧಿ ಸಸ್ಯ, ಹಣ್ಣು– ಹಂಪಲಿನ ಗಿಡ, ಗಡ್ಡೆಯ ಸಸ್ಯ.... ಇತ್ಯಾದಿಗಳನ್ನು ಬೆಳೆಸಬಹುದು. ಈ ದಿನದಲ್ಲಿ ಅವುಗಳಿಗೆ ಒಳ್ಳೆಯ ಮಾರುಕಟ್ಟೆಯೂ ಇದೆ. ಉತ್ತಮ ಬೇಡಿಕೆಯೂ ಉಂಟು.... ಎನ್ನುವ ವಿಚಾರ ಪ್ರಸ್ತಾಪ ಆಗಿತ್ತು.

ಅದರ ಬಗ್ಗೆ ವಿಶೇಷ ಆಸಕ್ತಿ ತೋರಿದ ಇವರು, ಆ ಸಸ್ಯಗಳ ಬಗ್ಗೆ ಮಾಹಿತಿ ಕಲೆ ಹಾಕಲು ಆರಂಭಿಸಿದರು. ಔಷಧೀಯ ಸಸ್ಯಗಳನ್ನು ಬೆಳೆಸುತ್ತಿರುವ ಕೃಷಿಕರು ಯಾರಾದರು ಇರಬಹುದೇ ಎಂಬುದನ್ನು ಕಲೆಹಾಕಿದಾಗ ಸಾಗರದ ಮಂಚಾಲೆಯ ಪ್ರಕಾಶ್ ರಾವ್ ಹಾಗೂ ಶಾಂತಾರಾಮ ಹೆಗಡೆಯವರ ಸಾಹಸವೇ ಭಟ್‌ರ ಘನ ಕಾರ್ಯಕ್ಕೆ ಪ್ರೇರಣೆಯಾಗಿತ್ತು. ಆಮೇಲೆ ಅವರ ಮಾರ್ಗದರ್ಶನದಲ್ಲಿ ಅಡೇಮನೆಯ ಪ್ರಕಾಶ ಭಟ್ (ಸ್ಥಳೀಯವಾಗಿ ಪ್ರೀತಿಯಿಂದ ಕರೆಯಲ್ಪಡುವ ಪ್ರಕಾಶ ಬಾಬು....) ತಮ್ಮ ಸೊಪ್ಪಿನ ಬೆಟ್ಟದಲ್ಲಿ ತಮ್ಮ ಸಂಕಲ್ಪಿತ ಯೋಜನೆಯನ್ನು ಸಾಕಾರಗೊಳಿಸಲು ಅಣಿಯಾದರು.

**ಬೆಟ್ಟದಲ್ಲೀಗ ಸಸ್ಯಕಾಶಿ !**

ಪ್ರಕಾಶ ಭಟ್ ಅವರು ನಮ್ಮ ಹಿರಿಯರು ಉಳಿಸಿಕೊಂಡು ಬಂದ ಸೊಪ್ಪಿನ ಬೆಟ್ಟದಲ್ಲಿ ಬಲಿತ ಯಾವುದೇ ಮರಗಳನ್ನು ತೆಗೆಯಲಿಲ್ಲ. ವಿವಿಧ ಜಾತಿಯ ಗಿಡ–ಮರಗಳನ್ನು ಹಾಗೆಯೇ ಇಟ್ಟುಕೊಂಡು, ಇರುವಂತಹ ಖಾಲಿ ಜಾಗದಲ್ಲಿ ವಿವಿಧ ಔಷಧಿ ಗುಣವಿರುವ ಸಸ್ಯಗಳನ್ನು ಸುವ್ಯವಸ್ಥಿತವಾಗಿ ಯೋಜನೆ ಮಾಡಿಕೊಂಡೇ ನೆಟ್ಟರು. ಇವರು ಆತ್ಮೀಯರಿಂದ, ಅರಣ್ಯ ಇಲಾಖೆಯಿಂದ ಅಲ್ಲದೇ ಹೊರ ರಾಜ್ಯದಿಂದಲೂ ಗಿಡಗಳನ್ನು ತಂದು ನೆಟ್ಟಿದ್ದಾರೆ. 2013 ರಿಂದ ಆರಂಭವಾಗಿರುವ ಇವರ ವನದಲ್ಲಿ ಹಲವಾರು ವಿಭಿನ್ನ ಜಾತಿಯ ಔಷಧಿಯ ಸಸ್ಯಗಳು ಸ್ಥಾನ ಗಿಟ್ಟಿಸಿಕೊಂಡಿವೆ. ಅಂದರೆ – ನಾಗಸಂಪಿಗೆ, ಅರ್ಜುನ, ಉಪ್ಪಾಗೆ, ಮಾಫಿಯಾ, ಬಿಳಿ ಮುರುಗಲ, ಸಾಗವಾನಿ, ನೋನಿ, ಮರದ ಅರಿಶಿಣ, ಗಳಂಗ, ಮಧುನಾಶಿನಿ, ಅಶೋಕ, ದಾಲ್ಚಿನ್ನಿ, ವಾಟೆ, ಏಕನಾಯಕ, ಹಲಸು, ರಾಮಪತ್ರೆ, ದೇವದಾರ, ಸುರಗಿ, ಕಾಳು ಮೆಣಸು, ಚಿತ್ರಮೂಲ, ಅಗರ್‌ವುಡ್, ಬಿದಿರು, ಸರ್ಪಗಂಧಿ, ಉತ್ತರಾಣಿ, ವಾಯುವಿಲಂಗ, ಕದಂಬ, ಹಿಪ್ಪಲಿ, ಸರ್ವಸಾಂಬಾರ, ಶತಾವರಿ, ಲವಂಗ, ರಕ್ತ ಚಂದನ, ರಾಮಫಲ, ಅಗ್ನಿ ಬಳ್ಳಿ, ಕೆಂಡಸಂಪಿಗೆ, ಲಕ್ಷ್ಮಣ ಫಲ, ಅಂಕೋಲೆ ಗಿಡ, ಶಿವಣೆ, ಬಸ್ರೂರ, ಕಹಿಬೇವು, ಸೋಮವಾರ ಗಿಡ, ಕುಂಕು, ಅಮೃತ ಬಳ್ಳಿ, ಹೊಳೆದಾಲ್ಚಿನ್ನಿ, ಕಚೋರ.... ಹೀಗೆ ವೈವಿಧ್ಯಮಯ ಸಸ್ಯಗಳು ಇವರ ಸೊಪ್ಪಿನ ಬೆಟ್ಟದಲ್ಲಿವೆ.





Downloaded From:www.kpscvaani.com



ಪ್ರಕಾಶ ಬಾಬು ಅವರ ಸೊಪ್ಪಿನ ಬೆಟ್ಟದಲ್ಲಿ ಸಸ್ಯಕಾಶಿಯೇ ತುಂಬಿ ತುಳುಕಿದ್ದು, ತಮ್ಮ ವನಕ್ಕೆ "ಅಶೋಕ ವನ" ಎಂದು ಹೆಸರಿಟ್ಟಿದ್ದಾರೆ.

ನವಗ್ರಹ ವನಕ್ಕೂ ತಮ್ಮ ಅಶೋಕ ವನದಲ್ಲಿ ಸ್ಥಾನ ನೀಡಿರುವ ಪ್ರಕಾಶ ಭಟ್ರು ಈಗಾಗಲೇ ಅದಕ್ಕೆ ಗೊತ್ತುಪಡಿಸಿದ ಜಾಗದಲ್ಲಿ, ಆ ವನಕ್ಕೆ ಸಂಬಂಧಿಸಿದ ಸಸ್ಯಗಳನ್ನು ನೆಟ್ಟು ಪೋಷಿಸಿದ್ದಾರೆ. ತಮ್ಮ ಸೊಪ್ಪಿನ ಬೆಟ್ಟದಲ್ಲಿ ಬೆಳಕಿನ ಪ್ರಮಾಣವನ್ನು ಪರಿಗಣಿಸಿ ಸಸ್ಯಗಳನ್ನು ಆಯ್ಕೆ ಮಾಡಿಕೊಂಡು, ಮಾರ್ಗದರ್ಶಕರ ನಿರ್ದೇಶನದಂತೆ ಸಸ್ಯ ಪೋಷಣೆಯಲ್ಲಿ ಸಕ್ರಿಯವಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಅಲ್ಲದೇ ಮಾರುಕಟ್ಟೆಯಲ್ಲಿ ಸದಾಕಾಲ ಬೇಡಿಕೆಯಿರುವ ಹಾಗೂ ಪ್ರಕೃತಿಯ ನಿಯಮಗಳಿಗೆ ಧಕ್ಕೆಯಾಗದ ಸಸ್ಯಗಳನ್ನೇ ಆಯ್ಕೆ ಮಾಡಿಕೊಂಡಿದ್ದು ವಿಶೇಷ. ಇನ್ನು ಸ್ಥಳೀಯ ಪಶು-ಪಕ್ಷಿಗಳಿಗೆ ಆಹಾರ ಆಗಿರುವ ಸಸ್ಯಗಳನ್ನು ಉಳಿಸಿಕೊಂಡು, ಅವುಗಳು ಸೇವಿಸದ ಸಸ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿರುವ ಬಾಬು ಅವರು ಬಹಳ ಜಾಣ್ಮೆ, ಚಾಣಾಕ್ಷತನದಿಂದ ಅಶೋಕ ವನವನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ.

**ಪ್ರತೀ ದಿನವೂ ಬೇಡಿಕೆ!**

ಈಗಿನ ಯಾಂತ್ರಿಕ ಬದುಕಿನ ಜಂಜಾಟದ ಜೀವನದಲ್ಲಿ ಪ್ರತಿಯೊಬ್ಬರು ಒತ್ತಡದಲ್ಲಿ ದಿನ ಕಳೆಯುತ್ತಿದ್ದಾರೆ. ಹಾಗೇ ನೋಡಲು ಹೋದರೆ ಈ ಕಾಲದ ಜನ ಸಮೂಹ ಒಂದಲ್ಲಾ ಒಂದು ಕಾಯಿಲೆಗೆ ಸಿಲುಕಿಕೊಂಡಿದ್ದಾರೆ. ಅನೇಕ ರೋಗಗಳಿಗೆ ಸಸ್ಯ ಸಂಪತ್ತೇ ರಾಮಬಾಣವಾಗಿದೆ. ಹೀಗಾಗಿ ಈ ದಿನದಲ್ಲಿ ಔಷಧ ಸಸ್ಯಗಳಿಗೆ ಪ್ರತೀ ದಿನವೂ ಬೇಡಿಕೆಯಿದೆ ಎನ್ನುತ್ತಾರೆ ಪ್ರಕಾಶ ಭಟ್ರು. ಇವರ ಅಶೋಕ ವನದಲ್ಲಿ ಕ್ಯಾನ್ಸರ್, ಉದರ ರೋಗ, ಡಯಾಬಿಟಿಸ್, ಚರ್ಮರೋಗ.... ಹೀಗೆ ವಿಭಿನ್ನ ರೋಗಗಳನ್ನು ಗುಣಪಡಿಸುವ ಸಸ್ಯ ಪ್ರಬೇಧಗಳು ಇಲ್ಲಿವೆ.


ಕಳೆದೆರಡು ವರುಷದ ಹಿಂದೆ ಸಣ್ಣ ಪ್ರಮಾಣದಲ್ಲಿ ಆರಂಭವಾದ ಪ್ರಕಾಶ ಭಟ್‌ರ ಅಶೋಕ ವನ ಈಗ ವಿಸ್ತಾರವಾಗಿ ಬೆಳೆದಿದೆ. ಇಲ್ಲಿನ ಸಸ್ಯ ಸಂಪತ್ತನ್ನು ನೋಡಲು, ಅಧ್ಯಯನ ಮಾಡಲು ಜಿಲ್ಲೆಯಲ್ಲದೇ, ಹೊರಗಿನಿಂದಲೂ ಜನಸಮೂಹ ಬರುತ್ತಿದ್ದು ಅದೀಗ ಆಕರ್ಷಣೀಯ ಕೇಂದ್ರವಾಗಿದೆ ಎಂದರೂ ತಪ್ಪಾಗಲಾರದು. ಪ್ರಕಾಶ ಭಟ್ಟರು ಕೇವಲ ಒಂದಿಷ್ಟು ಸಸ್ಯ ಪ್ರಬೇಧಗಳನ್ನು ಬೆಳೆಸಿಲ್ಲ. ಆ ಸಸ್ಯದ ಸಂಪೂರ್ಣ ಪರಿಚಯವನ್ನು ತಿಳಿದುಕೊಳ್ಳುತ್ತಿದ್ದಾರೆ. ಆ ಸಸ್ಯದ ವೈಜ್ಞಾನಿಕ ಹೆಸರಿನಿಂದ ಹಿಡಿದು, ಅದು ಯಾವುದಕ್ಕೆ ಉಪಯೋಗ ಆಗುತ್ತದೆ, ಅದರ ಕಾಯಿ/ಎಲೆಗೆ ಎಲ್ಲಿ ಮಾರುಕಟ್ಟೆಯಿದೆ; ಬೇರೆ ಬೇರೆ ಭಾಷೆಯಲ್ಲಿ ಆ ಗಿಡಕ್ಕೆ ಏನೆಂದು ಕರೆಯುತ್ತಾರೆ.... ಹೀಗೆ ಪ್ರತಿಯೊಂದನ್ನೂ ಕಲೆಹಾಕಿ ತಿಳಿದುಕೊಳ್ಳುವುದರ ಜೊತೆಗೆ ದಾಖಲಾತಿಯನ್ನು ಮಾಡಿಕೊಳ್ಳುತ್ತಿದ್ದಾರೆ.

ಇನ್ನು ಅವರು ಎಲ್ಲಿಗೇ ಹೋಗಲಿ ಅಲ್ಲಿ ಹೊಸ ಬಗೆಯ ಸಸ್ಯ ಕಂಡರೆ ಅದರ ವಿಶೇಷತೆಗಳನ್ನು ಆಸಕ್ತಿಯಿಂದ ಕೇಳಿ ಪಡೆಯುತ್ತಾರೆ. ಮತ್ತೆ ಅಂತಹ ಅಪರೂಪದ ಸಸ್ಯಗಳನ್ನು ಮುತುವರ್ಜಿಯಿಂದ ಬೆಳೆಸಲು ಕಾಳಜಿ ವಹಿಸುತ್ತಾರೆ. ತಮ್ಮ ಅಶೋಕ ವನಕ್ಕೆ ಭೇಟಿ ನೀಡುವ ಪ್ರತಿಯೊಬ್ಬರಿಗೂ ತಾವು ವಿಶ್ವಾಸದಿಂದ ಬೆಳೆಸಿದ ಎಲ್ಲ ಬಗೆಯ ಸಸ್ಯಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಇವರು "ಈ ಸಸ್ಯ/ ಬಳ್ಳಿ ಉಂಟಲ್ಲ ಅನೇಕ ಔಷಧಿಗಳಿಗೆ ಬರುತ್ತೆ. ಇಂತಹ ಕಡೆಯಲ್ಲಿ ಉತ್ತಮ ಮಾರುಕಟ್ಟೆಯೂ ಇದೆ, ನೀವೂ ಒಂದು ಗಿಡ ಬೆಳೆಸಿರಿ...." ಎಂದು ಹುರಿದುಂಬಿಸುತ್ತಾರೆ. ಔಷಧೀಯ ಸಸ್ಯಗಳ ಬಗ್ಗೆ ಆಸಕ್ತಿ ಹೊಂದಿರುವವರು ಅವರ ಮೊಬೈಲ್ ಸಂಖ್ಯೆ 8861063350 ಮೂಲಕ ಸಂಪರ್ಕಿಸಬಹುದು.



Downloaded From:www.kpscvaani.com

# ಪದಬಂಧ–44



ವಿದ್ಯಾ ಎ. ಹಾಲಭಾವಿ

## ಎಡದಿಂದ ಬಲಕ್ಕೆ

1. ಅಕ್ಕರೆ ತೋರಿದ ಹಿರಿಯ ಸಹೋದರಿ (2)
2. ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
5. ಪದರದಲ್ಲೇ ಮೋಕ್ಷವಿದೆ! (2)
6. ಹೂವಿನಲ್ಲಿನ ಸಿಹಿರಸ (4)
8. ಸತಿಯಿರುವ ಅತಿಥಿಗೃಹ! (3)
10. ಕುರು ಅಥವಾ ಬೊಕ್ಕೆ (3)
12. ಕಟ ಕಟ ಶಬ್ದ ಮಾಡುವ ಬಂಡಿ (3)
13. ಕೆಟ್ಟ ಉಪಾಯ (3)
15. ಕದವನ್ನು ಭದ್ರಪಡಿಸಲು ಉಪಯೋಗಿಸುವ ಕಬ್ಬಿಣದಸಾಧನ (3)
18. ಸೂರ್ಯನ ಇನ್ನೊಂದು ಹೆಸರು (4)
20. ಆ ಮೇಲೆ ಕಾಣಿಸಿದ ಕೂರ್ಮ! (2)
21. ಹಸೆ ಹಾಕಿದ ಜಾಗದಲ್ಲಿ ಬೆಳೆದ ಪಾಚಿ (3)
22. ಈತ ಬುದ್ಧಿವಂತ (2)

## ಮೇಲಿಂದ ಕೆಳಕ್ಕೆ

1. ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
2. ಕಮ್ಮಾರನ ಕೈ! (2)
3. ಸುಗಮವಾಗಿ ಕಿತ್ತಿರುವ ಹೂವು (2)
4. ಧಣಿಯ ನೋಡಲು ನೆರೆದಿರುವ ಗುಂಪು (3)
5. ಪತಿಯೊಳಗಿರುವ ಕಾಲಾಳು! (3)
7. ಕರದಲ್ಲಿ ಹಿಡಿದಿರುವ ಚಿಪ್ಪು (3)
9. ಸರದ ಜೊತೆಯಿರಿಸಿದ ಸಾಮಾನು (3)
10. ಜನಸಂಖ್ಯೆ ಮಿತಿಮೀರಿದಾಗ ಇದು ಆಗಲಿದೆ (2)
11. ಕಡ ಪಡೆದು ನೋಡಿದ ಸಮುದ್ರ (3)
12. ಮಹಿಳೆಯರ ಉಚಿತ ಪ್ರಯಾಣ ಯೋಜನೆ (2)
14. ಈತ ಹರೆಯದವನು (3)
15. ನೀರು ಉಕ್ಕುವ ಸ್ಥಳ (3)
16. ಕಣದಲ್ಲಿ ಸಾಧಿಸಿದ ಹತೋಟಿ! (4)
17. ಮಂದಿ ಪ್ರವೇಶಿಸಿರುವ ಗುಡಿ (3)
19. ತಿರುವು ಮುರುವಾದ ಮಾಲೆ (2)
20. ದುಃಖಕ್ಕೆ ಮೂಲವಾದ ಬಯಕೆ! (2)

### ಉತ್ತರ

**ಮೇಲಿಂದ ಕೆಳಕ್ಕೆ**

1. ಅನುಭವ 2. ಕರ 3. ಸುಮ 4. ಸಂದಣಿ 5. ಪದಾತಿ 7. ಕರಟ 9. ಸರಕು 10. ಸ್ಫೋಟ 11. ಕಡಲು 12. ಶಕ್ತಿ 14. ಯುವಕ 15. ಚಿಲುಮೆ 16. ಕಡಿವಾಣ 17. ಮಂದಿರ 19. ರಹಾ 20. ಆಸೆ

**ಎಡದಿಂದ ಬಲಕ್ಕೆ**

1. ಅಕ್ಕ 2. ಕನಸು 5. ಪರ 6. ಮಕರಂದ 8. ವಸತಿ 10. ಸ್ಫೋಟಕ 12. ಶಕಟ 13. ಕುಯುಕ್ತಿ 15. ಚಿಲುಕ 18. ದಿನಕರ 20. ಆಮೆ 21. ಹಾವಸೆ 22. ಜಾಣ

### –: ಸೂಚನೆ :–

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ತಮ್ಮ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಸಂದರ್ಭ.



ಗೃಹಜ್ಯೋತಿ ಯೋಜನೆ ಜಾರಿಗೆ ಸಂಬಂಧಿಸಿದಂತೆ ಇಂಧನ ಸಚಿವರಾದ ಕೆ.ಜೆ. ಜಾರ್ಜ್ ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆ ನಡೆಸಿದ ಸಂದರ್ಭ. ಈ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ವಂದಿತಾ ಶರ್ಮಾ ಅವರು ಉಪಸ್ಥಿತರಿದ್ದಾರೆ.

Downloaded From:www.kpscvaani.com

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26






Downloaded From:www.kpscvaani.com